# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಅಕ್ಟೋಬರ್ 24, 2021


ಸಂಪುಟ : 48 ಸಂಚಿಕೆ : 163 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com




**ಸರ್ಕಾರಿ ನೌಕರರ ಓಟ ...** ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಮೂರು ದಿನಗಳ ಕಾಲ ನಡೆಯಲಿರುವ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳು.

## ಪ್ರತಿ ಜಿಲ್ಲೆಯಲ್ಲೂ ಮಾದರಿ ಇಂಜಿನಿಯರಿಂಗ್ ಕಾಲೇಜು

ಬೆಂಗಳೂರು, ಅ. 23 - ರಾಜ್ಯದ ಪ್ರತೀ ಜಿಲ್ಲೆಯಲ್ಲೂ ತಲಾ ಒಂದು ಮಾದರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಉತ್ಕೃಷ್ಟ ಗುಣ ಮಟ್ಟದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗಿದೆ.



‘ಸೂಪರ್-30 ಎಂಜಿನಿಯರಿಂಗ್ ಕಾಲೇಜು’ ಎನ್ನುವ ಈ ವಿಶಿಷ್ಟ ಪರಿಕಲ್ಪನೆಯ ಯೋಜನೆಗೆ, ಈಗಾಗಲೇ ಅಸ್ತಿತ್ವದಲ್ಲಿದ್ದು ಶೈಕ್ಷಣಿಕವಾಗಿ ಸಾಧಾರಣ ಸಾಧನೆ ಮಾಡುತ್ತಿರುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೇ ಆದ್ಯತೆ ಕೊಡಲಾಗುವುದು. ”

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಎಂಜಿನಿಯರಿಂಗ್ ಮಾಡಬೇಕೆಂಬ ಆಸೆಯುಳ್ಳ ವಿದ್ಯಾರ್ಥಿಗಳು ತಮ್ಮ ಜಿಲ್ಲೆಗಳಲ್ಲೇ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ಪಡೆಯುವಂತಾಗಬೇಕು. ಈ ಮೂಲಕ ಶಿಕ್ಷಣವು ದುಬಾರಿಯಾಗುವುದನ್ನು ಮತ್ತು ಉನ್ನತ ಶಿಕ್ಷಣಕ್ಕಾಗಿ ನಗರಗಳ ಕೆಲವೇ ಕಾಲೇಜುಗಳತ್ತ ವಿದ್ಯಾರ್ಥಿಗಳು ವಲಸೆ ಬರುವುದನ್ನು ತಡೆಯುವ ಆಶಯ ಸರ್ಕಾರದ್ದು ಎಂದು ಸಚಿವರು ಪ್ರತಿಪಾದಿಸಿದ್ದಾರೆ.

‘ಸೂಪರ್-30’ ಯೋಜನೆಯಡಿ ಆಯ್ಕೆಯಾಗುವ ಎಲ್ಲ ಕಾಲೇಜುಗಳಲ್ಲೂ ಉದ್ಯಮ ರಂಗದ ಬೇಡಿಕೆಗೆ ತಕ್ಕಂತೆ ಆರಂಭದಲ್ಲಿ ಕನಿಷ್ಠ ಒಂದು ವಿಭಾಗವನ್ನಾದರೂ (ಕಂಪ್ಯೂಟರ್ ಸೈನ್ಸ್‌ಗೆ ಮೊದಲ ಆದ್ಯತೆ) ವಿಶ್ವ ದರ್ಜೆಯ ಗುಣಮಟ್ಟಕ್ಕೆ ತರಲಾಗುವುದು. ಈ ಉಪಕ್ರಮದಡಿ ಕಟ್ಟಡಗಳ ನಿರ್ಮಾಣಕ್ಕಾಗಲೀ, ಹೊಸ ಕಾಲೇಜುಗಳನ್ನು ತೆರೆಯುವುದಕ್ಕಾಗಲೀ ಅವಕಾಶವಿಲ್ಲ. ಕೇವಲ ಬೋಧನಾ ಗುಣಮಟ್ಟ ಸುಧಾರಣೆ, ಪ್ರಯೋಗಾಲಯಗಳ ಸ್ಥಾಪನೆ, ವಿದೇಶಿ ಶಿಕ್ಷಣ ಸಂಸ್ಥೆ ಹಾಗೂ ಉದ್ಯಮಗಳ ಸಹಭಾಗಿತ್ವಕ್ಕೆ ಮನ್ನಣೆ ಕೊಡಲಾಗುವುದು. ಮುಂದಿನ ಹಂತಗಳಲ್ಲಿ ಕಾಲೇಜುಗಳ ಉಳಿದ ವಿಭಾಗಗಳಿಗೂ ಇದನ್ನು ವಿಸ್ತರಿಸಲಾಗುವುದು ಎಂದು ಅಶ್ವತ್ಥನಾರಾಯಣ ಹೇಳಿದರು.

ಯೋಜನೆಯ ಜಾರಿಗೆ ರಚಿಸಲಾಗುವ ಸಮಿತಿಯಲ್ಲಿ ಶಿಕ್ಷಣ ತಜ್ಞರು ಮತ್ತು ಉದ್ಯಮಿಗಳು ಇರುತ್ತಾರೆ. ಇದಕ್ಕಾಗುವ (6ನೇ ಪುಟಕ್ಕೆ)

## ಒಂದೂವರೆ ವರ್ಷದಲ್ಲಿ ಪೆಟ್ರೋಲ್ 36 ರೂ. ಏರಿಕೆ

ನವದೆಹಲಿ, ಅ. 23 – ಕಳೆದ 18 ದಿನಗಳಲ್ಲಿ ಲೀಟರ್ ಪೆಟ್ರೋಲ್ ಬೆಲೆ 36 ರೂ. ಹಾಗೂ ಡೀಸೆಲ್ ಬೆಲೆ 26.58 ರೂ. ಹೆಚ್ಚಾಗಿದೆ. ಮೇ 2020ರ ನಂತರ ತೆರಿಗೆ ದರ ಹೆಚ್ಚಿಸಿರುವುದು ಹಾಗೂ ಕಚ್ಚಾ ತೈಲ ಬೆಲೆ ಏರಿಕೆಯಾಗಿರುವುದು ಇದಕ್ಕೆ ಕಾರಣವಾಗಿದೆ.

ಶನಿವಾರ ಸಹ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಲೀಟರ್‌ಗೆ 35 ಪೈಸೆ ಹೆಚ್ಚಿಸಲಾಗಿದೆ. ಕಳೆದ ವರ್ಷ ಮೇ ನಂತರ ಸರ್ಕಾರ ಪೆಟ್ರೋಲ್ ಮೇಲಿನ ಅಬಕಾರಿ ತೆರಿಗೆಯನ್ನು ಲೀಟರ್‌ಗೆ 35.98 ರೂ.ಗಳಷ್ಟು ಭಾರೀ ಪ್ರಮಾಣಕ್ಕೆ ತಂದು ನಿಲ್ಲಿಸಿದೆ. ಡೀಸೆಲ್ ಮೇಲಿನ ತೆರಿಗೆ ಲೀಟರ್‌ಗೆ 26.58 ರೂ. ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 19 ಡಾಲರ್‌ಗಳವರೆಗೂ ಕುಸಿದಿತ್ತು. ಈ ಸಂದರ್ಭದಲ್ಲಿ ಬೆಲೆ ಇಳಿಕೆಯ ಲಾಭ ಜನರಿಗೆ ವರ್ಗಾವಣೆಯಾಗುವುದನ್ನು ತಡೆಯಲು ಸರ್ಕಾರ ತೆರಿಗೆ ಹೆಚ್ಚಳ ಮಾಡಿತ್ತು. ನಂತರದಲ್ಲಿ ಕಚ್ಚಾ ತೈಲದ ಬೆಲೆ ನಿರಂತರವಾಗಿ ಏರಿಕೆಯಾಗುತ್ತಾ ಬಂದು ಈಗ 85 ಡಾಲರ್‌ಗಳಿಗೆ ತಲುಪಿದೆ.


ತೆರಿಗೆ ಹೆಚ್ಚಳದಿಂದ ಬರುವ ಆದಾಯವನ್ನು ಸರ್ಕಾರ ಕೊರೊನಾ ಲಸಿಕೆ, ಮಧ್ಯಾಹ್ನದ ಬಿಸಿಯೂಟ ಹಾಗೂ ಲಕ್ಷಾಂತರ ಜನರಿಗೆ ಅಡುಗೆ ಅನಿಲ ನೀಡಲು ಬಳಸುತ್ತಿದೆ. ಹೀಗಿರುವಾಗ ತೆರಿಗೆ ಕಡಿತ ಕಾಲ ಮೇಲೆ ಕೊಡಲಿ ಹಾಕಿಕೊಂಡಂತೆ ಎಂದು ಕೇಂದ್ರ ತೈಲ ಸಚಿವ ಹರ್‌ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ವರ್ಷದ ಹಿಂದೆ ಪೆಟ್ರೋಲ್ ಹಾಗೂ ಡೀಸೆಲ್‌ಗಳಿಂದ ಕೇಂದ್ರ ಸರ್ಕಾರ ಸಂಗ್ರಹಿಸುತ್ತಿದ್ದ ತೆರಿಗೆ 1.78 ಲಕ್ಷ ಕೋಟಿ ರೂ. ಆಗಿತ್ತು. ಅದೀಗ ಶೇ.88ರಷ್ಟು ಹೆಚ್ಚಳವಾಗಿ 3.35 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದು ಕಳೆದ ಜುಲೈನಲ್ಲಿ ಕೇಂದ್ರ ಪೆಟ್ರೋಲ್ ಹಾಗೂ ನೈಸರ್ಗಿಕ ಅನಿಲ ಖಾತೆ ಅಧೀನ ಸಚಿವ ರಾಮೇಶ್ವರ್ ತೇಲಿ ಅವರು ಸಂಸತ್ತಿಗೆ ತಿಳಿಸಿದ್ದರು. ಕೊರೊನಾಗೆ ಮುಂಚೆ ತೈಲದಿಂದ ಬರುತ್ತಿದ್ದ ತೆರಿಗೆ ಪ್ರಮಾಣ 2.13 ಲಕ್ಷ ಕೋಟಿ ರೂ. ಆಗಿತ್ತು.

## ಉಪ ಚುನಾವಣೆ ಆಡಳಿತ ಸ್ತಬ್ಧ

ಬೆಂಗಳೂರು, ಅ. 23 - ಸಿಂಧಗಿ ಹಾಗೂ ಹಾನಗಲ್ ಕ್ಷೇತ್ರಗಳ ಉಪಚುನಾವಣೆಯಿಂದ ಇಡೀ ಆಡಳಿತ ಸ್ತಬ್ದಗೊಂಡಿದೆ.

ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಬಿಜೆಪಿ ಇಡೀ ಮಂತ್ರಿ ಮಂಡಲವನ್ನು ಪ್ರಚಾರದ ಅಖಾಡಕ್ಕೆ ಇಳಿಸಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಬಹುತೇಕ ಸಚಿವರು ಎರಡೂ ಕ್ಷೇತ್ರಗಳಲ್ಲಿ ಬಿಡಾರ ಹೂಡಿದ್ದಾರೆ. ಇದರಿಂದ ಕಳೆದ ಒಂದು ವಾರದಿಂದ ಆಡಳಿತ ಶಕ್ತಿ ಕೇಂದ್ರ ವಿಧಾನಸೌಧ ಮತ್ತು ಸೆಕ್ರೆಟ್ರಿಯೇಟ್ ಸಂಪೂರ್ಣವಾಗಿ ನಿರ್ಲಿಪ್ತವಾಗಿದೆ. ಒಂದೆಡೆ ಸರಣಿ ಮಾದರಿಯಲ್ಲಿ ರಜೆ, ಮತ್ತೊಂದೆಡೆ ತಮ್ಮನ್ನು ಆಳುವವರು ಶಕ್ತಿ ಕೇಂದ್ರದಿಂದ ದೂರ ಉಳಿದಿರುವುದರಿಂದ ಜನಸಾಮಾನ್ಯರ ಕಷ್ಟ ಸುಖಗಳನ್ನು ಕೇಳುವವರೇ ಇಲ್ಲದಂತಾಗಿದೆ.

ಕಡತಗಳಿಗೆ ಮೋಕ್ಷ ದೊರೆಯದೇ ಅಧಿಕಾರಿಗಳ ಮೇಜಿನ ಮೇಲೆ ಎತ್ತರಕ್ಕೆ ಬೆಳೆದು ನಿಂತಿದೆ. ಕೊರೊನಾ ಸೋಂಕು ಕಡಿಮೆಯಾಗು ತ್ತಿದ್ದಂತೆ, ಸಚಿವರುಗಳು ತಮ್ಮ ದೈನಂದಿನ ಕಾರ್ಯ (6ನೇ ಪುಟಕ್ಕೆ)

## ಚೆನ್ನಮ್ಮನ ಹೋರಾಟ ಯುವಪೀಳಿಗೆಗೆ ಸ್ಫೂರ್ತಿ

### ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಬೀಳಗಿ

ದಾವಣಗೆರೆ, ಅ. 23- ಕಿತ್ತೂರು ರಾಣಿ ಚೆನ್ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಪ್ರಥಮ ವೀರ ಮಹಿಳೆ. ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಪ್ರಾಣ ತ್ಯಾಗ ಮಾಡಿದ ಮಹಾನ್ ಚೇತನರ ಜೀವನ ಚರಿತ್ರೆ ಇಂದಿನ ಯುವಪೀಳಿಗೆಗೆ ಸ್ಫೂರ್ತಿಯಾಗಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶನಿವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 243ನೇ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಹಿನ್ನೆಲೆಯಲ್ಲಿ ಚನ್ನಮ್ಮನ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಅವರು ಮಾತನಾಡಿದರು.



ನಾವು ಇಂದು ಸ್ವತಂತ್ರವಾಗಿ ಜೀವಿಸುತ್ತಿದ್ದೇವೆ ಎಂದರೆ ನಮ್ಮ ದೇಶದ ಮಹಾನ್ ನಾಯಕರ ಹೋರಾಟ, ತ್ಯಾಗ ಮತ್ತು ಬಲಿದಾನವೇ ಕಾರಣ. ಚೆನ್ನಮ್ಮ ತನ್ನ ದಕ್ಷ ಆಡಳಿತದಿಂದ ಬ್ರಿಟಿಷರ ವಿರುದ್ಧ ಹೋರಾಡಿ ತನ್ನ ಪ್ರಾಣಾರ್ಪಣೆ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದ ವೀರ ವನಿತೆ. ಇಂತಹ ಮಾತೆ ಜನಿಸಿದ ನಾಡಿನಲ್ಲಿ ನಾವು (4ನೇ ಪುಟಕ್ಕೆ)

## ಕಾಂಗ್ರೆಸ್ ಸದಸ್ಯತ್ವ ಬೇಕೇ ? ಮದ್ಯ-ಮಾದಕದಿಂದ ದೂರವಿರಿ!

ನವದೆಹಲಿ, ಅ. 23 – ಕಾಂಗ್ರೆಸ್ ತನ್ನ ಪ್ರಾಥಮಿಕ ಸದಸ್ಯತ್ವಕ್ಕಾಗಿ ಆಹ್ವಾನ ನೀಡಿದೆ. ಆದರೆ, ಸದಸ್ಯತ್ವ ಪಡೆಯಲು ಬಯಸುವವರು ಮದ್ಯ – ಮಾದಕದಿಂದ ದೂರವಿರಬೇಕು ಹಾಗೂ ಪಕ್ಷದ ನೀತಿಗಳನ್ನು ಸಾರ್ವಜನಿಕ ವಲಯದಲ್ಲಿ ಟೀಕಿಸುವುದಿಲ್ಲ ಎಂಬ ಬದ್ಧತೆ ಹೊಂದಿರಬೇಕು ಎಂದು ಪಕ್ಷ ತಿಳಿಸಿದೆ.

ಪಕ್ಷ ಪ್ರಕಟಿಸಿರುವ ಸದಸ್ಯತ್ವ ಅರ್ಜಿಯ ಪ್ರಕಾರ, ನೂತನ ಸದಸ್ಯರು ಕಾನೂನು ಮಿತಿಗಿಂತ ಹೆಚ್ಚು ಆದಾಯ ಹೊಂದಿಲ್ಲ ಹಾಗೂ ಪಕ್ಷ ತಿಳಿಸಿದ ರೀತಿಯಲ್ಲಿ ದೈಹಿಕ ಶ್ರಮಕ್ಕೆ ಮುಂದಾಗಲು ಬದ್ಧತೆ ಹೊಂದಿರಬೇಕು.

ಇದು ಹಳೆಯ ಅರ್ಜಿಯಾಗಿದೆ ಹಾಗೂ ನಮ್ಮ ಪಕ್ಷದ ಸಂವಿಧಾನದ ಭಾಗವಾಗಿದೆ. ಹೊಸಬರೂ ಸೇರಿದಂತೆ ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಈ ನಿಯಮಗಳನ್ನು ಪಾಲಿಸಬೇಕು ಎಂದು ನಿರೀಕ್ಷಿಸುತ್ತೇವೆ ಎಂದು ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷ ನವೆಂಬರ್ 1ರಿಂದ ಸದಸ್ಯತ್ವ ಅಭಿಯಾನ ಆರಂಭಿಸಲಿದೆ. ಮುಂದಿನ (4ನೇ ಪುಟಕ್ಕೆ)

## 100 ಕೋಟಿ ಲಸಿಕೆ ನಮ್ಮ ಹೆಗ್ಗಳಿಕೆ

### ಕೊರೊನಾ ಸೇನಾನಿಗಳನ್ನು ಗೌರವಿಸಿದ ಸಂಸದ ಜಿ.ಎಂ. ಸಿದ್ದೇಶ್ವರ



ದಾವಣಗೆರೆ, ಅ.23- ಪ್ರಧಾನಿ ಮೋದಿ ಅವರು ದಿಟ್ಟತನದಿಂದ ಇಡೀ ಪ್ರಪಂಚದಲ್ಲಿಯೇ 100 ಕೋಟಿ ಡೋಸ್ ಲಸಿಕೆ ನೀಡಿರುವುದು ಭಾರತದ ಹೆಗ್ಗಳಿಕೆಯಾಗಿದೆ. ಲಸಿಕೆ ಮುಖೇನ ಕೊರೊನಾ ಮಹಾಮಾರಿಯಿಂದ ದೇಶವನ್ನು ರಕ್ಷಿಸಿದ್ದಾರೆ ಎಂದು ಸಂಸದ ಡಾ. ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಅವರು, ಇಂದು ನಗರದ ಜಿಲ್ಲಾಸ್ಪತ್ರೆಯಲ್ಲಿ ಜಿಲ್ಲಾ ಬಿಜೆಪಿಯಿಂದ ಕೊರೊನಾ ಸೇನಾನಿಗಳನ್ನು ಸನ್ಮಾನಿಸಿ ಮಾತನಾಡುತ್ತಾ, ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ದೇಶಾದ್ಯಂತ ಲಸಿಕೆ ಹಾಕುತ್ತಿದ್ದೇವೆ. ಜಿಲ್ಲೆಯಲ್ಲಿ ಈವರೆಗೆ 14.50 ಲಕ್ಷ ಜನ ಲಸಿಕೆ ಪಡೆದಿದ್ದು, ಶೇ.82 ರಷ್ಟು ಜನ ಲಸಿಕೆ ಪಡೆದಂತಾಗಿದೆ. ಆದರೆ, ಜಿಲ್ಲೆಯ ಕೆಲವೆಡೆ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ ಎಂದು ಹೇಳಿದರು.

ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿಯಲ್ಲಿ ಲಸಿಕೆ ಪಡೆಯುವವರು 8 ಸಾವಿರ ಜನರಿದ್ದಾರೆ. ಆದರೆ, 2 ಸಾವಿರ ಜನರು ಮಾತ್ರ ಲಸಿಕೆ ಪಡೆದಿದ್ದಾರೆ. ದಾವಣಗೆರೆಯ ಆಜಾದ್ ನಗರ, ಭಾಷಾ ನಗರದಲ್ಲಿ ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸುತ್ತಿದ್ದಾರೆ ಎಂದು ಬೇಸರಿಸಿದರು.

ಚೀನಾ, ಆಸ್ಟ್ರೇಲಿಯಾ, ಅಮೆರಿಕಾದಲ್ಲಿ ಮೂರನೇ ಅಲೆ ಆಗಲೇ ಆರಂಭವಾಗಿದೆ. ಹೀಗಾಗಿ ಕೊರೊನಾ ಹೋಗಿದೆ ಎಂದು ಯಾರೂ ಮೈಮರೆಯದೇ ಜಾಗೃತರಾಗಬೇಕು. ಉದಾಸೀನ ಮಾಡದೇ ಪ್ರತಿಯೊಬ್ಬರೂ ಲಸಿಕೆ ಪಡೆದು ಜೀವ ಉಳಿಸಿಕೊಳ್ಳುವುದರ ಜೊತೆಗೆ ದೇಶವನ್ನು ಉಳಿಸಬೇಕೆಂದು ಕಿವಿಮಾತು ಹೇಳಿದರು.

ಕೊರೊನಾ ವಾರಿಯರ್‌ಗಳು ಜೀವದ ಹಂಗು ತೊರೆದು ಜನರ ಪ್ರಾಣ ರಕ್ಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೊರೊನಾ ಸೇನಾನಿಗಳನ್ನು ಸತ್ಕರಿಸುತ್ತಿದ್ದೇವೆ ಎಂದರು. ಇದೇ ವೇಳೆ ಸಂಸದ ಸಿದ್ದೇಶ್ವರ, ಶಾಸಕ (4ನೇ ಪುಟಕ್ಕೆ)


## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಬೀರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಚಂದ್ರಗುತ್ತೆಮ್ಮದೇವಿ ಪ್ರಸನ್ನ ॥


ಶ್ರೀಮದ್ ರೇವಣಸಿದ್ದೇಶ್ವರ ಸಿಂಹಾಸನಾಧೀಶ್ವರ ಪರಮಪೂಜ್ಯ ಜಗದ್ಗುರು

ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಕನಕ ಗುರುಪೀಠ, ಕಾಗಿನೆಲೆ ಇವರ ಕೃಪಾಶೀರ್ವಾದದೊಂದಿಗೆ

ದಾವಣಗೆರೆ ಸಿಟಿ ವಾಸಿ **ಶ್ರೀಮತಿ ಗೌಡ್ರು ಸಾವಿತ್ರಮ್ಮ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 04-10-2021ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ನನ್ನ ಪೂಜ್ಯ ಪತಿಯವರಾದ



ಜನನ : 05-02-1958

ಮರಣ : 04-10-2021

### ಶ್ರೀ ಗೌಡ್ರು ರೇವಣಸಿದ್ದಪ್ಪನವರು

ದಾವಣಗೆರೆಯ ಚೌಡೇಶ್ವರಿ ನಗರ ಸಂಸ್ಥಾಪಕರು, ಕುರುಬ ಸಮಾಜದ ಮುಖಂಡರು ಹಾಗೂ ಶ್ರೀ ಬೋಳಚಟ್ಟಿ ಚೌಡೇಶ್ವರಿ ದೇವಸ್ಥಾನದ ಅಧ್ಯಕ್ಷರು, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಾಬುದಾರರು, ಕಾಂಗ್ರೆಸ್ ಮುಖಂಡರು

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

‘ಕೈಲಾಸ ಸಮಾರಾಧನೆ’ಯನ್ನು ದಿನಾಂಕ 24-10-2021ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ

ಮಾರ್ಕಂಡೇಶ್ವರ ಕಲ್ಯಾಣ ಮಂಟಪ, ಎಸ್.ಕೆ.ಪಿ. ರಸ್ತೆ, ದುಗ್ಗಮ್ಮ ಸರ್ಕಲ್, ದಾವಣಗೆರೆ

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ ಶ್ರೀಮತಿ ಗೌಡ್ರು ಸಾವಿತ್ರಮ್ಮ ಮತ್ತು ಮಕ್ಕಳು
ಅಳಿಯಂದಿರು, ಮೊಮ್ಮಕ್ಕಳು, ಗೌಡ್ರು ವಂಶಸ್ಥರು
ಚೌಡೇಶ್ವರಿ ನಗರದ ನಾಗರಿಕರು, ದುಗ್ಗಮ್ಮ ದೇವಸ್ಥಾನ ಧರ್ಮದರ್ಶಿಗಳು
ಹಾಗೂ ಬಂಧು-ಮಿತ್ರರು. ಮೊ. : 98440 69804


## ಸಾಲ ಪಡೆದ ಗ್ರಾಹಕರಿಗೆ ಕಡಿಮೆ ಬಡ್ಡಿ ದರಕ್ಕೆ ಚಿಂತನೆ

**✦ ದಾವಣಗೆರೆ ಅರ್ಬನ್ ಬ್ಯಾಂಕಿನಿಂದ ಶೀಘ್ರ ಸಿಹಿ ಸುದ್ದಿ ✦ ಸದಸ್ಯರಿಗೆ ಶೇ. 15ರಂತೆ ಲಾಭಾಂಶ**




**ಬ್ಯಾಂಕಿನ 60ನೇ ವರ್ಷದ ವರ್ಚ್ಯುಯಲ್ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಘೋಷಣೆ**

ದಾವಣಗೆರೆ,ಅ.23- ತಮ್ಮ ಬ್ಯಾಂಕಿನಲ್ಲಿ ಸಾಲ ಪಡೆದ ಗ್ರಾಹಕರಿಗೆ ಬಡ್ಡಿಯಲ್ಲಿ ಕಡಿಮೆ ಮಾಡುವ ಚಿಂತನೆ ನಡೆದಿದ್ದು, ಒಂದೆರಡು ತಿಂಗಳಲ್ಲಿ ಸಾಲ ಪಡೆದ ಗ್ರಾಹಕರಿಗೆ ಸಿಹಿ ಸುದ್ದಿ ನೀಡಲಾಗುವುದು ಎಂದು ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ತಿಳಿಸಿದ್ದಾರೆ.

ನಗರದಲ್ಲಿ ಇಂದು ನಡೆದ ದಾವಣಗೆರೆ ಅರ್ಬನ್ ಕೋ - ಆಪರೇಟಿವ್ ಬ್ಯಾಂಕಿನ 60ನೇ ವರ್ಷದ ವರ್ಚ್ಯುಯಲ್ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಲಾಭವನ್ನೇ ಗುರಿಯಾಗಿಸಿಕೊಳ್ಳದೇ, ಲಾಭದ ಜೊತೆ - ಜೊತೆಗೆ ಸಾಲವನ್ನು ಪಡೆದು ಸಮರ್ಪಕವಾಗಿ ಮರು ಪಾವತಿಸುವ ಗ್ರಾಹಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಅಂತಹ ಗ್ರಾಹಕರಿಗೆ ಬಡ್ಡಿ ದರವನ್ನು ಕಡಿಮೆ ಮಾಡಲುದ್ದೇಶಿಸಲಾಗಿದೆ ಎಂದು ಅವರು ಹೇಳಿದರು.

ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸ್ಪರ್ಧೆ ಮಾಡುವ ನಿಟ್ಟಿನಲ್ಲಿ ಸಾಲ ಪಡೆದ ಗ್ರಾಹಕರಿಗೆ ಪ್ರೋತ್ಸಾಹ ನೀಡಿದ್ದಲ್ಲಿ ಬ್ಯಾಂಕನ್ನು ಅಭಿವೃದ್ಧಿಯ ಮುಂಚೂಣಿಗೆ ಕೊಂಡೊಯ್ಯಬಹುದು ಎಂಬ ಅಭಿಪ್ರಾಯ ಗ್ರಾಹಕರಿಂದ ಬಂದ ಸಲಹೆಯನ್ನು ಸ್ವೀಕರಿಸಲಾಗಿದ್ದು, ಈ ವಿಚಾರವನ್ನು ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಪರಿಶೀಲನೆ ನಡೆಸುವ ದಿಕ್ಕಿನಲ್ಲಿ ಸಾಗಿದೆ ಎಂದು ಬಕ್ಕೇಶಪ್ಪ ತಿಳಿಸಿದರು.

ಕೋವಿಡ್ - 19 ಸಂದರ್ಭದಲ್ಲಿ ಆದ ಲಾಕ್‌ಡೌನ್‌ನಿಂದಾಗಿ ವರ್ತಕರು ಸಂಕಷ್ಟಕ್ಕೀಡಾಗಿದ್ದನ್ನು ಗಮನಿಸಿ, ತಮ್ಮ ಬ್ಯಾಂಕಿನಲ್ಲಿ ಸಾಲ ಪಡೆದ ಗ್ರಾಹಕರಿಗೆ ಸಹಕರಿಸುವ ಸದುದ್ದೇಶದಿಂದ ಬ್ಯಾಂಕಿನ ಲಾಭವನ್ನು ಮುಖ್ಯವಾಗಿರಿಸಿಕೊಳ್ಳದೇ ಗ್ರಾಹಕರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸುಮಾರು 1 ಕೋಟಿಗೂ ಹೆಚ್ಚು ರೂ. ಲಾಭದಲ್ಲಿ ನಷ್ಟವಾಗಿದ್ದರೂ (2ನೇ ಪುಟಕ್ಕೆ)

# 9 ತಿಂಗಳಲ್ಲೇ 100 ಕೋಟಿ ಲಸಿಕೆ : ಗಮನಾರ್ಹ ಸಾಧನೆ

## ದೇವರಬೆಳಕೆರೆ, ಕೆ. ಬೇವಿನಹಳ್ಳಿ, ಬೆಳ್ಳೂಡಿಯಲ್ಲಿ ಬಿಜೆಪಿಯಿಂದ ವೈದ್ಯರಿಗೆ, ಸಿಬ್ಬಂದಿಗಳಿಗೆ ಸನ್ಮಾನ





ಮಲೇಬೆನ್ನೂರು, ಅ. 23- ದೇಶದ 100 ಕೋಟಿ ಜನರಿಗೆ ಕೊರೊನಾ ಲಸಿಕೆ ನೀಡಿರುವುದಕ್ಕೆ ದೇಶದೆಲ್ಲೆಡೆ ಬಿಜೆಪಿಯಿಂದ ಸಂಭ್ರಮಾಚರಣೆ ಆಚರಿಸಲಾಗುತ್ತಿದ್ದು, ಈ ವೇಳೆ ಕೊರೊನಾ ವಾರಿಯರ್‌ಗಳಾದ ವೈದ್ಯರಿಗೆ ಮತ್ತು ಸಿಬ್ಬಂದಿಗೆ ಸನ್ಮಾನ ಮಾಡಲಾಗುತ್ತಿದೆ ಎಂದು ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ತಿಳಿಸಿದರು.

ಶನಿವಾರ ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಘಟಕದ ವತಿಯಿಂದ ವೈದ್ಯಾಧಿಕಾರಿ ಡಾ. ರಮೇಶ್, ಆರೋಗ್ಯ ನಿರೀಕ್ಷಣಾಧಿಕಾರಿ ಆದರ್ಶ ಸೇರಿದಂತೆ, ಸಿಬ್ಬಂದಿ ವರ್ಗದವರಿಗೆ, ಆಶಾ ಕಾರ್ಯಕರ್ತೆಯರಿಗೆ ಸನ್ಮಾನಿಸಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಇಚ್ಛಾಶಕ್ತಿಯಿಂದಾಗಿ ಕೇವಲ 9 ತಿಂಗಳ ಅವಧಿಯಲ್ಲಿ ದೇಶದ 100 ಕೋಟಿ ಜನರಿಗೆ ಲಸಿಕೆ ನೀಡಲು ಸಾಧ್ಯವಾಗಿದೆ. ರಾಜ್ಯದಲ್ಲೂ ಸಹ ಸುಮಾರು 6 ಕೋಟಿ ಲಸಿಕೆ ನೀಡಲಾಗಿದೆ ಎಂದು ವಾಗೀಶ್ ಸ್ವಾಮಿ ಹೇಳಿದರು.

ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪ್ರಧಾನ ಕಾರ್ಯ ದರ್ಶಿ ಆದಾಪುರ ವೀರೇಶ್, ದೇವರಬೆಳಕೆರೆ ಗ್ರಾ.ಪಂ. ಅಧ್ಯಕ್ಷರಾದ ಗೀತಾ ಪರಶುರಾಮಪ್ಪ, ಉಪಾ ಧ್ಯಕ್ಷರಾದ ಮಹೇಶ್ವರಮ್ಮ ವಾಗೀಶ್, ಸದಸ್ಯರಾದ ಐ. ಎಸ್. ಮಲ್ಲಿಕಾರ್ಜುನಪ್ಪ, ಎಸ್.ಹೆಚ್. ಚಂದ್ರಪ್ಪ, ತಿಪ್ಪೇಶ್, ಶಿವರಾಜ್, ನಾಗ ರಾಜ್, ಕರಿಬಸಪ್ಪ, ಚಂದ್ರಮ್ಮ, ಪಿಡಿಓ ಶಿವಪ್ಪ ಬಿರಾದಾರ್ ಹಾಗೂ ಗ್ರಾಮಸ್ಥರು, ಮಲೇಬೆನ್ನೂರು ಪುರಸಭೆ ನಾಮಿನಿ ಸದಸ್ಯ ಪಿ.ಆರ್. ರಾಜು ಈ ವೇಳೆ ಉಪಸ್ಥಿತರಿದ್ದರು.

ನಂತರ ವಾಗೀಶ್ ಸ್ವಾಮಿ, ಹಿಂಡಸಗಟ್ಟಿ ಲಿಂಗರಾಜ್, ಆದಾಪುರ ವೀರೇಶ್, ಪಿ.ಆರ್. ರಾಜು ಅವರು ಕೆ. ಬೇವಿನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಡಾ. ಪ್ರಶಾಂತ್ ಹಾಗೂ ಸಿಬ್ಬಂದಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ ಮತ್ತು ಬೆಳ್ಳೂಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ವೈದ್ಯಾಧಿಕಾರಿ ಡಾ. ಶಿಲ್ಪಾ ನಾಯಕ್, ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತರನ್ನು ಸನ್ಮಾನಿಸಿ, ಅಭಿನಂದಿಸಿದರು.

# ಚಿತ್ರದುರ್ಗ - ಚಿಕ್ಕಜಾಜೂರು ವಿದ್ಯುದೀಕರಣ ಕಾಮಗಾರಿಯ ತಪಾಸಣೆ





ದಾವಣಗೆರೆ, ಅ. 23 - ರೈಲ್ವೆಯ ದಕ್ಷಿಣ ವೃತ್ತದ ರೈಲ್ವೆ ಸುರಕ್ಷಾ ಆಯುಕ್ತ ಎ.ಕೆ.ರೈ ಅವರು ಚಿತ್ರದುರ್ಗ - ಚಿಕ್ಕಜಾಜೂರು ಬ್ರಾಡ್‌ಗೇಜ್ ವಿಭಾಗದ ವಿದ್ಯುದೀಕರಣ ಕಾಮಗಾರಿಯ ತಪಾಸಣೆ ನಡೆಸಿದರು. ಈ ಯೋಜನೆ ಒಟ್ಟು 159.34 ಕೋಟಿ ರೂ. ಮೊತ್ತದ್ದಾಗಿದೆ.

ಭಾರತೀಯ ರೈಲ್ವೆಯನ್ನು 'ಹಸಿರು ರೈಲ್ವೆ'ಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಡಿಸೆಂಬರ್ 2023 ರ ವೇಳೆಗೆ ಬ್ರಾಡ್ ಗೇಜ್ ಮಾರ್ಗಗಳ ಶೇ.100 ರ ವಿದ್ಯುದೀಕರಣವನ್ನು ಸಾಧಿಸಲು ರೈಲ್ವೆಯು ಸಮತೋಲಿತ ಬ್ರಾಡ್‌ಗೇಜ್ ಮಾರ್ಗಗಳನ್ನು ವಿದ್ಯುದೀಕರಿಸುವ ಯೋಜನೆಯನ್ನು ಹಾಕಿಕೊಂಡಿದೆ.

ತಪಾಸಣೆಯಲ್ಲಿ ನೈಋತ್ಯ ರೈಲ್ವೆಯ ಪ್ರಧಾನ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಮನೋಜ್ ಮಹಾಜನ್, ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್‌ವಾಲ್, ರೈಲ್ ವಿಕಾಸ್ ನಿಗಮ ನಿಯಮಿತ (ಆರ್‌ವಿಎನ್‌ಎಲ್)ದ ಪ್ರಧಾನ ವ್ಯವಸ್ಥಾಪಕ ದಿನೇಶ್ ಜೈನ್ ಹಾಗೂ ಹಿರಿಯ ಭಾಗಿಯಾಗಿದ್ದರು.

## ನಗರದಲ್ಲಿಂದು ಅಭಿನಂದನಾ ಸಮಾರಂಭ

ಸಾದರ ನೌಕರರ ಬಳಗದ ಆಶ್ರಯದಲ್ಲಿ, ದಾನಿಗಳು ಮತ್ತು ದಾನ ಪಡೆದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾನಗರ ಮುಖ್ಯರಸ್ತೆಯ ಕುವೆಂಪು ಬಡಾವಣೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಅಭಿನಂದನಾ ಹಮ್ಮಿಕೊಳ್ಳಲಾಗಿದೆ. ಕೆ. ನಾಗಪ್ಪ ಅಧ್ಯಕ್ಷತೆ ವಹಿಸುವರು.

ದಾನಿಗಳಾದ ಎಲ್.ಎಸ್ ಪ್ರಭುದೇವ್, ಶರಣೆ ಲಿಂ. ಡಾ. ಮಂಜುನಾಥಗೌಡ, ಅಣಬೇರು ರಾಜಣ್ಣ, ಕೆ. ರವೀಂದ್ರನಾಥ್ ಮತ್ತು ಸಹೋದರರು, ತ.ಜ.ವಿ. ಸಂ. ದಾವಣಗೆರೆ ವಲಯದ ನೌಕರರ ನಿಧಿಯ ಎಸ್.ಆರ್. ಶಿರಗುಂಬಿ, ಪ್ರೊ. ಸಿ.ಹೆಚ್. ಗೌರವಕ್ಕಳವರ ಹಾಗೂ ಕೆ.ಸಿ. ಸಿದ್ದಪ್ಪ ಅವರುಗಳಿಗೆ ಸನ್ಮಾನಿಸಲಾಗುವುದು.

ಆರ್ಥಿಕ ನೆರವು ಪಡೆದ ವೈದ್ಯರುಗಳು : ಪವನ್ ಎನ್, ಜಿ. ಕೀರ್ತಿರಾಜ್, ಕೆ.ಬಿ. ಶ್ರೀನಿವಾಸ್, ಸೌಮ್ಯ ಬಿ. ಹುಲ್ಲತ್ತಿ, ಕಿರಣ್, ರಾಜು ಎಸ್.ಎಂ, ಜಿ.ಎಸ್. ಗೌರಿ.

# ಕೆಚ್ಚೆದೆಯ ಹೋರಾಟಗಾರ್ತಿ ಕಿತ್ತೂರು ಚೆನ್ನಮ್ಮ



**ಹರಿಹರದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯೋತ್ಸವದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ**

ಹರಿಹರ, ಅ.23- ರಾಣಿ ಚೆನ್ನಮ್ಮ ಬ್ರಿಟೀಷ್ ಸರ್ಕಾರದ ವಿರುದ್ಧ ಹೋರಾಟ ಮಾಡಿ ದೇಶದ ಜನರಲ್ಲಿ ಸ್ವಾತಂತ್ರ್ಯ ಪಡೆ ಯುವುದಕ್ಕೆ ಹೋರಾಟದ ಕಿಚ್ಚು ಎದ್ದೇಳು ವಂತೆ ಮಾಡಿದ ಕೆಚ್ಚೆದೆಯ ಮಹಿಳಾ ಹೋರಾಟಗಾರ್ತಿ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ತಹಶೀಲ್ದಾರರ ಕಛೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರಮಾತೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯೋತ್ಸವ ಸಮಾರಂಭದಲ್ಲಿ ರಾಣಿ ಚೆನ್ನಮ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ರಾಣಿ ಚೆನ್ನಮ್ಮ ಕಾಕತೀಯ ದೇಸಾಯಿಯವರ ಮನೆತನದಲ್ಲಿ ಹುಟ್ಟಿ ಚಿಕ್ಕ ವಯಸ್ಸಿನಲ್ಲಿಯೇ ಹೋರಾಟಕ್ಕೆ ಬೇಕಾಗುವ ವಿದ್ಯೆ ಕಲಿತು ಅದರಿಂದ ಉತ್ತಮ ಪರಿಣಿತಿ ಹೊಂದಿದ್ದರು. ಮರಾಠಿ, ಕನ್ನಡ ಉರ್ದು ಭಾಷೆಯಲ್ಲಿ ಮಾತನಾಡುತ್ತಿದ್ದ ಚೆನ್ನಮ್ಮ ವ್ಯವಹಾರಿಕವಾಗಿ ಇಂಗ್ಲಿಷ್ ಭಾಷೆ ಮಾತನಾಡುತ್ತಿದ್ದರು. 1829 ರ ಫೆಬ್ರವರಿ 4 ರಂದು ವೀರ ಮರಣವನ್ನು ಹೊಂದಿದರು ಎಂದು ಹೇಳಿದರು.

ಪಂಚಮಸಾಲಿ ಸಮಾಜದ ಮುಖಂಡರಾದ ದೀಟೂರು ಶೇಖರಪ್ಪ ಮಾತನಾಡಿ ದೇಶದ ಒಳಿತಿ ಗಾಗಿ ತನ್ನ ಪ್ರಾಣದ ಹಂಗು ತೊರೆದು ಹೋರಾಟ ಮಾಡಿರುವ ರಾಣಿ ಚೆನ್ನಮ್ಮ ನವರ ಜಯಂತಿ ಆಚರಣೆ ಮಾಡುತ್ತಿರುವ ಸರ್ಕಾರದ ಕಾರ್ಯ ಶ್ಲಾಘನೀಯವಾಗಿದೆ. ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಡಿರುವ ರಾಣಿ ಚೆನ್ನಮ್ಮನವರ ಧೈರ್ಯ, ಪರಾಕ್ರಮ ಹೋರಾಟದ ಕಿಚ್ಚು ಹಾಗೂ ಸರಿಯಾದ ಮಾರ್ಗದರ್ಶನ ಇಂದಿನ ಯುವಕರಿಗೆ ಅವಶ್ಯಕತೆ ಇದೆ ಎಂದು ಹೇಳಿದರು.

ಪರಮೇಶ್ವರ ಗೌಡ್ರು ಸಿರಿಗೆರೆ ಮಾತ ನಾಡಿ, ದೇಶದ ಒಳಿತಿಗಾಗಿ ಹೋರಾಟ ಮಾಡಿರುವ ದಾರ್ಶನಿಕರ ಜಯಂತಿ ಆಚರಣೆಯನ್ನು ಎಲ್ಲಾ ವರ್ಗದವರು ಆಚರಣೆ ಮಾಡುವುದು ಸೂಕ್ತ. ಆದರೆ ಇತ್ತೀಚಿನ ದಿನಗಳಲ್ಲಿ ಒಬ್ಬೊಬ್ಬ ದಾರ್ಶನಿಕರು ಒಂದೊಂದು ಸಮಾಜಕ್ಕೆ ಸೀಮಿತ ಮಾಡಿರುವುದು ದುರಂತದ ಸಂಗತಿಯಾಗಿದೆ. ನಾಡಿನಲ್ಲಿ ಯಾವುದೇ ದಾರ್ಶನಿಕರ ಜಯಂತಿ ಯನ್ನು ಎಲ್ಲಾ ವರ್ಗದವರು ಸೇರಿಕೊಂಡು ಆಚರಣೆ ಮಾಡುವಂತಾಗಲಿ ಎಂದು ಹೇಳಿದರು.

ಲತಾ ಕೊಟ್ರೇಶ್ ಮಾತನಾಡಿ, ಸರ್ಕಾರ ಪಂಚಮಸಾಲಿ ಬಡ ಸಮುದಾಯವನ್ನು ತಮಗೆ ಮತಗಳು ಬೇಕಾದ ಸಮಯದಲ್ಲಿ ಮಾತ್ರ ಬಳಸಿಕೊಳ್ಳುತ್ತದೆ. ಸಮುದಾಯದ ಜನರು ಕಷ್ಟ ಎಂದು ಹೇಳಿಕೊಂಡು ಮೀಸಲಾತಿ ನೀಡಿ ಎಂದು ಕೇಳಿದಾಗ ಹಲವಾರು ರೀತಿಯ ಸಬೂಬು ಹೇಳುತ್ತದೆ. ಇಂತಹ ಧೋರಣೆ ಕೈ ಬಿಟ್ಟು ನಾಡಿನಲ್ಲಿರುವ ಬಡ ಪಂಚಮಸಾಲಿ ಸಮಾಜದ ಬೆಳವಣಿಗೆಗೆ 2ಎ ಮೀಸಲಾತಿಗೆ ಅವಕಾಶ ನೀಡುವುದಕ್ಕೆ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಿಟ್ಲಕಟ್ಟೆ ಚಂದ್ರಪ್ಪ, ಗುತ್ತೂರು ಶಂಕ್ರಪ್ಪ, ರವಿಕುಮಾರ್ ಧೂಳೆಹೊಳೆ, ಜಿ. ನಂಜಪ್ಪ, ರಾಜು ಕತ್ತಲಗೇರಿ, ಗಿರೀಶ್ ಪಾಟೀಲ್, ಮಂಜುನಾಥ್, ನಗರಸಭೆ ಸದಸ್ಯೆ ಉಷಾ ಮಂಜುನಾಥ್, ರಾಗಿಣಿ, ಲಕ್ಷ್ಮಿ ರಾಜ ಚಾರ್, ದೇವರಬೆಳಕೆರೆ ಕರಿಬಸಪ್ಪ, ಪರಮೇಶ್ವ ರಪ್ಪ, ಕೆ.ಸಿ. ಪಾಟೀಲ್ ಇತರರು ಹಾಜರಿದ್ದರು.

# ನಿಟ್ಟೂರಿನಲ್ಲಿ ರೈತ ಆತ್ಮಹತ್ಯೆ ; ಪ್ರತಿಭಟನೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಅ.23- ತಾಲ್ಲೂಕಿನ ಬಿಲ್ಲಳ್ಳಿ ಗ್ರಾಮದ ರೇವಣಪ್ಪ ಭೀಮಪ್ಪ ಕರಡಿ ಈತನು ಕೃಷಿಗೆ ಮಾಡಿದ ಸಾಲ ತೀರಿಸಲಾಗದೆ ಇಂದು ಆತ್ಮಹತ್ಯೆ ಮಾಡಿಕೊಂಡಿದ್ದು, ರೈತ ಸಂಘದ ಪ್ರತಿನಿಧಿಗಳು ಶವ ಸಮೇತ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮುಖ್ಯಮಂತ್ರಿ ಹಾಗೂ ಕೃಷಿ ಮಂತ್ರಿಗಳ ತವರು ಜಿಲ್ಲೆಯಲ್ಲಿ ಬೆಳೆ ನಾಶ, ಯೋಗ್ಯ ದರ ಸಿಗದಿದ್ದರಿಂದ ಆತ್ಮಹತ್ಯೆಗಳು ನಡೆಯುತ್ತಿದ್ದು, ಇವುಗಳ ಬಗ್ಗೆ ಗಮನಹರಿ ಸದೆ ಉಪಚುನಾವಣೆಗೆ ಕೋಟಿ ಕೋಟಿ ರೂ. ಖರ್ಚು ಮಾಡುತ್ತಾ ಮೋಜು, ಮಸ್ತಿ ಉಡಾಯಿಸುತ್ತಿರುವರೆಂದು ಮಂತ್ರಿಗಳ ಬಗ್ಗೆ ರೈತ ಸಂಘದ ಅಧ್ಯಕ್ಷ ರವಿಗೌಡ ಪಾಟೀಲ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅತಿವೃಷ್ಟಿಯಿಂದ ಬೆಳೆ ನಾಶವಾಗಿದ್ದು, ಪರಿಹಾರ ಸಿಗದಿದ್ದರಿಂದ ಸಹಕಾರಿ ಸಂಘ ಹಾಗೂ ಖಾಸಗಿ ಸಾಲ ತೀರಿಸಲು ಸಾಧ್ಯವಾಗದೇ ಮನನೊಂದು ರೈತ ರೇವಣಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅವನ ಕುಟುಂಬ ಸಂಕಷ್ಟದಲ್ಲಿದೆ. ಅವರಿಗೆ ಅತೀ ಶೀಘ್ರವಾಗಿ ಪರಿಹಾರ ಕೊಡುವಂತೆ ರವಿ ಪಾಟೀಲ ಒತ್ತಾಯಿಸಿದ್ದಾರೆ.

## ರಾಜ್ಯ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಜಾಗೃತಿ ಸಭೆ

**ನಗರದಲ್ಲಿ ಇಂದು**

ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪ್ರವರ್ಗ-1ರ ಜಾತಿಗಳ ಒಕ್ಕೂಟ ಹಾಗೂ ಜಿಲ್ಲಾ ಒಕ್ಕೂಟ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 12.30 ಕ್ಕೆ ಉದಯ ಮಾರ್ಟ್ ಕನ್ವೆನ್ಷನ್ ಹಾಲ್‌ನಲ್ಲಿ ಪ್ರವರ್ಗ 1 ರ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಿ. ಟಿ. ಶ್ರೀನಿವಾಸ್ ಅವರ ಅಧ್ಯಕ್ಷತೆಯಲ್ಲಿ ಜಾಗೃತಿ ಸಭೆ ಏರ್ಪಡಿಸಲಾಗಿದೆ.

## ಇಂದು ರಾಜ್ಯಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭವು ಇಂದು ಮಧ್ಯಾಹ್ನ 3 ಗಂಟೆಗೆ ಜರುಗಲಿದೆ. ಅಧ್ಯಕ್ಷತೆ : ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ. ಬಹುಮಾನ ವಿತರಣೆ : ಸಿ.ಎಸ್ ಷಡಕ್ಷರಿ, ಡಾ. ವಿಜಯಮಹಾಂತೇಶ್ ಬಿ. ದಾನಮ್ಮನವರ್, ಸಿ.ಬಿ.ರಿಷ್ಯಂತ್. ಅತಿಥಿಗಳು : ಜಗದೀಶ್ ಗೌಡಪ್ಪ ಪಾಟೀಲ್, ಆರ್.ಶ್ರೀನಿವಾಸ್, ಬಿ.ಪಾಲಾಕ್ಷಿ, ಬಿ. ಶ್ರೀನಿವಾಸ್.

# ಸಾಲ ಪಡೆದ ಗ್ರಾಹಕರಿಗೆ ಕಡಿಮೆ ಬಡ್ಡಿ ದರಕ್ಕೆ ಚಿಂತನೆ

**(1ನೇ ಪುಟದಿಂದ)** ಬಡ್ಡಿಯಲ್ಲಿ ರಿಯಾಯಿತಿ ನೀಡಲಾಗಿತ್ತು. ಈ ಸೌಲಭ್ಯವನ್ನು ನೀಡಿದ ಹೆಗ್ಗಳಿಕೆಗೆ ಸಹಕಾರಿ ಬ್ಯಾಂಕುಗಳಲ್ಲಿ ರಾಜ್ಯದಲ್ಲೇ ದಾವಣಗೆರೆ ಅರ್ಬನ್ ಬ್ಯಾಂಕ್ ಪ್ರಥಮ ಎಂಬ ಕೀರ್ತಿಗೆ ಪಾತ್ರವಾಗಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

**ಡಿಜಿಟಲ್ ಸೌಲಭ್ಯ :** ಗ್ರಾಹಕರ ಅವಶ್ಯಕತೆಗಳಿಗನುಗುಣವಾಗಿ ಸ್ಪಂದಿಸುವ ಮತ್ತು ತತ್‌ಕ್ಷಣವೇ ಸೇವೆ ಒದಗಿಸುವ ನಿಟ್ಟಿನಲ್ಲಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಡಿಜಿಟಲ್ ಸೌಲಭ್ಯ ಒದಗಿಸಲಾಗಿದೆ ಎಂದು ಕೋಗುಂಡಿ ಬಕ್ಕೇಶಪ್ಪ ತಿಳಿಸಿದರು.

ಆದಾಯ ತೆರಿಗೆ, ಕರೆಂಟ್ ಬಿಲ್, ಗ್ಯಾಸ್ ಬುಕ್ಕಿಂಗ್, ಡಿಶ್ ಟಿವಿ, ಇಂಟರ್‌ನೆಟ್ ಸೇರಿದಂತೆ ಸರ್ಕಾರಿ ಪಾವತಿಗಳನ್ನು ತಮ್ಮ ಬ್ಯಾಂಕ್ ಮೂಲಕ ಗ್ರಾಹಕರು ಮಾಡಬಹುದಾಗಿದೆ. ಅಲ್ಲದೇ, ಎಟಿಎಂ ಕಾರ್ಡ್ ಗ್ರಾಹಕರು ತಮ್ಮ ಕಾರ್ಡಿನ ಹೆಚ್ಚಿನ ಭದ್ರತೆಗೆ ನಗದು ಮಿತಿಯನ್ನು ನಿಗದಿಗೊಳಿಸಬಹುದಾಗಿದೆ.

ಐಎಂಪಿಎಸ್‌ನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆದ ನಂತರ ಮೊಬೈಲ್ ಫೋನ್ ಮೂಲಕ ಬೇರೆ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮತ್ತು ಸ್ಕ್ಯಾನ್ ಪೇ ಮಾಡಬಹುದು ಎಂದ ಅವರು, ಬ್ಯಾಂಕಿನ ಮುಖ್ಯ ಕಛೇರಿ ಮತ್ತು ಪಿಜೆ ಬಡಾವಣೆ ಶಾಖೆಗಳಲ್ಲಿ ಸೋಲಾರ್ ಅಳವಡಿಸಿಕೊಂಡಿದ್ದು, ಉಳಿದ ಎರಡು ಶಾಖೆಗಳಲ್ಲೂ ಶೀಘ್ರವೇ ಸೋಲಾರ್ ಅಳವಡಿಸಲಾಗುವುದು ಎಂದು ತಿಳಿಸಿದರು.

ಗ್ರಾಹಕರ ಹತ್ತಿರವೇ ಬ್ಯಾಂಕ್ ಕೊಂಡೊಯ್ಯುವ ದಿಸೆಯಲ್ಲಿ ನಿಟುವಳ್ಳಿ ಮತ್ತು ಶಾಮನೂರು ಬಳಿ ಎರಡು ಶಾಖೆಗಳನ್ನು ತೆರೆಯಲುದ್ದೇಶಿಸಲಾಗಿದ್ದು, ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಶೀಘ್ರ ಅನುಮತಿ ನೀಡಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

**ಶೇ. 15 ಲಾಭಾಂಶ :** ಬ್ಯಾಂಕ್ ಪ್ರಗತಿ ಬಗ್ಗೆ ಮಾರ್ಮಿಕವಾಗಿ ವಿವರಿಸಿದ ಕೋಗುಂಡಿ ಬಕ್ಕೇಶಪ್ಪ, ಈ ಬಾರಿ ತನ್ನ ಸದಸ್ಯರಿಗೆ ಶೇ. 15ರಂತೆ ಲಾಭಾಂಶ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಘೋಷಿಸು ತ್ತಿದ್ದಂತೆ ವರ್ಚ್ಯುಯಲ್ ಸಭೆಯಲ್ಲಿದ್ದ ಸದಸ್ಯರು ಸ್ವಾಗತಿಸಿ ಹರ್ಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ಮೋತಿ ಸೈಕಲ್ ಮಾರ್ಟ್‌ನ ಟಿ.ಶಂಕ್ರಪ್ಪ, ವೈದ್ಯ ಡಾ. ಎ.ಕೆ. ರುದ್ರಮುನಿ, ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರು ಗಳಾದ ಎಂ.ಸಿ. ವಿಜಯಕುಮಾರ್, ಉಮೇಶ್ ಎಸ್. ರೋಣದ್, ಪಿ.ಕೆ. ವೀರಣ್ಣ, ಸ್ವಾಗಿ ಮುರುಗೇಶ್, ಟಿ.ಜೆ. ಸುರೇಶ್, ಕಂಚಿಕೆರೆ ವಿರೂಪಾಕ್ಷಪ್ಪ, ಎನ್. ಎಸ್. ಆನಂದ ಹಿರೇಮಠ ಸೇರಿದಂತೆ ಅನೇಕ ಸದಸ್ಯರಿಂದ ಬಂದ ಹಲವಾರು ಪ್ರಶ್ನೆಗಳಿಗೆ ಬಕ್ಕೇಶಪ್ಪ ಅವರು ಸಮರ್ಪಕ ಉತ್ತರ ನೀಡಿದರು. ಕಳೆದ ವರ್ಷದ ವರ್ಚ್ಯುಯಲ್ ಮಹಾಸಭೆಗಿಂತಲೂ ಈ ಬಾರಿಯ ವರ್ಚ್ಯುಯಲ್ ಮಹಾಸಭೆಯಲ್ಲಿ ಸಾಕಷ್ಟು ಸದಸ್ಯರು ಅದರಲ್ಲೂ ಮಹಿಳೆಯರು ಪ್ರಶ್ನೆಗಳನ್ನು ಕೇಳಿದ ಬಗ್ಗೆ ಹರ್ಷಗೊಂಡ ಬಕ್ಕೇಶಪ್ಪ, ಇದು ತಮ್ಮ ಬ್ಯಾಂಕಿನ ಬಗ್ಗೆ ಸದಸ್ಯರು ಇಟ್ಟಿರುವ ಅಭಿಮಾನ ಮತ್ತು ಪ್ರೀತಿಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ನಿರ್ದೇಶಕರೂ ಆಗಿರುವ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್ ಓದಿ, ದೃಢೀಕರಿಸಿದರು. ಕಾರ್ಯ ನಿರ್ವಾಹಕ ಮಂಡಳಿಯು ತಯಾರಿಸಿರುವ 60ನೇ ವಾರ್ಷಿಕ ವರದಿಯನ್ನು ವೃತ್ತಿಪರ ನಿರ್ದೇಶಕ ಮುಂಡಾಸ್ ವೀರೇಂದ್ರ ಅವರು ಸಭೆಗೆ ಮಂಡಿಸಿದರು. ನಿರ್ದೇಶಕ ಮಂಡಳಿಯು 2021-22ನೇ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳ ಮಾಹಿತಿಯನ್ನು ವೃತ್ತಿಪರ ನಿರ್ದೇಶಕ ಮಲ್ಲಿಕಾರ್ಜುನ ಕಣವಿ ತಿಳಿಸಿದರು.

2021 ಮಾರ್ಚ್ ಅಂತ್ಯಕ್ಕೆ 11.28 ಕೋಟಿ ರೂ. ಷೇರು ಬಂಡವಾಳ ಇದ್ದು, 52.92 ಕೋಟಿ ರೂ. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳಾಗಿದೆ. 434.53 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ಸದಸ್ಯರ ಅಗತ್ಯಗಳಿಗನುಗುಣವಾಗಿ 268.82 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. 508.93 ಕೋಟಿ ರೂ. ದುಡಿಯುವ ಬಂಡವಾಳವಾಗಿದ್ದು, ಬ್ಯಾಂಕಿನ ಹಿತದೃಷ್ಟಿಯಿಂದ 209.01 ಕೋಟಿ ರೂ. ಹೂಡಿಕೆ ಮಾಡಲಾಗಿದೆ. 9.19 ಕೋಟಿ ರೂ. ಲಾಭ ಗಳಿಸಿದ್ದು, ಆದಾಯ ತೆರಿಗೆ ಮತ್ತು ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ 5.7 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ನಿರ್ದೇಶಕರೂ ಆದ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಸದಸ್ಯ ಕಂಚಿಕೆರೆ ಮಹೇಶ್ ಅವರು ಬ್ಯಾಂಕಿನ ಪ್ರಗತಿ ಕುರಿತಂತೆ ಅಂಕಿ-ಅಂಶಗಳೊಂದಿಗೆ ವಿವರಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಮಾತನಾಡಿ, ಬ್ಯಾಂಕಿನ ಪ್ರಗತಿಗೆ ಗ್ರಾಹಕರ - ಷೇರುದಾರರ ಪ್ರೋತ್ಸಾಹ, ಠೇವಣಿದಾರರ ಸಹಕಾರ, ಸಿಬ್ಬಂದಿ ವರ್ಗದವರ ಶ್ರಮ ಮತ್ತು ಆಡಳಿತ ಮಂಡಳಿ ಸದಸ್ಯರ ಇಚ್ಛಾಶಕ್ತಿ ಕಾರಣವಾಗಿದೆ ಎಂದು ತಿಳಿಸಿ, ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ನಿರ್ದೇಶಕರೂ, ವ್ಯವಸ್ಥಾಪನಾ ಮಂಡಳಿ ಸದಸ್ಯರೂ, ದೂಡಾ ಅಧ್ಯಕ್ಷರೂ ಆಗಿರುವ ದೇವರಮನೆ ಶಿವಕುಮಾರ್, ನಿರ್ದೇಶಕರುಗಳಾದ ಮತ್ತಿಹಳ್ಳಿ ವೀರಣ್ಣ, ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ವಿ. ವಿಕ್ರಮ್, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಬಸವರಾಜಪ್ಪ ಬೆಳಗಾವಿ, ಜಂಬಗಿ ರಾಧೇಶ್, ಕೆ. ಕೊಟ್ರೇಶ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಐಸಿರಿ ಅವರ ನಾಡಗೀತೆ, ಶ್ರೀಮತಿ ಡಿ.ಇ. ಸಿಂಧು ಅವರ ಪ್ರಾರ್ಥನೆ ನಂತರ ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯಕುಮಾರ್ ಸ್ವಾಗತಿಸಿದರು. ನಿರ್ದೇಶಕ ನಲ್ಲೂರು ಎಸ್. ರಾಘವೇಂದ್ರ ಅವರಿಂದ ವಂದನಾರ್ಪಣೆ, ನಿರ್ದೇಶಕ ಇ.ಎಂ. ಮಂಜುನಾಥ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ, ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಬ್ಯಾಂಕಿನ ವ್ಯವಸ್ಥಾಪಕರುಗಳಾದ ಆಡಳಿತ ಕಛೇರಿಯ ಸಾಲ ವಿಭಾಗದ ಆರ್.ಎ. ಪ್ರಸನ್ನ, ಪ್ರಧಾನ ಕಛೇರಿಯ ಸಾನಂದ ಗಣೇಶ್, ಚೌಕಿಪೇಟೆ ಶಾಖೆಯ ಜಿ.ಕೆ. ವಿಜಯಕುಮಾರ್, ನರಸರಾಜ ರಸ್ತೆ ಶಾಖೆಯ ಶ್ರೀಮತಿ ಎಂ.ಎಂ. ಜಯಶೀಲ, ಪಿಜೆ ಬಡಾವಣೆ ಶಾಖೆಯ ಶ್ರೀಮತಿ ಎಲ್. ಎಸ್. ಗೀತಾ, ದೇವರಾಜ ಅರಸು ಬಡಾವಣೆ ಶಾಖೆಯ ಹೆಚ್.ವಿ. ರುದ್ರೇಶ್, ಹೊನ್ನಾಳಿ ಶಾಖೆಯ ಹೆಚ್. ಕುಮಾರ್, ಆಡಳಿತ ಕಛೇರಿಯ ಡಿಬಿಎ ಬಿ.ಎಸ್. ಪ್ರಶಾಂತ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.


**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ನಿಟುವಳ್ಳಿ ಕಾಮ್ರೇಡ್ ಲೆನಿನ್ ನಗರ
ಐಟಿಐ ಕಾಲೇಜ್ ಪಕ್ಕದಲ್ಲಿರುವ
ಶ್ರೀ ಚೌಡೇಶ್ವರಿ ಸೇವಾ ಸಮಿತಿಯ ಗೌರವಾಧ್ಯಕ್ಷರಾಗಿದ್ದ
**ಕಾಂ|| ಹೆಚ್.ಕೆ. ರಾಮಚಂದ್ರಪ್ಪ**
ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕೆ.ಬಿ. ಹನುಮಂತಪ್ಪ, ಅಧ್ಯಕ್ಷರು
ಹೆಚ್.ಬಿ. ಶಿವರುದ್ರಪ್ಪ, ಕಾರ್ಯದರ್ಶಿ
ಹೆಚ್.ಹೆಚ್. ಮಲ್ಲಿಕಾರ್ಜುನಪ್ಪ, ಖಜಾಂಚಿ
ಎನ್.ಹೆಚ್. ರಾಮಪ್ಪ, ಸಹ ಖಜಾಂಚಿ

ನಿರ್ದೇಶಕರು :
✦ ವದ್ದೆಪ್ಪರ ಅಂಜಿನಪ್ಪ ✦ ಕರಿಯಪ್ಪರ ಹಾಲೇಶಿ
✦ ಎಂ.ಬಿ. ಪರಮೇಶ್ವರಪ್ಪ ✦ ಕೆ.ಟಿ. ಶಿವಾನಂದಪ್ಪ
✦ ಹೆಚ್.ಆರ್. ವಿಜಯಕುಮಾರ್
✦ ಹೆಚ್.ಓ. ಅರುಣ್‌ಕುಮಾರ್
✦ ಹೆಚ್.ಹೆಚ್. ಕಿರಣ್‌ಕುಮಾರ್

**ಶ್ರೀ ಚೌಡೇಶ್ವರಿ ಸೇವಾ ಸಮಿತಿ**
ಕಾಂ. ಲೆನಿನ್ ನಗರ, ಐಟಿಐ ಕಾಲೇಜ್ ಪಕ್ಕ, ನಿಟುವಳ್ಳಿ, ದಾವಣಗೆರೆ.



**ಪ್ರಥಮ ವರ್ಷದ ಪುಣ್ಯಸ್ಮರಣೆ**



ಶರಣ ಗೌಡ್ರ
ಶ್ರೀ ಜಿ.ಎಸ್. ವೀರಣ್ಣ
ಲಿಂಗದಹಳ್ಳಿ
ಜನನ : 01.07.1963
ಮರಣ : 24.10.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಧರ್ಮಪತ್ನಿ : ಶ್ರೀಮತಿ ವಸಂತಮ್ಮ ಜಿ.ಎಸ್. ವೀರಣ್ಣ
ಮಕ್ಕಳಾದ :
ಶ್ರೀಮತಿ ರಾಜೇಶ್ವರಿ ಮತ್ತು ಮಹೇಶ್ ಸಿ.ಬಿ. ಹಾಗೂ ಮಕ್ಕಳು, ಶಿವನಹಳ್ಳಿ.
ಶ್ರೀಮತಿ ಉಷಾ ಮತ್ತು ಲೋಕೇಶ್ ಜಿ.ಎಸ್. ಹಾಗೂ ಮಕ್ಕಳು, ಗಂಗನಕಟ್ಟೆ
ಶ್ರೀಮತಿ ಶ್ವೇತ ಮತ್ತು ರಾಜು ಕೆ.ಆರ್. ಹಾಗೂ ಮಕ್ಕಳು, ಕಲಪನಹಳ್ಳಿ.
ಮರುಳಸಿದ್ದೇಶ್ ಜಿ.ವಿ. ಮತ್ತು ಶ್ರೀಮತಿ ಕಾವ್ಯ, ಲಿಂಗದಹಳ್ಳಿ
ತಮ್ಮ : ನಾಗರಾಜ್ ಜಿ.ಎಸ್. ಮತ್ತು ಶ್ರೀಮತಿ ಲತಾ ಮತ್ತು ಮಕ್ಕಳು, ಲಿಂಗದಹಳ್ಳಿ.
ತಂಗಿ : ಶ್ರೀಮತಿ ರೂಪ, ದಿ|| ಪಂಚಾಕ್ಷರಪ್ಪ ಮತ್ತು ಮಕ್ಕಳು, ಹಲಸಬಾಳು ಹಾಗೂ ಬಂಧು-ಮಿತ್ರರು.




**ಶ್ರೀಮತಿ ಪುಷ್ಪಲತಾ ನಿಧನ**



ದಾವಣಗೆರೆ ಮೋದಿ ಕಾಂಪೌಂಡ್ ಹಿಂಭಾಗ, ಮೋಹನ್ ಕಾಫಿ ಬಾರ್ ಮಾಲೀಕರಾದ ರಾಘವೇಂದ್ರ ಆಚಾರ್ ಅವರ ಪತ್ನಿ **ಶ್ರೀಮತಿ ಪುಷ್ಪಲತಾ** ಅವರು ದಿನಾಂಕ 23.10.2021ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.10.2021ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಉಡುಪಿಯಲ್ಲಿ ನೆರವೇರಲಿದೆ.

– ದುಃಖತಪ್ತ ಕುಟುಂಬ ವರ್ಗ
**ಮೋಹನ್ ಕಾಫಿ ಬಾರ್, ದಾವಣಗೆರೆ.**


## ಹರಿಹರದ ಸ್ವಿಮ್ಮಿಂಗ್ ಪೂಲ್‌ನಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ



ಹರಿಹರ, ಅ.23- ನಗರದ ಬಸ್ ನಿಲ್ದಾಣ ಬಳಿ ಇರುವ ಸ್ವಿಮ್ಮಿಂಗ್ ಪೂಲ್‌ನಲ್ಲಿ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಅಂಗವಾಗಿ ಎರಡು ದಿನಗಳ ಕಾಲ ನಡೆದ ಈಜು ಕ್ರೀಡೆಯಲ್ಲಿ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಭಾಗವಹಿಸಿ, ಪ್ರಶಸ್ತಿಗಾಗಿ ಸೆಣಸಾಡಿದರು. ಈ ಕ್ರೀಡಾ ಕೂಟದಲ್ಲಿ ಸುಮಾರು 200 ಕ್ಕೂ ಹೆಚ್ಚು ಕ್ರೀಡಾ ಪಟುಗಳು ಭಾಗವಹಿಸಿದ್ದರು.

## ಪಟಾಕಿ ಮಾರಾಟ : ನಗರದಲ್ಲಿ ನಾಳೆ ಸಭೆ

ದಾವಣಗೆರೆ, ಅ.22- ದೀಪಾವಳಿಯಲ್ಲಿ ಸಾರ್ವಜನಿಕವಾಗಿ ಪಟಾಕಿ ಮಾರಾಟ ಮಾಡುವ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಕುರಿತು ನಾಡಿದ್ದು ದಿನಾಂಕ 25 ರಂದು ಮಧ್ಯಾಹ್ನ 12.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸಭೆ ಏರ್ಪಡಿಸಲಾಗಿದೆ.

# ಬಿಪಿಎಲ್ ಉಚಿತ ಅಕ್ಕಿ ಸ್ಥಗಿತಕ್ಕೆ ಸರ್ಕಾರ ಮುಂದಾಗಿದೆ

ಬೆಂಗಳೂರು, ಅ. 23 - ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ನೀಡಲಾಗುತ್ತಿರುವ ಉಚಿತ ಅಕ್ಕಿಯನ್ನು ಸ್ಥಗಿತಗೊಳಿಸಲು ಸರ್ಕಾರ ಮುಂದಾಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ದೀಪಾವಳಿ ಹಬ್ಬದ ನಂತರ ಅನ್ನಭಾಗ್ಯ ಯೋಜನೆಗೆ ಕಲ್ಲು ಹಾಕಲು ಹೊರಟಿದ್ದಾರೆ. 2013 ರಲ್ಲಿ ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ ಸರ್ಕಾರ ರಾಷ್ಟ್ರೀಯ 'ಆಹಾರ ಭದ್ರತಾ ಕಾಯ್ದೆ'ಯನ್ನು ಜಾರಿಗೆ ತಂದಿತು. ಈ ಕಾಯ್ದೆಯ ಅಡಿಯಲ್ಲಿ ಆರೋಗ್ಯಕರ ಆಹಾರ ಪಡೆಯುವುದು ಈ ದೇಶದ ಪ್ರತಿಯೊಬ್ಬ 'ನಾಗರಿಕರ ಹಕ್ಕು' ಎನ್ನುವ ಕ್ರಾಂತಿಕಾರಕ ನಿಲುವನ್ನು ಕಾಂಗ್ರೆಸ್ ತಳೆಯಿತು. ಇದರಿಂದಾಗಿ ಹಸಿದ ಪ್ರತಿಯೊಬ್ಬರಿಗೂ ಆಹಾರ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಯಿತು ಎಂದು ಹೇಳಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈಗ ಅಕ್ಕಿಯನ್ನು 2 ಕೆಜಿಗೆ ಇಳಿಸಿದೆ. ಕಡು ಬಡವರಿಗೆ ನೀಡುವ ಅಂತ್ಯೋದಯ ಯೋಜನೆಯಲ್ಲಿ ನಾವು ಅಕ್ಕಿ, ಗೋಧಿ, ಬೇಳೆ, ಉಪ್ಪು, ಅಡುಗೆ ಎಣ್ಣೆ ಇತ್ಯಾದಿಗಳನ್ನು ಸೇರಿಸಿದ್ದೆವು. ಈಗಿನ ಬಿಜೆಪಿ ಸರ್ಕಾರ ಏಪ್ರಿಲ್ 2020 ರಿಂದ ಕೇವಲ ಅಕ್ಕಿ ಮಾತ್ರ ನೀಡುತ್ತಿದೆ. ಗೋಧಿ, ಸಕ್ಕರೆ, ಬೇಳೆ ಇವುಗಳನ್ನು ರದ್ದುಮಾಡಿದೆ ಎಂದವರು ಹೇಳಿದ್ದಾರೆ.

ಹಂತ ಹಂತವಾಗಿ ಕಾಂಗ್ರೆಸ್ ಅವಧಿಯ ಆಹಾರ ಭದ್ರತಾ ಕಾಯ್ದೆಯನ್ನು ಕೊಲ್ಲುತ್ತಾ ಬಂದ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಪ್ರತಿ ವ್ಯಕ್ತಿಗೆ ನೀಡಲಾಗುತ್ತಿದ್ದ ಉಚಿತ ಅಕ್ಕಿಯ ಪ್ರಮಾಣವನ್ನು 7 ರಿಂದ 2 ಕೆಜಿಗೆ ಇಳಿಸಿದ್ದಲ್ಲದೆ ನಮ್ಮ ಕಾಂಗ್ರೆಸ್ ಸರ್ಕಾರದ ಕನಸಿನ ಯೋಜನೆಯಾಗಿದ್ದ ಇದನ್ನು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನಾ (ಪಿಎಂಜಿಕೆಎವೈ) ಜತೆಗೆ ಜಮೆ ಮಾಡಲಾಗಿದೆ ಎಂದಿದ್ದಾರೆ.

# ಹದಡಿ ರಸ್ತೆಯಲ್ಲಿ ಬೆಳಕು ಚೆಲ್ಲಿದ ಎಲ್‌ಇಡಿ ಬೀದಿ ದೀಪಗಳು

## 280 ಹೊಸ ಬೀದಿ ದೀಪಗಳನ್ನು ಉದ್ಘಾಟಿಸಿದ ಸಂಸದ ಸಿದ್ದೇಶ್ವರ - ಶಾಸಕ ರವೀಂದ್ರನಾಥ್





ದಾವಣಗೆರೆ, ಅ.23- ಇಲ್ಲಿನ ಹದಡಿ ರಸ್ತೆಯಲ್ಲಿ ನಗರ ಪಾಲಿಕೆ ವತಿಯಿಂದ ಅಳವಡಿಸಲಾಗಿರುವ ಹೊಸ ಎಲ್‌ಇಡಿ ಬೀದಿ ದೀಪಗಳು ಇಂದು ಸಂಜೆ ಉದ್ಘಾಟನೆಗೊಂಡವು. ರಸ್ತೆಯಲ್ಲಿ ಬೀದಿ ದೀಪಗಳ ಬೆಳಕು ಚೆಲ್ಲಿ ಜಗಮಗಿಸುತ್ತಾ ಆಕರ್ಷಿಸಿತು.

ಪಾಲಿಕೆಯ ಯಾವುದೇ ಅನುದಾನವಿಲ್ಲದೇ ಸಾರ್ವಜನಿಕರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಳವಡಿಸಿದ್ದ ಸುಮಾರು 208 ಹೊಸ ಬೀದಿ ದೀಪಗಳ ಬೆಳಕು ಚೆಲ್ಲಲು ಹದಡಿ ರಸ್ತೆಯ ವಿಮಾನಮಟ್ಟಿ ಗಣೇಶ ದೇವಸ್ಥಾನ ಬಳಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಅವರು ಚಾಲನೆ ನೀಡಿದರು.

ಇದೇ ವೇಳೆ ಸಂಸದ ಸಿದ್ದೇಶ್ವರ, ಶಾಸಕ ರವೀಂದ್ರನಾಥ್, ಮೇಯರ್, ಉಪಮೇಯರ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳನ್ನು ಸನ್ಮಾನಿಸಲಾಯಿತು.

ಮೇಯರ್ ಎಸ್.ಟಿ. ವೀರೇಶ್, ಉಪಮೇಯರ್ ಶಿಲ್ಪಾ ಜಯಪ್ರಕಾಶ್, ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಗೀತಾ ದಿಳ್ಯೆಪ್ಪ, ಉಮಾ ಪ್ರಕಾಶ್, ರೇಣುಕಾ ಶ್ರೀನಿವಾಸ್, ಪಾಲಿಕೆ ಸದಸ್ಯರಾದ ಗೌರಮ್ಮ ಗಿರೀಶ್, ಬಿಜೆಪಿ ಮುಖಂಡರಾದ ದಿಳ್ಯೆಪ್ಪ ಮಾಸ್ತರ್, ಜಯಪ್ರಕಾಶ್, ಶ್ರೀನಿವಾಸ್, ವಿನಯ್ ದಿಳ್ಯೆಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಅಧೀಕ್ಷಕ ಅಭಿಯಂತರ ಉದಯ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಸಂದೀಪ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಮುಖ್ಯ ಅಭಿಯಂತರ ಸತೀಶ್ ಸೇರಿದಂತೆ ಇತರರಿದ್ದರು.

# ಮುಸ್ಲಿಮರು ಅಲ್ಪಸಂಖ್ಯಾತರಲ್ಲ

**ರಹಮಾನ್ ಖಾನ್**

ಬೆಂಗಳೂರು, ಅ.23- ಮುಸ್ಲಿಮರು ದೇಶದಲ್ಲಿ ಅಲ್ಪಸಂಖ್ಯಾತರಲ್ಲ ಎಂದಿರುವ ಕಾಂಗ್ರೆಸ್ ಹಿರಿಯ ನಾಯಕ ರಹಮಾನ್ ಖಾನ್, ಮುಸ್ಲಿಮರು ದೇಶ ನಿರ್ಮಾಣಕ್ಕೆ ಶ್ರಮಿಸುವಂತೆ ಕರೆ ನೀಡಿದ್ದಾರೆ.

ದೇಶದಲ್ಲಿ 20 ರಿಂದ 22 ಕೋಟಿ ಮುಸ್ಲಿಮರಿದ್ದಾರೆ. ನನ್ನ ಪ್ರಕಾರ ಮುಸ್ಲಿಮರು ಅಲ್ಪಸಂಖ್ಯಾತರಲ್ಲ. 22 ಕೋಟಿ ಹೇಗೆ ಅಲ್ಪಸಂಖ್ಯಾತ ಆಗಲು ಸಾಧ್ಯ? ಎಂದವರು ಪ್ರಶ್ನಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ನಾವು ಸರ್ಕಾರಕ್ಕೆ ಕೇಳುವುದಕ್ಕಿಂತ, ಸಮಾಜಕ್ಕೆ ಹಾಗೂ ದೇಶಕ್ಕೆ ಕೊಡಬೇಕಿದೆ. ಈ ಬಗ್ಗೆ ನಾನು ಪುಸ್ತಕವೊಂದನ್ನೂ ಬರೆದಿದ್ದೇನೆ ಎಂದಿದ್ದಾರೆ.

ಸಂವಿಧಾನದ 14, 15 ಹಾಗೂ 16 ವಿಧಿಯ ಅನ್ವಯ ಯಾವುದಾದರೂ ಸಮುದಾಯ ಹಿಂದುಳಿದಿದ್ದರೆ ಅದಕ್ಕೆ ನೆರವಾಗುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹೀಗಾಗಿ ಸರ್ಕಾರ ಯಾವುದೇ ಸಮುದಾಯಕ್ಕೆ ಉಪಕಾರವನ್ನೇನೂ ಮಾಡುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

# ಧರ್ಮ ಮುಚ್ಚಿಟ್ಟು ಮದುವೆ ಪೀಡನೆ, ಹಣ ಲೂಟಿ

**ಮಹಿಳೆ ದೂರಿನ ನಂತರ ಪತಿ ಬಂಧನ**

ನಾಗಾಂವ್, ಅ. 23 – ಮುಸ್ಲಿಮ್ ವ್ಯಕ್ತಿಯೋರ್ವ ತನ್ನ ಧರ್ಮ ಮುಚ್ಚಿಟ್ಟು, ಹಿಂದೂ ಎಂದು ಹೇಳಿ, ಮದುವೆಯಾದ ನಂತರ ಹೆಂಡತಿಯನ್ನು ಪೀಡಿಸಿ ಹಣ ದೋಚಿದ್ದಾಗಿ ದೂರು ದಾಖಲಾಗಿದೆ ಎಂದು ಅಸ್ಸಾಂ ಪೊಲೀಸರು ಹೇಳಿದ್ದಾರೆ.

ಹೊಜೈ ಜಿಲ್ಲೆಯ ಕಾನೂನು ಸೇವಾ ಪ್ರಾಧಿಕಾರದ ನೆರವಿನೊಂದಿಗೆ ಮಹಿಳೆ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ಉತ್ತರ ಅಸ್ಸಾಂನ ಈ ಮಹಿಳೆ, ತಮಿಳುನಾಡಿಗೆ ಕೆಲಸಕ್ಕೆ ತೆರಳಿದಾಗ ವ್ಯಕ್ತಿಯ ಪರಿಚಯವಾಗಿತ್ತು.

ಹಿಂದೂ ಎಂದು ಪರಿಚಯ ಮಾಡಿಕೊಂಡಿದ್ದ ವ್ಯಕ್ತಿ ಜೊತೆ ಮದುವೆ ಮಾಡಿಕೊಂಡಿದ್ದಾಗಿ, ಮದುವೆಯ ನಂತರ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದಾಗಿ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಕೆಲ ತಿಂಗಳ ನಂತರ ತನ್ನಿಂದ ಭಾರೀ ಹಣ ಲೂಟಿ ಮಾಡಿ ಗಂಡ ಪರಾರಿಯಾಗಿದ್ದ. ಆತನನ್ನು ಹುಡುಕಿಕೊಂಡು ಅಸ್ಸಾಂನ ಡೊಬಕಾಗೆ ಬಂದಾಗ ಆತ ಮುಸ್ಲಿಮ್ ಎಂಬುದು ತಿಳಿದು ಬಂತು ಎಂದು ಮಹಿಳೆ ಹೇಳಿದ್ದಾರೆ. ದೂರಿನ ಆಧಾರದ ಮೇಲೆ ನಿನ್ನೆ ಲಂಡಿಂಗ್ ಪೊಲೀಸ್ ಠಾಣೆಯ ಪೊಲೀಸರ ತಂಡ ಆರೋಪಿಯನ್ನು ಬಂಧಿಸಿದೆ.

# ಆಂಗ್ಲ ನಾಮಫಲಕ ತೆರವು: 2ಕ್ಕೆ ಪಾಲಿಕೆಗೆ ಮುತ್ತಿಗೆ

ದಾವಣಗೆರೆ, ಅ.23- ನಗರದಲ್ಲಿರುವ ಆಂಗ್ಲ ನಾಮಫಲಕಗಳನ್ನು ನ.1 ರೊಳಗೆ ತೆರವುಗೊಳಿಸದಿದ್ದರೆ ನ.2 ರಂದು ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಹೇಳಿದ್ದಾರೆ

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ಬಾರಿ ಆಂಗ್ಲ ನಾಮಫಲಕಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದ್ದರೂ. ಜಿಲ್ಲಾಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಆಯುಕ್ತರು ಕ್ರಮ ಕೈಗೊಂಡಿಲ್ಲ. ಆಂಗ್ಲ ನಾಮಫಲಕವಿದ್ದರೆ ಕಾನೂನಾತ್ಮಕ ಕ್ರಮ ಕೈಗೊಳ್ಳುವ ಅವಕಾಶವಿದ್ದರೂ, ಈಗಿನ ಪಾಲಿಕೆ ಆಯುಕ್ತರು ಮೌನ ವಹಿಸಿದ್ದಾರೆ ಎಂದು ಆರೋಪಿಸಿದರು.

**ಇಂದು ಜ್ಞಾನಕಾಶಿ ಪ್ರಶಸ್ತಿ ಪ್ರದಾನ ಸಮಾರಂಭ**

ನಾಡಗೀತೆಗೆ ಅಶ್ಲೀಲ ಪದಗಳಿಂದ ಅವಮಾನ ಮಾಡಿರುವ ರೋಹಿತ್ ಚಕ್ರವರ್ತಿಯನ್ನು ಕರ್ನಾಟಕ ಪ್ರಾಧಿಕಾರದ ಸದಸ್ಯರನ್ನಾಗಿ ಮಾಡಲಾಗಿದೆ. ಸಿ.ಟಿ. ರವಿ ಅವರು ಕನ್ನಡ ಧ್ವಜ ಬೇಕಿಲ್ಲ ಎಂದು ಆದೇಶ ಮಾಡಿದ್ದಾರೆ. ಇಂತಹ ಮುಠ್ಠಾಳ ಸರ್ಕಾರಕ್ಕೆ ಜನರೇ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

**ಇಂದು ಪ್ರಶಸ್ತಿ ಪ್ರದಾನ:** 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 125 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ದಾವಣಗೆರೆ ವಲಯ ಮಟ್ಟದ ಪ್ರತಿಭಾ ಪುರಸ್ಕಾರ 'ಜ್ಞಾನಕಾಶಿ ಪ್ರಶಸ್ತಿ ಪ್ರದಾನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರಾಮೇಗೌಡ ತಿಳಿಸಿದರು.

ನಾಳೆ ದಿನಾಂಕ 24 ರ ಭಾನುವಾರ ಗುರುಭವನದಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ದಾವಣಗೆರೆ ದಕ್ಷಿಣ ಹಾಗೂ ಉತ್ತರ ವಲಯದ 157 ವಿದ್ಯಾರ್ಥಿಗಳಿಗೆ ಜ್ಞಾನಕಾಶಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿ ಹಾಗೂ ಆಧಾರ್ ಕಾರ್ಡ್ ಜೆರಾಕ್ಸ್‌ಗಳೊಂದಿಗೆ ಆಗಮಿಸಬೇಕು ಎಂದರು.

ಕಾರ್ಯಕ್ರಮವನ್ನು ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಉದ್ಘಾಟಿಸಲಿದ್ದಾರೆ. ಕರವೇ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಅಧ್ಯಕ್ಷತೆ ವಹಿಸಲಿದ್ದು, ಕರವೇ ಸಾಮಾಜಿಕ ಜಾಲತಾಣದ ಪ್ರಧಾನ ಕಾರ್ಯದರ್ಶಿ ಶಿವಾನಂದ ಗುಂಡನವರ್ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

## ಇಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸಭೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯನ್ನು ಇಂದು ಬೆಳಿಗ್ಗೆ 11 ಕ್ಕೆ ಭಾರತ ಸೇವಾದಳ (ಶ್ರೀ ವೆಂಕಟೇಶ್ವರ ದೇವಸ್ಥಾನದ ಪಕ್ಕ, ಎಂಸಿಸಿ 'ಬಿ' ಬ್ಲಾಕ್) ಇಲ್ಲಿ ಕರೆಯಲಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ. ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

# ಕರ್ನಾಟಕ ರಾಜ್ಯೋತ್ಸವ ಸರಳ ಆಚರಣೆಗೆ ಜಿಲ್ಲಾಡಳಿತ ನಿರ್ಧಾರ

ದಾವಣಗೆರೆ, ಅ.23- ಈ ಬಾರಿ ನ.1 ರಂದು ಭುವನೇಶ್ವರಿ ದೇವಿಯ ಸರಳ ಮೆರವಣಿಗೆಯೊಂದಿಗೆ ಕನ್ನಡ ರಾಜ್ಯೋತ್ಸವವನ್ನು ನಾಡ ಹಬ್ಬವನ್ನಾಗಿ ಆಚರಿಸಲಿದ್ದು, ಕನ್ನಡಪರ ಸಂಘಟನೆಗಳು, ಕನ್ನಡಾಭಿಮಾನಿಗಳು, ಅಧಿಕಾರಿ ವರ್ಗದವರು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸುವಂತೆ ಡಿಸಿ ಮಹಾಂತೇಶ್ ಬೀಳಗಿ ಮನವಿ ಮಾಡಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭುವನೇಶ್ವರಿ ದೇವಿಯ ಮೆರವಣಿಗೆಯಲ್ಲಿ 400 ಜನರು ಪಾಲ್ಗೊಳ್ಳಲು ಮಿತಿಗೊಳಿಸಿದ್ದು, ಕೇವಲ ಮೂರು ಕಲಾ ತಂಡಗಳಿಗೆ ಆಹ್ವಾನಿಸಲಾಗುವುದು. ಕೋವಿಡ್ ನಿಯಮಾವಳಿ ಪ್ರಕಾರ ಸಾಮಾಜಿಕ ಅಂತರ, ಮಾಸ್ಕ್ ಧರಿಸುವುದು ಕಡ್ಡಾಯವಾಗಿದ್ದು, ಲಸಿಕೆ ಹಾಕಿಸಿಕೊಂಡವರು ಮಾತ್ರ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕು. ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಹೇಳಿದರು.

ಅಂದು ಬೆಳಿಗ್ಗೆ 8.30 ಕ್ಕೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಿಂದ ಮೆರವಣಿಗೆ ಆರಂಭವಾಗಲಿದ್ದು ಪಾಲಿಕೆ ಮುಂಭಾಗ, ಗಾಂಧಿ ವೃತ್ತ, ಅಶೋಕ ರಸ್ತೆ, ಜಯದೇವ ವೃತ್ತ, ಅಂಬೇಡ್ಕರ್ ವೃತ್ತ, ವಿದ್ಯಾರ್ಥಿ ಭವನದ ಮೂಲಕ ಜಿಲ್ಲಾ ಕ್ರೀಡಾಂಗಣವನ್ನು ತಲುಪಲಿದೆ.

ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಿದ್ದಾರೆ. ಕನಿಷ್ಠ ಆರು ತಂಡಗಳು ಪಥ ಸಂಚಲನದಲ್ಲಿ ಭಾಗವಹಿಸುವಂತೆ, ಕ್ರಮ ಕೈಗೊಳ್ಳಲಾಗುವುದು ಎಂದರು.

ಉಳಿದಂತೆ ಯಾವುದೇ ಜಯಂತಿ ಆಚರಣೆ ಸಂದರ್ಭದಲ್ಲಿ ಮೆರವಣಿಗೆಗೆ ಅವಕಾಶ ಕಲ್ಪಿಸಲಾಗುವುದಿಲ್ಲ. ಸರ್ಕಾರ ಹೊರಡಿಸುವ ಮಾರ್ಗಸೂಚಿಯನ್ನು ತಪ್ಪದೇ ಪಾಲಿಸಲಾಗುವುದು ಎಂದರು.

ಸರ್ಕಾರಿ, ಅರೆ ಸರ್ಕಾರಿ ಪ್ರಮುಖ ಕಟ್ಟಡಗಳು, ಸಂಘ-ಸಂಸ್ಥೆಗಳ ಕಚೇರಿಗಳು, ಖಾಸಗಿ ಕಟ್ಟಡಗಳು, ಅಂಗಡಿ, ಹೋಟೆಲ್ ಗಳನ್ನು ಕೆಂಪು ಮತ್ತು ಹಳದಿ ವಿದ್ಯುತ್ ದೀಪಗಳಿಂದ ಅಲಂಕರಿಸಬೇಕು. ನವೆಂಬರ್ ತಿಂಗಳಲ್ಲಿ ಜಿಲ್ಲೆಯ ಎಲ್ಲಾ ಚಿತ್ರಮಂದಿರಗಳಲ್ಲಿ ಕನ್ನಡ ಚಲನಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಸೂಚನೆ ನೀಡಲಾಗುವುದು ಎಂದರು.


ದೀಪಾಲಂಕಾರ, ರಾಜ್ಯೋತ್ಸವ ಮೆರವಣಿಗೆ, ವೇದಿಕೆ ನಿರ್ಮಾಣ, ಕಲಾ ತಂಡಗಳ ಆಯ್ಕೆ, ಸನ್ಮಾನಿತರ ಆಯ್ಕೆ ಸೇರಿದಂತೆ, ರಾಜ್ಯೋತ್ಸವ ಕಾರ್ಯಕ್ರಮದ ಸಿದ್ಧತೆಗೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಯಿತು.


ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಕಲೆ, ಚಿತ್ರಕಲೆ, ಜಾನಪದ, ಕೃಷಿ, ಮಾಧ್ಯಮ ಕ್ಷೇತ್ರ, ಕನ್ನಡಪರ ಹೋರಾಟಗಾರರು, ವಾದ್ಯ ಕಲಾವಿದರು, ಸಂಕೀರ್ಣ, ಮುದ್ರಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅರ್ಹರನ್ನು ಸನ್ಮಾನಕ್ಕೆ ಆಯ್ಕೆ ಮಾಡಲಾಗುವುದು. ಆಯ್ಕೆ ಪಟ್ಟಿಯನ್ನು ಪರಿಶೀಲನೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಳುಹಿಸಿ ಕೊಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿ.ಪಂ. ಸಿಇಓ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಿದ್ದು, ಸದಸ್ಯ ಕಾರ್ಯದರ್ಶಿಯನ್ನಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ನಿರ್ದೇಶಕ ರವಿಚಂದ್ರ ಅವರನ್ನು, ಸದಸ್ಯರಾಗಿ ಉಪವಿಭಾಗಾಧಿಕಾರಿಗಳು, ದೂಡಾ ಆಯುಕ್ತರು ಸೇರಿದಂತೆ ಅಧಿಕಾರೇತರ ಸದಸ್ಯರನ್ನಾಗಿ ಬಾ.ಮ. ಬಸವರಾಜಯ್ಯ, ಜಿ.ಎಂ.ಆರ್. ಆರಾಧ್ಯ, ಬಿ.ಎನ್. ಮಲ್ಲೇಶ್, ಕೆ.ಜಿ. ಯಲ್ಲಪ್ಪ, ಎಂ.ಎಸ್. ರಾಮೇಗೌಡ, ನಾಗೇಂದ್ರ ಬಂಡೀಕರ್, ಕೆ.ಜಿ. ಶಿವಕುಮಾರ್, ಬಲ್ಲೂರು ರವಿಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಜಿ.ಪಂ. ಸಿಇಓ ಡಾ. ವಿಜಯ ಮಹಾಂತೇಶ್ ದಾನಮ್ಮನವರ್, ಎಸ್ಪಿ ರಿಷ್ಯಂತ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ದೂಡಾ ಆಯುಕ್ತ ಬಿ.ಟಿ. ಕುಮಾರ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ನಿರ್ದೇಶಕ ರವಿಚಂದ್ರ ಸೇರಿದಂತೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಕಸಾಪ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ, ಹಿರಿಯ ಪತ್ರಕರ್ತರಾದ ಬಿ.ಎನ್. ಮಲ್ಲೇಶ್, ಬಾ.ಮ. ಬಸವರಾಜಯ್ಯ, ಹೆಚ್. ಬಿ. ಮಂಜುನಾಥ, ಕನ್ನಡ ಪರ ಸಂಘಟನೆಗಳ ಮುಖಂಡರಾದ ಕೆ.ಜಿ. ಯಲ್ಲಪ್ಪ, ಎಂ.ಎಸ್. ರಾಮೇಗೌಡ, ನಾಗೇಂದ್ರ ಬಂಡೀಕರ್, ಸುಧಾಕರ, ರೈತ ಸಂಘದ ಬಲ್ಲೂರು ರವಿಕುಮಾರ್, ದಲಿತ ಸಂಘಟನೆಯ ಹೆಗ್ಗೆರೆ ರಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

# ತಂತ್ರಜ್ಞಾನದ ಜೊತೆ ಮಾನವೀಯ ಮೌಲ್ಯ ರೂಢಿಸಿಕೊಳ್ಳಬೇಕು : ಡಾ. ಪ್ರತಾಪ್ ಸಿನ್ಹ




ದಾವಣಗೆರೆ, ಅ.23- ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಂತ್ರಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ನವದೆಹಲಿಯ ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜುಕೇಷನ್ ಅಧ್ಯಕ್ಷ ಡಾ. ಪ್ರತಾಪ್ ಸಿನ್ಹ ಕಾಕಸೊ ದೇಸಾಯಿ ಸಲಹೆ ನೀಡಿದರು.

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಜೈನ್ ತಾಂತ್ರಿಕ ಮಹಾವಿದ್ಯಾಲಯದ 2019-20 ಹಾಗೂ 2020-21 ರ 'ಪದವಿ ದಿನಾಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ವಿದ್ಯಾರ್ಥಿ ಜೀವನದಲ್ಲಿ ಕಲಿತ ತಂತ್ರಜ್ಞಾನವನ್ನು ಸಮಾಜದ ಮೇಲೆ ದುಷ್ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸುವಂತೆ, ಸಮಾಜದ ಒಳಿತಾಗಿ ಉಪಯೋಗಿಸುವಂತೆ ಕರೆ ನೀಡಿದರು.

ಜೆಜಿಐ ಅಧ್ಯಕ್ಷ ಅಚಲ್‌ಚಂದ್ ಮಾತನಾಡಿ, ಮೂಲಭೂತ ವಿಜ್ಞಾನವೇ ತಂತ್ರಜ್ಞಾನದ ಆಧಾರವಾಗಿದ್ದು, ನೀವು ಕಲಿತ ತಂತ್ರಜ್ಞಾನದ ಕೌಶಲ್ಯತೆಯನ್ನು ದೇಶದ ಪ್ರಗತಿಗೆ ಕೊಡುಗೆಯಾಗಿ ನೀಡುವಂತಹ ಕೆಲಸ ಮಾಡಬೇಕೆಂದು ಉತ್ತೇಜನ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ.ಬಿ. ಗಣೇಶ್ ಅಧ್ಯಕ್ಷತೆ ವಹಿಸಿದ್ದರು. ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನ್ ಅಕಾಡೆಮಿಕ್ ಮತ್ತಿತರರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಪದವೀಧರರು ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು.


**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರಾಕ್ಟ್, ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ :


**ಪ್ರಿಯಾಂಕ ಜಿ.ಪಿ.,** ಇಂಜಿನಿಯರ್
**+91 70190 70400**

**ಮೂರ್ತಿ ಜಿ.ಎಸ್.ಡಿ.,** ಇಂಜಿನಿಯರ್
**+91 98445 69698**


2ನೇ ಮೇನ್, ಪಿ.ಜೆ. ಬಡಾವಣೆ, ಸಿ.ಜಿ. ಆಸ್ಪತ್ರೆ ರೋಡ್, ವಿಜಯ ಹೋಟೆಲ್ ಎದುರು, ದಾವಣಗೆರೆ - 577 004.

ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ (ರಿ.) ಹರಿಹರ.

**ಎಸ್.ಜೆ.ವಿ.ಪಿ.ಕಾಲೇಜ್ (ಅಟಾನಮಸ್), ಹರಿಹರ.**



ವಾಗೀಶ ನಗರ, ಪಿ.ಬಿ. ರಸ್ತೆ, ಹರಿಹರ-577 601.
ಫೋ. : 08192 242216
Email-sjvp_hrh@yahoo.com



**ಪ್ರಕಟಣೆ**

ಎಸ್.ಜೆ.ವಿ.ಪಿ. ಮಹಾವಿದ್ಯಾಲಯದ ಅಟಾನಮಸ್ ಕಾಲಾವಧಿಯಲ್ಲಿ ಅಂದರೆ, 2009 ರಿಂದ 2015ರ ಕಾಲಾವಧಿಯಲ್ಲಿ ಪದವಿ ತರಗತಿಗೆ ಪ್ರವೇಶ ಪಡೆದು, ಪಾಸಾಗದೇ ಉಳಿದಿರುವ ಎಲ್ಲಾ ಪದವಿ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶವನ್ನು ಕಲ್ಪಿಸಲಾಗಿದೆ. ಪದವಿ ಪಡೆಯದೇ ಎರಡು ಕಾಲಾವಧಿ ಮೀರಿದವರು ಸಹ ಪರೀಕ್ಷೆಗೆ ಕೂರಲು ಅವಕಾಶವಿರುತ್ತದೆ. ಈ ಶೈಕ್ಷಣಿಕ ವರ್ಷದ ನವೆಂಬರ್/ಡಿಸೆಂಬರ್-2021 ಮತ್ತು ಏಪ್ರಿಲ್/ಮೇ-2022ರ ಎರಡು ಕಾಲಾವಧಿಗೆ ಪರೀಕ್ಷೆಗೆ ಕೂರಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಸದಾವಕಾಶವನ್ನು ಅಟಾನಮಸ್ ಕಾಲಾವಧಿಯ ಅನುತ್ತೀರ್ಣ ವಿದ್ಯಾರ್ಥಿಗಳು ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ದಿನಾಂಕ : 25.10.2021 ರಿಂದ 12.11.2021ರ ವರೆಗೆ ಪರೀಕ್ಷಾ ಶುಲ್ಕ ಕಟ್ಟಲು ನಿಗದಿಪಡಿಸಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಜಿ.ಎಂ. ಮುರಿಗಿಸ್ವಾಮಿಯವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

**ಮಂಜುನಾಥ** 70228 11437 — **ಸಹಿ/- ಪ್ರಾಂಶುಪಾಲರು** 98442 96595

**ಬೇಕಾಗಿದ್ದಾರೆ**

ದಾವಣಗೆರೆ ನಗರದ ಪ್ರಸಿದ್ಧ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು

**ಮಾರಾಟ ಪ್ರತಿನಿಧಿಗಳು**

**(Sales Executives)**

ತಕ್ಷಣ ಬೇಕಾಗಿದ್ದಾರೆ.

ಆಸಕ್ತರು ಈ ಕೆಳಗಿನ ನಂಬರ್‌ಗೆ ಕರೆ ಮಾಡಿ ಅಥವಾ ತಮ್ಮ ಬಯೋಡೇಟಾವನ್ನು ವಾಟ್ಸಾಪ್ ಅಥವಾ ಕೆಳಗಿನ ಮೇಲ್ ಐಡಿಗೆ ಕಳುಹಿಸಿ.

93803 50327
davanageresjobs@gmail.com

**ಸೇಲ್**

U.S. POLO ASSN. Levi's FLYING MACHINE DMAX spykar Raymond JACK&JONES OXEMBERG ARROW INDIAN TERRAIN PARK AVENUE VAN HEUSEN UNITED COLORS OF BENETTON. parx Wrangler Superdry Calvin Klein Lee TOMMY HILFIGER PUMA Bata ROYAL ENFIELD WOODLAND sparx NIKE BUGATTI FILA adidas Reebok Roadster WROGN

ಈ ಎಲ್ಲಾ ಪ್ರೀಮಿಯಂ ಬ್ರಾಂಡ್‌ಗಳ ಶರ್ಟ್, ಪ್ಯಾಂಟ್, ಜೀನ್ಸ್‌ಗಳು, ಶೂಗಳು ಮತ್ತು ಒಳಉಡುಪುಗಳು ರಿಯಾಯ್ತಿ ದರದಲ್ಲಿ (Upto 70%) ದೊರೆಯುತ್ತವೆ. ಈ ಅವಕಾಶ ಸ್ಟಾಕ್ ಇರುವವರೆಗೆ ಮಾತ್ರ

70% ರ ವರೆಗೆ

**ಉದಯ ಸೂಪರ್ ಬಜಾರ್** ಹದಡಿ ರಸ್ತೆ, ದಾವಣಗೆರೆ.

# ವಾರ ಭವಿಷ್ಯ

**ದಿನಾಂಕ : 24.10.2021 ರಿಂದ 30.10.2021**
**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕಲಾವಿದರಿಗೆ ಬರಬೇಕಾಗಿರುವ ಸಂಭಾವನೆ ಕೈಸೇರಲಿದೆ. ಸರ್ಕಾರದಿಂದ ನೆರವು, ಹೋಟೆಲ್ ಉದ್ಯಮದಲ್ಲಿ ಸಾಕಷ್ಟು ಚೇತರಿಕೆ. ಹಣಕಾಸು ವ್ಯವಹಾರದಲ್ಲಿ ನಷ್ಟ, ನಿರುದ್ಯೋಗಿಗಳ ಸಮಸ್ಯೆ ತಕ್ಕಮಟ್ಟಿಗೆ ಪರಿಹಾರವಾಗಲಿದೆ. ಯಾವುದೇ ಕಾರಣಕ್ಕೂ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಬೇಡಿ. ಉದ್ಯಮಿಗಳು ಸರ್ಕಾರ ಕೊಡುವ ಭರವಸೆಯನ್ನೇ ನಂಬುವುದರಲ್ಲಿ ಅರ್ಥವಿಲ್ಲ. ಪ್ರಯಾಣದಿಂದ ದೇಹಾಯಾಸ, ನ್ಯಾಯಾಲಯಗಳ ವ್ಯಾಜ್ಯಗಳನ್ನು ಕೋರ್ಟ್ ಹೊರಗೆ ರಾಜೀ-ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳಿ, ಬೇರೆಯವರ ವೈಯಕ್ತಿಕ ಭಾವನೆಗಳನ್ನು ಗೌರವಿಸುವುದನ್ನು ಕಲಿಯಿರಿ. ಹಿರಿಯರಿಂದ ಉತ್ತಮ ಸಲಹೆಗಳು, ಭಾನು -ಮಂಗಳ – ಗುರು- ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವಿದೇಶದಲ್ಲಿರುವವರಿಗೆ ಹೆಚ್ಚಿನ ಸೌಲಭ್ಯಗಳೊಂದಿಗೆ ವೇತನದಲ್ಲೂ ಹೆಚ್ಚಳ. ಬೇರೆ ಕಡೆ ಲಕ್ಷ್ಯಕೊಡದೆ, ನಿಮ್ಮ ಕರ್ತವ್ಯದಲ್ಲಿ ತೊಡಗಿಕೊಳ್ಳುವುದು ಮೇಲು. ಅತ್ಯುನ್ನತ ಗುತ್ತಿಗೆದಾರರಿಗೆ, ದೇಶ-ವಿದೇಶಗಳಿಂದ ಉತ್ತಮ ಅವಕಾಶಗಳು, ಮೋಟರ್ ವಾಹನಗಳ ಬಿಡಿಭಾಗಗಳ ವ್ಯವಹಾರ ವಿಸ್ತರಿಸುತ್ತಾ ಹೋಗಲಿದೆ. ಆದಾಯದ ಮೂಲದಲ್ಲಿ ಹೆಚ್ಚಳ, ಪ್ರಾಚೀನ ವೈದ್ಯಕೀಯ ಪದ್ಧತಿ ನಡೆಸುತ್ತಿರುವವರಿಗೆ ಬೇಡಿಕೆ, ಅವಿವಾಹಿತರಿಗೆ ಕಂಕಣಬಲ, ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿರುವುದರಿಂದ, ಹೊಸ ಯೋಜನೆಗಳನ್ನು ಸದ್ಯದ ಮಟ್ಟಿಗೆ ಮುಂದೂಡಿ, ಗುರುಗಳ ಸೇವೆಮಾಡಿರಿ. ಗುರು -ಶುಕ್ರ -ಶನಿ -ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಆತ್ಮವಿಶ್ವಾಸದೊಂದಿಗೆ ವ್ಯವಹಾರವನ್ನು ಮುಂದುವರೆಸಿಕೊಂಡು ಹೋದಲ್ಲಿ ನಿಮ್ಮ ಭಾಗ್ಯವನ್ನೇ ಬದಲಾಯಿಸಲಿದೆ. ಇದರಿಂದ ಸಾರ್ಥಕ ಮನೋಭಾವ ಹೊಂದುವಿರಿ. ಶುಭ ಸಮಾರಂಭಕ್ಕೆ ಪರಿವಾರದೊಡನೆ ಭಾಗವಹಿಸುವಿರಿ, ಶ್ರಮಪಡುವುದು ಜೀವನದಲ್ಲಿ ಅನಿವಾರ್ಯವಾದರೂ, ಅದಕ್ಕೊಂದು ಇತಿಮಿತಿ ಹಾಕದೇ ಹೋದಲ್ಲಿ , ಅದು ಆರೋಗ್ಯದ ಮೇಲೆ ಅಡ್ಡಪರಿಣಾಮ, ವ್ಯವಹಾರದಲ್ಲಿ ನೆರವು ಕೋರುವ ಸ್ನೇಹಿತರಿಗೆ ಮುಕ್ತ ಹಸ್ತದಿಂದ ಸಹಾಯ ಮಾಡುವಿರಿ. ಅತಿವೇಗದ ವಾಹನ ಚಾಲನೆ ಅಪಾಯಕ್ಕೆ ಆಹ್ವಾನ, ಕುಲದೇವತಾ ದರ್ಶನ ಭಾಗ್ಯ ಒದಗಿಬರಲಿದೆ. ಸೋಮ -ಮಂಗಳ -ಬುಧ – ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ರೈತಾಪಿ ಮಿತ್ರರಿಗೆ ಈ ಹಿಂದೆ ನಡೆದ ಘಟನೆಗಳಿಂದ ಆದ ನಷ್ಟಗಳು ಈ ವಾರದಿಂದ ಭರ್ತಿಯಾಗಲಿವೆ. ಜೊತೆಗೆ, ಸರ್ಕಾರದಿಂದ ಧನ ಸಹಾಯ, ಹಣ್ಣು, ತರಕಾರಿ, ಹೂವು, ಮಾರಾಟ ಹೆಚ್ಚಲಿದೆ, ಉಳಿತಾಯದ ಗಂಟು ಕರಗುವ ಮುನ್ನ, ಅದಕ್ಕೊಂದು ಸರಿಯಾದ ವ್ಯವಸ್ಥೆಯನ್ನು ಮಾಡುವುದು ಲೇಸು. ಮಗನಿಗೆ ಹೆಂಡತಿಯ ತವರುಮನೆಯಿಂದ ನೆರವು, ಹೊಸ ಯೋಜನೆಗಳ ತಂತ್ರವನ್ನು ಮತ್ತೊಬ್ಬರ ಬಳಿ ಹೇಳಬೇಡಿ. ಹಿತಶತ್ರುಗಳು ಅದನ್ನು ದುರುಪಯೋಗಪಡಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಳ್ಳಿ, ಮನೆಯ ಹಿರಿಯರ ಆರೋಗ್ಯಕ್ಕಾಗಿ ತುಸು ಖರ್ಚು, ಹಣಕಾಸಿನ ಪರಿಸ್ಥಿತಿ ಸಾಧಾರಣ. ಗೋವು ಮತ್ತು ಗುರುಗಳ ಸೇವೆ ಮಾಡಿ. ಸೋಮ -ಬುಧ -ಗುರು -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸರ್ಕಾರಿ ನೌಕರರಿಗೆ ಅವರ ಮೇಲಾಧಿಕಾರಿಗಳಿಂದ ಪ್ರಶಂಸೆ ಮಾತುಗಳೊಂದಿಗೆ, ಪದೋನ್ನತಿಗೆ ಶಿಫಾರಸ್ಸು, ರಾಜಕೀಯ ರಂಗದಲ್ಲಿರುವವರಿಗೆ ಜನಾನುರಾಗದೊಂದಿಗೆ ಪಕ್ಷದಲ್ಲಿ ಉತ್ತಮ ಸ್ಥಾನಮಾನ, ಅರ್ಧಕ್ಕೇ ನಿಂತಿದ್ದ ಕೆಲಸಗಳು ಸ್ನೇಹಿತರ ಸಹಾಯದಿಂದ ಮತ್ತೆ ಚಾಲನೆ, ತೈಲೋದ್ಯಮದಲ್ಲಿ ಈ ಹಿಂದೆ ಹೂಡಿದ್ದ ಬಂಡವಾಳ ಲಾಭ ತರಲಿದೆ. ಬಂಧುಗಳೊಂದಿಗಿದ್ದ ವೈಮನಸ್ಯ ದೂರವಾಗಿ ಸಾಮರಸ್ಯ ಮೂಡಲಿದೆ. ಸೋದರಿಯ ಆರೋಗ್ಯದ ಚಿಂತೆ ನಿಮ್ಮನ್ನು ಬಾಧಿಸಲಿದೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಹಬ್ಬದ ವಾತಾವರಣ, ಸಂತಸದ ಕ್ಷಣಗಳನ್ನು ಅನುಭವಿಸುವಿರಿ. ಆದಾಯದ ಮೂಲದಲ್ಲಿ ಹೆಚ್ಚಿನ ಕೊರತೆ. ಖರ್ಚಿಗೊಂದು ಮಿತಿಯಿರಲಿ. ಭಾನು -ಮಂಗಳ -ಶುಕ್ರ -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಉದ್ಯಮ ಕ್ಷೇತ್ರದಲ್ಲಿರುವ ಮಹಿಳೆಯರು ಸಾಕಷ್ಟು ಉತ್ತಮ ಸಾಧನೆಗಳನ್ನು ಮಾಡಿ, ಕೀರ್ತಿ ಪತಾಕೆ ಹಾರಿಸುವರು. ಆತ್ಮಾಭಿಮಾನ ಒಳ್ಳೆಯದೇ ಆದರೂ ಅದು ಅತಿಯಾದಲ್ಲಿ, ಅಪಾಯವನ್ನುಂಟು ಮಾಡಬಹುದು. ವ್ಯಾಪಾರದಲ್ಲಿ ಭರವಸೆ ಕಳೆದುಕೊಂಡ ವರ್ತಕರಿಗೆ, ಮಾರುಕಟ್ಟೆಯಲ್ಲಿ ಭರವಸೆ ಕಂಡುಬರಲಿದೆ. ಗೃಹನಿರ್ಮಾಣದ ವಿಚಾರವನ್ನು ಕೈಗೆತ್ತಿಕೊಳ್ಳಲು ಇದು ಸಕಾಲ. ಸೋದರನ ಮದುವೆ ವಿಚಾರ ಈ ವಾರ ಮುನ್ನೆಲೆಗೆ ಬರಲಿದೆ. ಮಕ್ಕಳ ನಡಾವಳಿಯಲ್ಲಿ ಕಂಡುಬರುವ ವ್ಯತ್ಯಾಸದಿಂದ ಮನಸ್ಸಿಗೆ ಮುಜುಗುರ, ವಿವಾದಗಳಿಂದ ದೂರವಿರುವುದನ್ನು ಕಲಿಯಿರಿ. ವಾಹನ ಚಾಲನೆ ವೇಳೆ ತುಸು ಮೈರೆತರೂ, ಅಪಘಾತ ತಪ್ಪಿದ್ದಲ್ಲ. ಗುರುಗಳ ಸೇವೆಮಾಡಿ. ಬುಧ -ಗುರು -ಶನಿ -ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಆರ್ಥಿಕ ಮುಗ್ಗಟ್ಟಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವಿರಿ. ಹಿರಿಯರ ಆರೋಗ್ಯದಲ್ಲಿ ಚೇತರಿಗೆ ನಿವೇಶನದ ಖರೀದಿ ವಿಚಾರವನ್ನು ಅನುಭವಿಗಳ ಬಳಿ ಚರ್ಚಿಸಿ, ನಂತರ ನಿರ್ಧಾರ ತೆಗೆದುಕೊಳ್ಳುವುದು ಮೇಲು. ರೂಢಿಸಿಕೊಂಡಿರುವ ದುರಭ್ಯಾಸವನ್ನು ಬಿಡುವುದು ಉತ್ತಮ. ನೀವು ತೆಗೆದುಕೊಳ್ಳುವ ತಪ್ಪು ನಿರ್ಣಯಗಳು, ಮನೆಮಂದಿಯನ್ನು ಚಿಂತೆಗೀಡುಮಾಡಲಿವೆ. ವ್ಯವಹಾರದಲ್ಲಿ ಮುಂದೆ ಹೋಗಿದ್ದ ಪಾಲುದಾರಿಕೆ ಮಾತುಕತೆಗಳು ಮತ್ತೆ ಮುನ್ನೆಲೆಗೆ ಬರಲಿದೆ. ಕಟ್ಟಡ ಸಾಮಗ್ರಿ ಮಾರಾಟಗಾರರಿಗೆ ಭರ್ಜರಿ ವ್ಯಾಪಾರವಾಗಲಿದೆ.ಆದಾಯದ ಮೂಲದಲ್ಲಿ ಹೆಚ್ಚಳ, ಅಧ್ಯಾಪಕ ವೃತ್ತಿಯಲ್ಲಿರುವವರಿಗೆ ಉತ್ತಮ ದಿನಗಳು. ಗುರು -ಶುಕ್ರ -ಶನಿ -ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನಿಮ್ಮ ವರ್ಚಸ್ಸು ಕಾರ್ಯಕ್ಷೇತ್ರದಲ್ಲಿ ಯಶಸ್ಸಿಗೆ ಕಾರಣವಾಗಲಿದೆ. ವೈಯಕ್ತಿಕ ಸಮಸ್ಯೆಗಳಿಗೆ ಸೂಕ್ತ ವ್ಯಕ್ತಿಯಿಂದ ಉತ್ತಮ ಪರಿಹಾರ, ಮಕ್ಕಳಿಗೆ ಜವಾಬ್ದಾರಿಯ ಅರಿವನ್ನುಂಟುಮಾಡಿಕೊಡಲು ಸಕಾಲ. ಮೀರಿದಲ್ಲಿ ಅವರೇ ನಿಮಗೆ ಬುದ್ಧಿವಾದವನ್ನು ಹೇಳಬಹುದು. ತುಸು ಜಾಣ್ಮೆಯಿಂದ ಆಲೋಚಿಸಿದಲ್ಲಿ ದೊಡ್ಡ ಮಟ್ಟದ ಉದ್ಯೋಗವೇ ಕೈಗೆಟುಕಬಹುದು. ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ ಸಿಗಲಿದೆ. ಮತ್ತೊಬ್ಬರೊಂದಿಗೆ ವಿನಾಕಾರಣ ವಾಗ್ವಾದ ಮಾಡುವುದರಿಂದ ನಿಮ್ಮ ಘನತೆಗೆ ಧಕ್ಕೆ, ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರಬೇಡ. ಆರೋಗ್ಯದ ವಿಚಾರದಲ್ಲಿ ಉದಾಸೀನತೆ ಬೇಡ. ಭಾನು -ಸೋಮ -ಮಂಗಳ- ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹಲವು ಸಂಘ-ಸಂಸ್ಥೆಗಳಿಗೆ ಕಾನೂನಿನ ತೊಡಕುಗಳು ಎದುರಾಗಲಿವೆ. ಸೂಕ್ತ ವಕೀಲರೊಂದಿಗೆ ಸಮಾಲೋಚಿಸಿ, ಮಡದಿಯು ನೀಡಬಹುದಾದ ಹಲವು ಸಲಹೆಗಳು ಮುಂದೆ ನಿಮ್ಮ ಪ್ರಯೋಜನಕ್ಕೆ ಬರಲಿವೆ. ಆಸ್ತಿಗಿದ್ದ ಶತ್ರುಗಳ ಬಾಧೆ ನಿವಾರಣೆಯಾಗಲಿದೆ. ಆರ್ಥಿಕ ಸ್ಥಿತಿಗತಿಯು ಕ್ರಮೇಣ ವೃದ್ಧಿಗೊಳ್ಳುವುದರಿಂದ ಹಣಕಾಸಿನ ಪರಿಸ್ಥಿತಿ ಸಾಕಷ್ಟು ಸುಧಾರಿಸಲಿದೆ. ಪರರ ದೋಷಗಳನ್ನು ಹುಡುಕುವ ಮೊದಲು ನಿಮ್ಮ ಆತ್ಮಾವಲೋಕನ ಮಾಡಿಕೊಳ್ಳಿ. ಲೇವಾದೇವಿ ವ್ಯವಹಾರ ಸದ್ಯಕ್ಕೆ ಬೇಡ, ಷೇರು ಮಾರುಕಟ್ಟೆಯಲ್ಲಿ ಹೆಚ್ಚಿನ ಬಂಡವಾಳ ಹೂಡುವ ಸಾಹಸಕ್ಕೆ ಕೈಹಾಕಬೇಡಿ. ಕುಲದೇವತಾರಾಧನೆ ಮಾಡಿರಿ. ಸೋಮ -ಬುಧ -ಗುರು -ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವಿದ್ಯಾರ್ಥಿಗಳು ಶಿಸ್ತುಬದ್ಧ ಜೀವನವನ್ನು ರೂಢಿಸಿಕೊಳ್ಳದೇ ಹೋದಲ್ಲಿ, ಮುಂದೆ ತುಂಬಾ ತೊಂದರೆಗಳನ್ನು ಜೀವನದಲ್ಲಿ ಎದುರಿಸಬೇಕಾದೀತು. ಕೈಗಾರಿಕೋದ್ಯಮಿಗಳಿಗೆ ಹೊಸ ಅವಕಾಶಗಳು ಬರಲಿದ್ದು, ಸೂಕ್ತವಾದುದನ್ನು ಆರಿಸಿಕೊಳ್ಳುವುದು ಮೇಲು. ಸಕಾರಾತ್ಮಕ ಚಿಂತನೆಗಳನ್ನು ಮಾಡಲು ಪ್ರಯತ್ನಿಸಿ. ಆತ್ಮೀಯರಾದ ಗೆಳೆಯರು ಕೊಡುವ ಉತ್ತಮ ಸಲಹೆಗಳು ನಿಮ್ಮ ವ್ಯಾವಹಾರಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಿವೆ. ಉತ್ತಮಗೊಂಡ ಹಣಕಾಸಿನ ಪರಿಸ್ಥಿತಿ, ಹೊಸ ಯೋಜನೆಗಳಿಗೆ ನೆರವಾಗಲಿವೆ. ಮಕ್ಕಳ ವಿದ್ಯಾಭ್ಯಾಸವನ್ನು ಕಡೆಗಣಿಸಬೇಡಿ. ಬದಲಾದವಣೆ ಬದುಕಿಗೆ ಉತ್ತಮ ಮಾರ್ಗದರ್ಶನವಾಗಲಿದೆ. ಗೋ ಸೇವೆ ಮಾಡಿರಿ. ಸೋಮ -ಗುರು -ಶನಿ -ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಉದಾಸೀನತೆಯಿಂದಾಗಿ ವಿದ್ಯಾರ್ಥಿಗಳು ತಮಗೆ ಬರಲಿರುವ ಅತ್ಯುತ್ತಮ ಅವಕಾಶಗಳನ್ನು ತಾವಾಗೆಯೇ ಕೈ ಚೆಲ್ಲುವರು. ವ್ಯವಹಾರದಲ್ಲಿ ಬದಲಾವಣೆ ಬಯಸುವ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಸಿಗದೇ ಹೋಗಬಹುದು. ಪಾಲುದಾರರೊಂದಿಗೆ ತಾಳ್ಮೆಯಿಂದ ವರ್ತಿಸಿ, ಕೃಷಿಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ, ಉತ್ತಮ ಆದಾಯದೊಂದಿಗೆ ಹೆಚ್ಚಿನ ಸೌಲಭ್ಯಗಳು ದೊರೆಯಲಿವೆ. ಯಾರೊಂದಿಗೇ ಆಗಲಿ ಅತಿ ಸಲಿಗೆಯಿಂದ ವರ್ತಿಸಬೇಡಿ. ದರ್ಜಿಗಳಿಗೆ ಬಿಡುವಿಲ್ಲದಷ್ಟು ಕೆಲಸ. ಖರ್ಚುವೆಚ್ಚಗಳಲ್ಲಿ ಇತಿಮಿತಿ ಇರಲಿ, ಹಳೇಕಾಯಿಲೆಗಳು ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಿ. ವಿಷ್ಣುಸಹಸ್ರನಾಮ ಪಠಿಸುವುದು ಉತ್ತಮ. ಗುರು -ಶುಕ್ರ- ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವೃತ್ತಿಯಲ್ಲಿ ಹೆಚ್ಚಿನ ಲಾಭವನ್ನು ತಂದರೂ ಕೂಡ ಹೆಚ್ಚುತ್ತಿರುವ ಖರೀದಿಯಿಂದಾಗಿ ಖರ್ಚುಗಳು, ಇರುವುದರಲ್ಲೇ ಹೊಂದಿಸಿಕೊಂಡು ಮನೆ ವಾರ್ತೆ ನಡೆಸುವುದು ಉತ್ತಮ. ಮನೆಮಂದಿಯೊಂದಿಗೆ ಅನಗತ್ಯವಾಗಿ ಮಾತು ಬೆಳೆಸಬೇಡಿ. ಪೀಠೋಪಕರಣ ತಯಾರಕರಿಗೆ ವಹಿವಾಟು ಹೆಚ್ಚಲಿದೆ. ಔಷಧಿ ತಯಾರಕರಿಗೆ, ತಪಾಸಣಾಧಿಕಾರಿಗಳಿಂದ ಅನಗತ್ಯ ಕಿರುಕಳ, ಲೆಕ್ಕಪರಿಶೋಧಕರಿಗೆ ಬೇಡಿಕೆ ಹೆಚ್ಚಲಿದೆ. ವೃಥಾ ತಿರುಗಾಟದಿಂದ ದೇಹಾಲಸ್ಯ, ಅತಿಯಾದ ಮೋಜು, ಮಸ್ತಿ ಆರೋಗ್ಯ ದೃಷ್ಟಿಯಿಂದ ಒಳ್ಳೆಯದಲ್ಲ. ಗುರು- ಹಿರಿಯರನ್ನು ಗೌರವಿಸಿರಿ. ಭಾನು -ಬುಧ -ಗುರು -ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ :- 24.10.2021 ಭಾನುವಾರ ಸಂಕಷ್ಟಚತುರ್ಥೀ ಚಂದ್ರೋದಯ ರಾತ್ರಿ 8.40 ಕ್ಕೆ.**

## 100 ಕೋಟಿ ಲಸಿಕೆ ನಮ್ಮ ಹೆಗ್ಗಳಿಗೆ

**(1ನೇ ಪುಟದಿಂದ)** ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಅವರುಗಳು ಕೊರೊನಾ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆ ಯಲ್ಲಿ ಲಸಿಕೆ ನೀಡಿ, ಸೇವೆ ಸಲ್ಲಿಸಿದ ಕೊರೊನಾ ವಾರಿಯರ್ಸ್‌ಗಳಾದ ವೈದ್ಯರು, ದಾದಿಯರು, ವೈದ್ಯಕೀಯ ಸಿಬ್ಬಂದಿಗಳನ್ನು ಸನ್ಮಾನಿಸಿದರು. ಇದೇ ವೇಳೆ ಬಿಜೆಪಿ ಕಾರ್ಯಕರ್ತರು ಸಿಹಿ ವಿತರಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುಧಾ ಜಯರುದ್ರೇಶ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಮುಖಂಡರಾದ ಬಿ.ಎಸ್. ಜಗದೀಶ್, ಅಜ್ಜಂಪುರ ಶೆಟ್ರು ಮೃತ್ಯುಂಜಯ, ಶಿವಶಂಕರ್, ಶಿವನಗೌಡ ಪಾಟೀಲ್, ಶಿವರಾಜ್ ಪಾಟೀಲ್ ಸೇರಿದಂತೆ ಇತರರು ಇದ್ದರು.

# ಬಿಹಾರ: ಮುರಿಯುವ ಹಂತದಲ್ಲಿ ಮಹಾಮೈತ್ರಿ

ಪಾಟ್ನಾ, ಅ. 23 – ವರ್ಷದ ಹಿಂದಷ್ಟೇ ನಡೆದ ವಿಧಾನಸಭಾ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿದ ಸಾಧನೆ ಮಾಡಿದ್ದ ಬಿಹಾರದ ಪ್ರತಿಪಕ್ಷಗಳ ಮಹಾಮೈತ್ರಿಕೂಟ, ಈಗ ಕುಸಿಯುವ ಹಂತಕ್ಕೆ ಬಂದಿದೆ.

ಐದು ಪ್ರತಿಪಕ್ಷಗಳ ಮೈತ್ರಿಕೂಟ ಗೆಲುವಿಗೆ ಕೇವಲ 10 ಸ್ಥಾನಗಳ ದೂರದಲ್ಲಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಎನ್.ಡಿ.ಎ. ರಾಜ್ಯದ ಎಲ್ಲಾ 40 ಸ್ಥಾನಗಳಲ್ಲಿ ಗೆಲುವು ಸಾಧಿಸಿದ ನಂತರ, ಪ್ರತಿಪಕ್ಷಗಳ ಸಾಧನೆ ಗಮನಾರ್ಹವಾಗಿತ್ತು.

ಆದರೆ, ಮುಂದಿನ ಚುನಾವಣೆಯಲ್ಲಿ ಎಲ್ಲಾ 40 ಸ್ಥಾನಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದೆ ಎಂದು ರಾಜ್ಯ ಎಐಸಿಸಿ ಉಸ್ತುವಾರಿ ಭಕ್ತ ಚರಣ್ ದಾಸ್ ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಈ ನಿಲುವು ಮೈತ್ರಿ ಧರ್ಮಕ್ಕೆ ಎಸಗಿದ ದ್ರೋಹ ಎಂದು ಆರ್.ಜೆ.ಡಿ. ರಾಜ್ಯಾಧ್ಯಕ್ಷ ಜಗದಾನಂದ ಸಿಂಗ್ ಹೇಳಿದ್ದಾರೆ.

2024ರಲ್ಲಿ ಚುನಾವಣೆ ನಡೆಯಬೇಕಿದೆ. ಈಗಲೇ ಲೋಕಸಭಾ ಚುನಾವಣೆಗಳ ಬಗ್ಗೆ ಮಾತನಾಡುವ ಅಗತ್ಯವಾದರೂ ಏನಿದೆ? ಎಂದು ಸಿಂಗ್ ಪ್ರಶ್ನಿಸಿದ್ದಾರೆ.

ಮುಂದಿನ ವಾರ ತಾರಾಪುರ ಹಾಗೂ ಕುಶೇಶ್ವರ ಆಸ್ಥಾನ್ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಬೇಕಿದೆ. ಕಾಂಗ್ರೆಸ್ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಆರ್.ಜೆ.ಡಿ. ಎರಡೂ ಕ್ಷೇತ್ರಗಳಿಗೆ ಅಭ್ಯರ್ಥಿ ಪ್ರಕಟಿಸಿರುವುದೇ ಒಡಕಿಗೆ ಕಾರಣವಾಗಿದೆ.

ಕೆಲ ದಿನಗಳ ಕಾಲ ಮೌನವಾಗಿದ್ದ ಕಾಂಗ್ರೆಸ್, ನಂತರದಲ್ಲಿ ಎರಡೂ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಹಠಾತ್ತನೇ ಪ್ರಕಟಿಸಿದೆ. ಇತ್ತೀಚೆಗೆ ಕಾಂಗ್ರೆಸ್‌ಗೆ ಯುವ ನಾಯಕ ಕನ್ಹಯ್ಯ ಕುಮಾರ್ ಹಾಗೂ ಆರ್.ಜೆ.ಡಿ.ಯ ತೇಜಸ್ವಿ ಯಾದವ್ ನಡುವಿನ ಚಕಮಕಿಯೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಆದರೆ, ಒಡಕಿಗೆ ಕನ್ಹಯ್ಯ ಕುಮಾರ್ ಕಾರಣವಲ್ಲ ಎಂದಿರುವ ಬಿಹಾರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಅನಿಲ್ ಶರ್ಮ, ಕಾಂಗ್ರೆಸ್ ಪಕ್ಷಕ್ಕೆ ಮೇಲ್ಜಾತಿಯವರು, ದಲಿತರು ಹಾಗೂ ಮುಸ್ಲಿಮರ ಬೆಂಬಲ ಮತ್ತೆ ಸಿಗಬಾರದು ಎಂಬುದು ಆರ್.ಜೆ.ಡಿ.ಯ ಲಾಲು ಪ್ರಸಾದ್ ಯಾದವ್ ಅವರ ತಂತ್ರಗಾರಿಕೆಯಾಗಿದೆ. ಕಾಂಗ್ರೆಸ್ ಬಲಿಷ್ಠವಾದರೆ ಅದು ಆರ್.ಜೆ.ಡಿ.ಗೆ ಸೆಕ್ಯುಲರ್ ಪರ್ಯಾಯವಾಗಲಿದೆ ಎಂದವರು ಭಾವಿಸಿದ್ದಾರೆ ಎಂದಿದ್ದಾರೆ.

ಇದೇ ಕಾರಣಕ್ಕಾಗಿ ಗೆಲ್ಲುವ ಸಾಧ್ಯತೆ ಇರುವ ಕಡೆಗಳಲ್ಲಿ ನಮ್ಮ ಪಕ್ಷದ ಮೇಲ್ಜಾತಿಯ ಅಭ್ಯರ್ಥಿಗಳು ಸಿಗದಂತೆ ಲಾಲು ನೋಡಿಕೊಳ್ಳುತ್ತಾ ಬಂದಿದ್ದಾರೆ. ಒಂದೋ ಆ ಕ್ಷೇತ್ರಗಳನ್ನು ಆರ್.ಜೆ.ಡಿ.ಗೆ. ಪಡೆದುಕೊಳ್ಳುತ್ತಾರೆ ಇಲ್ಲವೇ ಮೈತ್ರಿ ಕೂಟದ ಬೇರೆ ಪಕ್ಷಗಳಿಗೆ ಕ್ಷೇತ್ರ ಸಿಗುವಂತೆ ಮಾಡುತ್ತಾರೆ ಎಂದು ಶರ್ಮಾ ಹೇಳಿದ್ದಾರೆ.

ಸ್ಪರ್ಧಿಸಿದ 70 ಕ್ಷೇತ್ರಗಳಲ್ಲಿ ಕೇವಲ 20ರಲ್ಲಿ ಗೆದ್ದಿರುವುದಾಗಿ ಆರ್.ಜೆ.ಡಿ. ನಮ್ಮನ್ನು ಟೀಕಿಸುತ್ತದೆ. ಆದರೆ, ನಮ್ಮಿಂದ ಸಾಕಷ್ಟು ಸ್ಥಾನಗಳನ್ನು ಕಸಿಯಲಾಯಿತು ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ತನ್ನ ಮತಗಳನ್ನು ತರುವಲ್ಲಿ ಆರ್.ಜೆ.ಡಿ. ವಿಫಲವಾಯಿತು ಎಂದು ಭಕ್ತ ಚರಣ್ ದಾಸ್ ಹೇಳಿದ್ದಾರೆ.

# ಸಾರ್ವಜನಿಕ ಆಸ್ಪತ್ರೆಯ ಗುತ್ತಿಗೆ ಆಧಾರಿತ ‘ಡಿ’ ಗ್ರೂಪ್ ನೌಕರರನ್ನು ಕೈಬಿಡದಿರಲಿ



**ಹರಿಹರ**

ಹರಿಹರ, ಅ.23- ಕಳೆದ 15 ವರ್ಷಗಳಿಂದ ನಿರಂತರವಾಗಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ನಾನ್‌ಕ್ಲಿನಿಕ್ ಹಾಗೂ ಗುತ್ತಿಗೆ ಆಧಾರಿತ ‘ಡಿ’ ಗ್ರೂಪ್ ನೌಕರರನ್ನು ಕೆಲಸದಿಂದ ಕೈಬಿಡದಂತೆ ಕಾರ್ಮಿಕ ಸಂಘದ ಗೌರವಾಧ್ಯಕ್ಷ ಹೆಚ್.ಕೆ. ಕೊಟ್ರಪ್ಪ, ಅಧ್ಯಕ್ಷ ಜಿ.ಕೆ. ಪಂಚಾಕ್ಷರಿ ಡಿಹೆಚ್‌ಓಗೆ ಮನವಿ ಮಾಡಿದ್ದಾರೆ.

ಇದೇ ವೇಳೆ ಮಾತನಾಡಿದ ಅವರು, ಸಾರ್ವಜನಿಕ ಆಸ್ಪತ್ರೆಯಲ್ಲಿ ನಾನ್ ಕ್ಲಿನಿಕ್ ಸೇವೆಯಲ್ಲಿ 10 ಜನ ಹಾಗು ಗುತ್ತಿಗೆ ಆಧಾರಿತ ದಿನಗೂಲಿ ನೌಕರರಾಗಿ 15 ಜನರು ಕೆಲಸ ಮಾಡುತ್ತಿದ್ದಾರೆ. ಸಕಾಲಕ್ಕೆ ವೇತನ ಬಿಡುಗಡೆಯಾಗದೇ, ಮೂರು ಅಥವಾ 5 ತಿಂಗಳಿಗೊಮ್ಮೆ ವೇತನ ಬಿಡುಗಡೆಯಾಗುತ್ತಿದೆ ಎಂದು ದೂರಿದರು.

ಯಾವುದೇ ಇಎಸ್‌ಐ, ಪಿಎಫ್ ಸಹ ನೀಡಿರುವುದಿಲ್ಲ. ಆದರೂ ಆಸ್ಪತ್ರೆ ಸ್ವಚ್ಛತೆ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ಕೋವಿಡ್ ಸಂದರ್ಭದಲ್ಲೂ ಕೂಡ ಹಗಲು, ರಾತ್ರಿ ರೋಗಿಗಳ ಸೇವೆ ಮಾಡುತ್ತಾ ಬಂದಿದ್ದಾರೆ. ಇದೀಗ ಜೀವನ ನಿರ್ವಹಣೆ ಕೂಡ ಸಾಧ್ಯವಾಗುತ್ತಿಲ್ಲ ಎಂದರು.

ಕಳೆದ ಬಾರಿ ಮೈಸೂರು ಏಜೆನ್ಸಿಯವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕಾರಣಾಂತರಗಳಿಂದ ಸ್ಥಗಿತಗೊಳಿಸಿದ್ದು, ಇದೀಗ ದಾವಣಗೆರೆಯ ಟಾರ್ಗೆಟ್ ಏಜೆನ್ಸಿಯವರಿಗೆ ಗುತ್ತಿಗೆ ನೀಡಲಾಗಿದೆ. ಆದರೆ ಕೆಲವು ನಿಬಂಧನೆಗಳನ್ನು ಹಾಕಿರುವುದರಿಂದ ಕಾರ್ಮಿಕರು ಬೀದಿಗೆ ಬರುವಂತಾಗಿದೆ ಎಂದು ಹೇಳಿದರು.

ಮನವಿ ಸ್ವೀಕರಿಸಿದ ಡಿಹೆಚ್‌ಓ ನಾಗರಾಜ್ ಮಾತನಾಡಿ, ಮಾನವ ಸಂಪನ್ಮೂಲ ಅಡಿಯಲ್ಲಿ ಸರ್ಕಾರದ ಆದೇಶದನ್ವಯ ಟೆಂಡರ್ ಪ್ರಕ್ರಿಯೆ ಮಾಡಲಾಗಿದೆ. ನೌಕರರ ಸಮಸ್ಯೆ ಮತ್ತು ಬೇಡಿಕೆಗಳನ್ನು ಸರ್ಕಾರ ಮತ್ತು ಉನ್ನತ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ಶಾಸಕ ಎಸ್. ರಾಮಪ್ಪ ಅವರ ಆಪ್ತ ಸಹಾಯಕ ಹನುಮಂತಪ್ಪ, ಸಂಘದ ಅಧ್ಯಕ್ಷ ಪಂಚಾಕ್ಷರಿ, ಪ್ರಧಾನ ಕಾರ್ಯದರ್ಶಿ ಸುರೇಶ್ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ



**ದೇವರಬೆಳಕೆರೆ**

ಮಲೇಬೆನ್ನೂರು, ಅ. 23- ದೇವರಬೆಳಕೆರೆ ಗ್ರಾ.ಪಂ. ಕಛೇರಿಯಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಮಹಿಳಾ ಹೋರಾಟಗಾರ್ತಿ, ಕನ್ನಡ ನಾಡಿನ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಅವರ 243ನೇ ಜಯಂತ್ಯೋತ್ಸವ ಆಚರಿಸಲಾಯಿತು.

ಗ್ರಾ.ಪಂ. ಅಧ್ಯಕ್ಷರಾದ ಗೀತಾ ಪರಶುರಾಮಪ್ಪ, ಉಪಾಧ್ಯಕ್ಷರಾದ ಮಹೇಶ್ವರಮ್ಮ ವಾಗೀಶ್, ಸದಸ್ಯರಾದ ಐ.ಎಸ್. ಮಲ್ಲಿಕಾರ್ಜುನಪ್ಪ, ಎಸ್. ಹೆಚ್. ಚಂದ್ರಪ್ಪ, ತಿಪ್ಪೇಶ್, ಶಿವರಾಜ್, ನಾಗರಾಜ್, ಕರಿಬಸಪ್ಪ, ಚಂದ್ರಮ್ಮ ಪಿಡಿಓ ಶಿವಪ್ಪ ಬಿರಾದಾರ್, ಪತ್ರಿಕಾ ಏಜೆಂಟ್ ಗಣೇಶ್ ಮತ್ತು ಗ್ರಾ.ಪಂ. ಸಿಬ್ಬಂದಿ ಹಾಗೂ ಗ್ರಾಮಸ್ಥರು ಈ ವೇಳೆ ಉಪಸ್ಥಿತರಿದ್ದರು.


## ನಗರದ 6ನೇ ವಾರ್ಡಿನಲ್ಲಿ ಕೋವಿಡ್ ವಾರಿಯರ್ಸ್‌ಗೆ ಸನ್ಮಾನ



ದಾವಣಗೆರೆ, ಅ.23- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ ನೂರು ಕೋಟಿ ಲಸಿಕೆ ಪೂರೈಸಿದ ಸಂದರ್ಭದಲ್ಲಿ ನರ್ಸ್‌ಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ 6ನೇ ವಾರ್ಡ್‌ನ ಸದಸ್ಯರೂ ಆದ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ.ಗೋಣೆಪ್ಪ ಅವರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. 8ನೇ ವಾರ್ಡ್‌ನ ಪಾಲಿಕೆ ಸದಸ್ಯ ಗಾಯಿತ್ರಿ ಬಾಯಿ ಮತ್ತು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭಾಗ್ಯ ಪಿಸಾಳೆ ಮತ್ತು ಇತರರು ಉಪಸ್ಥಿತರಿದ್ದರು.

# ಜಿಗಳಿಯಲ್ಲಿ ಸಂಭ್ರಮದ ವಾಲ್ಮೀಕಿ ಜಯಂತಿ



ಮಲೇಬೆನ್ನೂರು, ಅ.23- ಜಿಗಳಿ ಗ್ರಾಮದ ಗ್ರಾ.ಪಂ. ಕಚೇರಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ವಾಲ್ಮೀಕಿ ವೃತ್ತದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಸ.ಹಿ.ಪ್ರಾ. ಶಾಲೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಮುಖ್ಯಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ಮಲ್ಲಿಕಾರ್ಜುನ್, ನಾಗೇಶ್ ಅವರುಗಳು ವಾಲ್ಮೀಕಿ ಮತ್ತು ರಾಮಾಯಣ ಕುರಿತು ಮಾತನಾಡಿದರು.

ಮೂರು ಕಡೆ ನಡೆದ ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷರಾದ ಆಶಾ ಅಣ್ಣಪ್ಪ, ಉಪಾಧ್ಯಕ್ಷ ಮಲ್ಲನಗೌಡ, ಸದಸ್ಯರಾದ ಡಿ.ಎಂ. ಹರೀಶ್, ಎನ್.ಎಂ. ಪಾಟೀಲ್, ಎಕ್ಕೆಗೊಂದಿ ಚೇತನ್ ಕುಮಾರ್, ಸವಿತಾ ಮಾಕನೂರು ಶಿವು, ಜಿ. ಬೇವಿನಹಳ್ಳಿ ಆನಂದಗೌಡ, ದೇವರಾಜ್, ಜಿ. ಆರ್. ಹಾಲೇಶ್ ಕುಮಾರ್, ಸಿ.ಎನ್. ಪರಮೇಶ್ವರಪ್ಪ, ಪೂಜಾರ್ ನಾಗರಾಜ್, ಮಡಿವಾಳರ ರಂಗಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ ಉಪಸ್ಥಿತರಿದ್ದರು.

ಗ್ರಾಮದ ಮುಖಂಡರಾದ ಬಿಳಸನೂರು ಚಂದ್ರಪ್ಪ, ಕೆ.ಆರ್. ರಂಗಪ್ಪ, ಡಾ. ಎನ್. ನಾಗರಾಜ್, ಕೆ.ಎಸ್. ನಂದ್ಯೆಪ್ಪ, ಕೆ.ಎಂ. ರಾಮಪ್ಪ, ಎಕ್ಕೆಗೊಂದಿ ರುದ್ರಗೌಡ, ಜಿ.ಪಿ. ಹನುಮಗೌಡ, ಬಿ. ಸೋಮಶೇಖರಚಾರಿ, ಕೆ. ಷಣ್ಮುಖಪ್ಪ, ಕೆ. ಲಕ್ಷ್ಮಪ್ಪ, ಕೆ. ಕಟ್ಟೆಪ್ಪ, ಕಾಯಕದ ನಾಗರಾಜ್, ಕಮದೋಡ್ ಬಸಪ್ಪ, ಹದಡಿ ನಾಗಪ್ಪ, ಹಾಲಿವಾಣದ ಚಂದ್ರಪ್ಪ, ಬಿ. ಹೊನ್ನಾಚಾರಿ, ಬಿ. ನಿಂಗಾಚಾರಿ, ಬಿ. ಗಿರಿಯಪ್ಪ, ಬೆಣ್ಣೇರ ನಂದ್ಯೆಪ್ಪ, ಕೃಷ್ಣಮೂರ್ತಿ ಶ್ರೇಷ್ಠಿ, ಟಿ.ಎಸ್. ಗದಿಗೇಶ್, ಡಿ.ಪಿ. ಚಿದಾನಂದ್, ಪತ್ರಕರ್ತ ಪ್ರಕಾಶ್, ಪಿಡಿಓ ಉಮೇಶ್, ಕಾರ್ಯದರ್ಶಿ ಶೇಖರ್ ನಾಯ್ಕ, ಬಿಲ್ ಕಲೆಕ್ಟರ್ ಮೌನೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಘವೇಂದ್ರ ಪಿಯು ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಣೆ



ದಾವಣಗೆರೆ, ಅ. 23- ರಾಘವೇಂದ್ರ ಹೈ-ಟೆಕ್ ಪಿಯು ಕಾಲೇಜ್ ನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಕನ್ನಡ ವಿಭಾಗದ ಮುಖ್ಯಸ್ಥ ಬಸವರಾಜ ಹನುಮಲಿ, ಪ್ರಾಚಾರ್ಯ ಅನಿಲ್ ಕುಮಾರ್ ಶ್ಯಾಗಲೆ, ಕನ್ನಡ ಉಪನ್ಯಾಸಕ ಎಂ.ಆರ್. ಹರೀಶ್, ಭೌತಶಾಸ್ತ್ರ ಉಪನ್ಯಾಸಕ ಸಿ. ವಿಶ್ವನಾಥ ಇತರರಿದ್ದರು.

## ಶನೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸಚಿವ ನಾರಾಯಣಗೌಡ ಭೇಟಿ



ದಾವಣಗೆರೆ, ಅ.23- ನಗರದ ಪಿ.ಬಿ. ರಸ್ತೆಯಲ್ಲಿರುವ ಶನೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಯುವಜನ ಕ್ರೀಡೆ ಹಾಗೂ ರೇಷ್ಮೆ ಸಚಿವ ನಾರಾಯಣಗೌಡ ಅವರು ಭೇಟಿ ನೀಡಿ, ದೇವರ ದರ್ಶನ ಪಡೆದುಕೊಂಡರು. ಈ ಸಂದರ್ಭದಲ್ಲಿ ದೇವಸ್ಥಾನದ ಪುರೋಹಿತ ವೀರಣ್ಣ ಸ್ವಾಮಿ ಹಾಗೂ ಮತ್ತಿತರರಿದ್ದರು.

## ಮದ್ಯ-ಮಾದಕದಿಂದ ದೂರವಿರಿ!

**(1ನೇ ಪುಟದಿಂದ)** ವರ್ಷ ಮಾರ್ಚ್ 31ರವರೆಗೆ ಅಭಿಯಾನ ಮುಂದುವರೆಯಲಿದೆ. ಖಾದಿ ಧರಿಸುವುದು, ಸಾಮಾಜಿಕ ಭೇದಭಾವದಿಂದ ದೂರವಿರುವುದು, ಸಾಮಾಜಿಕ ಸಾಮರಸ್ಯ ಸೇರಿದಂತೆ ಹತ್ತು ಷರತ್ತುಗಳಿಗೆ ಸದಸ್ಯರು ಬದ್ಧವಾಗಿರಬೇಕೆಂದು ತಿಳಿಸಲಾಗಿದೆ.

## ಹಾವು ಕಚ್ಚಿ ಸಾವು : ಕುಟುಂಬಕ್ಕೆ ನೆರವು



ಮಲೇಬೆನ್ನೂರು, ಅ.23- ಪಟ್ಟಣದಲ್ಲಿ ಇತ್ತೀಚೆಗೆ ಹಾವು ಕಡಿದು ಮೃತಪಟ್ಟಿದ್ದ ಪಟ್ಟಾಭಿ ಭೀಮಣ್ಣ ಅವರ ನಿವಾಸಕ್ಕೆ ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ ಅವರು ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದರು.

ಮಲೇಬೆನ್ನೂರು ಪಿಎಸಿಎಸ್ ಅಧ್ಯಕ್ಷ ಪಿ.ಆರ್.ಕುಮಾರ್, ಡಾಬಾ ಕಲ್ಲೇಶ್, ಭಾವಿಕಟ್ಟೆ ಕರಿಬಸಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

# ಚೆನ್ನಮ್ಮನ ಹೋರಾಟ ಯುವಪೀಳಿಗೆಗೆ ಸ್ಫೂರ್ತಿ




**(1ನೇ ಪುಟದಿಂದ)** ನಾಡಿನಲ್ಲಿ ನಾವು ಜೀವಿಸುತ್ತಿದ್ದೇವೆ ಎಂಬುದು ನಮಗೆಲ್ಲಾ ಹೆಮ್ಮೆಯ ಸಂಗತಿ ಎಂದರು.

ಸಿಇಒ ಡಾ. ವಿಜಯ ಮಹಾಂತೇಶ್‌ದಾನಮ್ಮನವರ್ ಮಾತನಾಡಿ, ಸರ್ಕಾರದ ಆದೇಶದಂತೆ ಎಲ್ಲಾ ಜಯಂತಿಗಳಂತೆ ಚೆನ್ನಮ್ಮ ಜಯಂತಿಯನ್ನು ಆಚರಿಸುತ್ತಿದ್ದು, ಈಗಾಗಲೇ ಸಮಾಜದ ಮುಖಂಡರೆಲ್ಲರೂ ರಾಣಿ ಚೆನ್ನಮ್ಮನ ಪುತ್ಥಳಿಯ ನಿರ್ಮಾಣಕ್ಕೆ ಮನವಿ ಸಲ್ಲಿಸಿದ್ದಾರೆ. ಮನವಿಯನ್ನು ಪರಿಶೀಲಿಸಿ ಶೀಘ್ರದಲ್ಲಿಯೇ ಪುತ್ಥಳಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡುತ್ತೇವೆ ಎಂದರು.

ಡಾ.ಅನಿತಾ. ಹೆಚ್.ದೊಡ್ಡಗೌಡರ್ ವಿಶೇಷ ಉಪನ್ಯಾಸ ನೀಡಿ, ಕಿತ್ತೂರು ರಾಣಿ ಚೆನ್ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಅವಳ ಜೀವನ ಚರಿತ್ರೆ, ಧೀರ ಹೋರಾಟ, ದಕ್ಷ ಆಡಳಿತ ವೈಖರಿ ಮಹತ್ತರವಾದದ್ದು. ನಮ್ಮ ನಾಡಿಗೆ ಸ್ವಾತಂತ್ರ್ಯವನ್ನು ತಂದ ವೀರ ಹೋರಾಟಗಾರರಲ್ಲಿ ಪ್ರಪ್ರಥಮ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ, ಬ್ರಿಟಿಷರ ದಾಸ್ಯದಿಂದ ಬಿಡಿಸಲು ತನ್ನ ಪ್ರಾಣವನ್ನು ದೇಶಕ್ಕಾಗಿ ಬಲಿ ನೀಡಿದ ದಿಟ್ಟ ವನಿತೆ. ಚೆನ್ನಮ್ಮನ ಶೌರ್ಯ, ಧೈರ್ಯ, ಸಾಹಸಗಳು ಇಂದಿನ ಯುವಪೀಳಿಗೆಗೆ ಹಾಗೂ ಮಹಿಳೆಯರಿಗೆ ಸ್ಫೂರ್ತಿಯಾಗಬೇಕು. ಹಾಗೂ ಚೆನ್ನಮ್ಮನ ಹೋರಾಟ ಇತಿಹಾಸದಲ್ಲೇ ಅಳಿಸಲಾಗದ ಮುನ್ನುಡಿಯಾಗಿದೆ. ತನ್ನ 50ನೇ ವಯಸ್ಸಿನಲ್ಲಿ ವೀರ ಮರಣವನ್ನು ಹೊಂದಿದ ಮಹಾನ್ ನಾಯಕಿ ಎಂದು ಹೇಳಿದರು.

ಮಹಾನಗರಪಾಲಿಕೆ ಮೇಯರ್ ಎಸ್. ಟಿ.ವೀರೇಶ್ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮ ಸ್ವಾತಂತ್ರ್ಯಕ್ಕಾಗಿ ಹಾಗೂ ತನ್ನ ರಾಜ್ಯದ ಉಳಿವಿಗಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ. ಅವಳ ದೇಶ ಸೇವೆಗಾಗಿ ತನ್ನ ಪ್ರಾಣಾರ್ಪಣೆ ಮಾಡಿದ ಕಾರಣಕ್ಕೆ ನಾವು ಇಂದಿಗೂ ಸ್ಮರಿಸುತ್ತೇವೆ. ಇಂತಹ ಮಹಾತ್ಮರ ಹೆಸರು ಅಜರಾಮರವಾಗಬೇಕಾದರೆ ಕೇವಲ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಸಾಲದು. ಅವರ ವಿಚಾರ ಧಾರೆಗಳ ಬಗ್ಗೆ ಇಂದಿನ ಪೀಳಿಗೆಯ ಜನತೆಗೆ ಹೋರಾಟಗಾರರ ಜೀವನಾದರ್ಶಗಳು ದೇಶಕ್ಕೆ ಮಾದರಿಯಾಗಬೇಕು. ಹಾಗೂ ಈಗಾಗಲೇ ಸಮಾಜದ ಮುಖಂಡರು ನೀಡಿರುವ ಮನವಿಯನ್ನು ಪರಿಶೀಲಿಸಿ ಪುತ್ಥಳಿ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ಮಾಡಿದ್ದು, ಪುತ್ಥಳಿ ನಿರ್ಮಾಣ ಕಾಮಗಾರಿಗೆ ಶೀಘ್ರದಲ್ಲಿಯೇ ಪ್ರಾರಂಭಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರವಿಚಂದ್ರ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್, ಸಮಾಜದ ಮುಖಂಡರು, ಸಂಘದ ಅಧ್ಯಕ್ಷರು ಉಪಸ್ಥಿತರಿದ್ದರು.

## ಹರಿಹರ : ರಕ್ಷಣಾ ವೇದಿಕೆ ಪ್ರತಿಭಟನೆ



ಹರಿಹರ, ಅ.23- ಹಿಂದಿ ಭಾಷೆ ಹೇರಿಕೆ ಮತ್ತು ದೌರ್ಜನ್ಯವನ್ನು ನಿಲ್ಲಿಸಿ ಬ್ಯಾಂಕುಗಳ ಎಲ್ಲ ಸೇವೆಗಳೂ ಕನ್ನಡದಲ್ಲಿಯೇ ನಡೆಯಬೇಕು. ಕನ್ನಡಿಗರನ್ನೇ ಬ್ಯಾಂಕಿನ ಉದ್ಯೋಗಿಗಳನ್ನಾಗಿ ನೇಮಿಸಬೇಕು. ಕೇಂದ್ರ ಸರ್ಕಾರವು ಸೆಪ್ಟೆಂಬರ್ 14 ರಂದು 'ಹಿಂದಿ ದಿವಸ್' ಆಚರಣೆ ಮಾಡುತ್ತಾ, ದೇಶದ ಎಲ್ಲಾ ಭಾಷೆಗಳನ್ನು ಕಡೆಗಣಿಸಿದೆ ಎಂದು ವಿರೋಧಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಹೆಚ್.ಶಿವರಾಮೇಗೌಡ್ರು ಬಣ) ಹರಿಹರ ತಾಲ್ಲೂಕು ತಹಶೀಲ್ದಾರ್ ರಿಗೆ ಮನವಿ ಪತ್ರ ಸಲ್ಲಿಸಿತು.

ಕರವೇ ತಾಲ್ಲೂಕು ಅಧ್ಯಕ್ಷ ಎಂ.ಇಲಿಯಾಸ್, ಯುವ ಘಟಕದ ಅಧ್ಯಕ್ಷ ಪ್ರೀತಂ ಬಾಬು, ನಗರ ಘಟಕದ ಅಧ್ಯಕ್ಷ ವೈ. ರಮೇಶ್ ಮಾನೆ, ಮುಖಂಡರಾದ ಬಿ.ಮುಗ್ದುಮ್, ರಾಜು, ವಸಂತ್, ಅರುಣ್ ಮತ್ತಿತರರಿದ್ದರು.

# ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ಖಂಡನೆ

### ನಗರದಲ್ಲಿ ಹಿಂದೂ ಜಾಗರಣಾ ವೇದಿಕೆ ಪ್ರತಿಭಟನೆ




ದಾವಣಗೆರೆ, ಅ.23- ಬಾಂಗ್ಲಾ ದೇಶದಲ್ಲಿ ಹಿಂದೂಗಳ ದೇವಸ್ಥಾನಗಳು, ಮನೆಗಳ ಮೇಲೆ ಅಲ್ಲಿನ ಮತಾಂಧರು ದಾಳಿ, ದೌರ್ಜನ್ಯ, ಮಾನ, ಪ್ರಾಣ ಹಾನಿ ಮಾಡುತ್ತಿದ್ದರೂ, ಅಲ್ಲಿನ ಸರ್ಕಾರ ಮೌನವಾಗಿದ್ದು, ಅಸಡ್ಡೆ ತೋರುತ್ತಿರುವುದಾಗಿ ಖಂಡಿಸಿ, ನಗರದಲ್ಲಿ ನಿನ್ನೆ ಹಿಂದೂ ಜಾಗರಣಾ ವೇದಿಕೆ ನೇತೃತ್ವದಲ್ಲಿ ಹಿಂದೂ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಉಪ ವಿಭಾಗಾಧಿಕಾರಿ ಕಚೇರಿ ಎದುರು ಹಿಂಜಾವೇ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಉಪ ವಿಭಾಗಾಧಿಕಾರಿಗಳ ಮುಖಾಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿದರು.

ನೆರೆಯ ಬಾಂಗ್ಲಾ ದೇಶದಲ್ಲಿ ಮತಾಂಧರು ಗುಂಪು, ಗುಂಪಾಗಿ ಹಿಂದೂಗಳ ಮನೆಗಳು, ದೇವಸ್ಥಾನಗಳ ಮೇಲೆ ದಾಳಿ ಮಾಡಿ ನಾಶಪಡಿಸುತ್ತಿದ್ದಾರೆ. ಹಿಂದೂ ಬಾಂಧವರ ಮೇಲೆ ದಾಳಿ ಮಾಡಿ, ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಸತೀಶ್ ಪೂಜಾರಿ ಅಸಮಾಧಾನ ವ್ಯಕ್ತಪಡಿಸಿದರು.

ನೆರೆಯ ಬಾಂಗ್ಲಾ ದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳನ್ನು ರಕ್ಷಿಸುವ ಕೆಲಸವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಡಬೇಕು. ಹಿಂದೂಗಳ ಮೇಲೆ ಬಾಂಗ್ಲಾ ದೇಶದ ಮತಾಂಧರ ದಾಳಿ, ದೌರ್ಜನ್ಯ ದಿನದಿನಕ್ಕೂ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಅಕ್ರಮವಾಗಿ ಭಾರತದೊಳಗೆ ನುಸುಳಿರುವ ಬಾಂಗ್ಲಾ ದೇಶದ ಪ್ರಜೆಗಳನ್ನು ತಕ್ಷಣವೇ ಕೇಂದ್ರ ಸರ್ಕಾರವು ಹುಡುಕಿ, ವಾಪಸ್ ಬಾಂಗ್ಲಾ ದೇಶಕ್ಕೆ ಕಳಿಸಬೇಕು. ಪಶ್ಚಿಮ ಬಂಗಾಳ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ದೆಹಲಿ, ಕೇರಳ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಮಿಜೋರಾಂ, ಅಸ್ಸಾಂ ಸೇರಿದಂತೆ, ದೇಶಾದ್ಯಂತ ಬಾಂಗ್ಲಾ ದೇಶದ ಪ್ರಜೆಗಳು ಅಕ್ರಮವಾಗಿ ಬಂದು ಸೇರಿದ್ದು, ಅಂತಹ ವಲಸಿಗರನ್ನು ಪತ್ತೆ ಮಾಡಿ, ದೇಶದಿಂದ ಹೊರ ಹಾಕುವ ಕೆಲಸವನ್ನು ಕೇಂದ್ರ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹಿಂಜಾವೇ ಮುಖಂಡರಾದ ವಿಶ್ವನಾಥ, ಡಿ.ವಿ. ಪ್ರಶಾಂತ, ಗಣೇಶ, ಚೇತನ್, ಪುನೀತ, ರಾಕೇಶ, ವಿಜಯ, ಅನಿಲ, ಚಂದ್ರಮೌಳಿ, ಗಣಪತಿ, ಮಂಜುನಾಥ, ಶಿವಾಜಿ, ಆನಂದಪ್ಪ, ಪುರುಷೋತ್ತಮ, ದರ್ಶನ್, ಕೊಟ್ರೇಶ ಸೇರಿದಂತೆ, ಇತರರು ಪಾಲ್ಗೊಂಡಿದ್ದರು.

## ವಿಶ್ವ ಸಂಸ್ಥೆಯ ದಿನ

ವಿಶ್ವದಲ್ಲಿಯ ವಿಶ್ವಸಂಸ್ಥೆ ದಿನ
ಅದು ನಾಳೆ ದಿನಾಂಕ 24/10/21
ಭಾನುವಾರ ವಿಶ್ವಸಂಸ್ಥೆಯ ದಿನ
ಅದು ಇಡೀ ವಿಶ್ವ ರಾಷ್ಟ್ರಗಳ ಕೇಂದ್ರ i

ವಿಶ್ವ ಸಂಸ್ಥೆ ಎಂಬುದು ಒಟ್ಟಾರೆ
ರಾಷ್ಟ್ರಗಳ ಹಾಗು ಹೋಗುಗಳ
ನಿಯಂತ್ರಿಸುವ ಒಂದು ಜಬರ್ದಸ್ತ್
ಹದ್ದಬಸ್ತ್ ಆದೇಶಕ್ಕೆ ಆಜ್ಞೆ ಮೂಲಕ
ತನ್ನ ಸರಹದ್ದಿಗೆ ಸೆಳೆತವೇ ವಿಶ್ವಸಂಸ್ಥೆ iii

ಇತ್ತೀಚಿಗೆ ಕೆಲವು ರಾಷ್ಟ್ರಗಳು
ನಾವೇ ಸರ್ವೋತ್ತಮರು ಬೊಬ್ಬೆ
ಹಾಕುತ್ತಾ ಇಡೀ ಮನುಕುಲವನ್ನೇ
ಮತಾಂಧ ಮತಾಂತರ ಮಾಡುವ
ನೀಚಶಕುನಿಯ ಅಟ್ಟಹಾಸ ಪಾತ್ರ iii

ಕಾಲಗರ್ಭದ ಮಾತೃ ಪಾತಾಳ
ಶಿಲಾಪಾಕಕ್ಕೆ ಕೈಹಚ್ಚುವ ಪಾತ್ರ
ಪಾಪಿಪಾಕಿಸ್ತಾನ ಗುಳ್ಳೆನರಿ ಗುಳಂ
ಸ್ವಾಹಮಾಡಿ ವಿಶ್ವಕ್ಕೆ ನಾವೇ ದೊಡ್ಡವ
ದೈತ್ಯ ಡೈನಾಸುರರು ರಾಕ್ಷಸರರು iii

ಇಡೀ ವಿಶ್ವಮನುಲಕ್ಕೆ ಎಚ್ಚರಿಕೆಯ
ಠರಾವು ಅದೆಷ್ಟು ಭಿತ್ತಿಚಿತ್ರಗಳ ಹಚ್ಚಿ
ಭಯಾನಕ ವೈರಸ್ ಬಿಟ್ಟು ಸಾವಿನ
ಅರಮನೆಯ ಮಹಲ್ ತಲೆ ಎತ್ತಿವೆ ii

ವಿಶ್ವಕ್ಕೆ ವಿಶ್ವಸಂಸ್ಥೆಯೇ ಅಧಿಪತಿ
ಅದು ಬಿಟ್ಟು ವಿಶ್ವವೇ ವಸುದೈವ
ಕುಟುಂಬ ಎನ್ನುವ ಜಾಗತಿಕ ಜಾಗೃತಿಯ
ಶಿವರಾತ್ರಿ ಜಾಗರಣೆ
ಕಾಲ ಅಲ್ಲ ಯಮನ ಕಾಲ ????

ವಿಶ್ವಸಂಸ್ಥೆಯ ದಿನ ನಾವೇ
ವಿಶ್ವ ರಾಷ್ಟ್ರಗಳಿಗೆ ಎಚ್ಚರ ಮೇಘ
ಗಾಳಿ, ವಾಯು ಭೂ ಬೆಂಕಿ ಉರಿಗಳನ್ನು
ಆ ವಿಶ್ವ ಸಹಸ್ರ ವಿಶ್ವಶಿವ ವಿಶ್ವರೂಪ
ವಿಶ್ವಕಾಳಿ ಎಲ್ಲಾ ರಾಷ್ಟ್ರಗಳಿಗೆ ಎಚ್ಚರ
ಕೊಟ್ಟು ನಾವೇ ವಿಶ್ವಸಂಸ್ಥೆ ಅಂತಿಮ i

**- ಟಿ ಜಿ ಸಂಗಮ್**
ಗಣಿತ ಶಿಕ್ಷಕರು ಕವಿ ಮತ್ತು ಲೇಖಕ
ಮೊ. 73492 18657

# ಅಂಬೇಡ್ಕರ್ ಲಿಖಿತ ಸಂವಿಧಾನ ರಚಿಸಿದ್ದರೂ ಅಸ್ಪೃಶ್ಯರಿಗೆ ಪೂರ್ಣ ನ್ಯಾಯ ಸಿಕ್ಕಿಲ್ಲ

### ದಸಂಸ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ವ್ಯಾಕುಲತೆ



ಮಲೇಬೆನ್ನೂರು,ಅ .23- ಡಾ. ಅಂಬೇಡ್ಕರ್ ಲಿಖಿತ ಸಂವಿಧಾನ ರಚಿಸಿದ್ದರೂ ಅಸ್ಪೃಶ್ಯರಿಗೆ ಇನ್ನೂ ಸಂಪೂರ್ಣ ನ್ಯಾಯ ಸಿಕ್ಕಿಲ್ಲ ಎಂದು ದಸಂಸ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಹೇಳಿದರು.

ಇದೇ ದಿನಾಂಕ 26ರಂದು ಹರಿಹರದಲ್ಲಿ ನಡೆಯುವ ಬೃಹತ್ ತಮಟೆ ಚಳುವಳಿ ಕುರಿತು ಹೊಳೆಸಿರಿಗೆರೆಯಲ್ಲಿ ಏರ್ಪಡಿಸಿದ್ದ ಜಾಗೃತಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಂವಿಧಾನ ನೀಡಿರುವ ಮೀಸಲಾತಿಯನ್ನು ದಲಿತರ ಜಾತಿಗಳ ಈಗಿನ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡದಿರುವುದು ದೊಡ್ಡ ಲೋಪವಾಗಿದೆ. ಮೀಸಲಾತಿಯ ನ್ಯಾಯಯುತ ಹಂಚಿಕೆಯ ಲೋಪವು, ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ ಎಂಬಂತಾಗಿದೆ. ಇದನ್ನು ಸರಿಪಡಿಸುವ ಜವಾಬ್ದಾರಿ ಆಡಳಿತದ ಚುಕ್ಕಾಣಿ ಹಿಡಿದವರದ್ದಾಗಿದೆ ಎಂದರು.

ಗ್ರಾಮೀಣ ಭಾಗದಲ್ಲಿರುವ ದಲಿತರ ಪೈಕಿ ಬಹುತೇಕರು ಕೂಲಿ ಕಾರ್ಮಿಕರಾಗಿದ್ದಾರೆ. ಒಂದು ಸಣ್ಣ ಮನೆಯಲ್ಲಿ 2-3 ಕುಟುಂಬಗಳು ವಾಸ ಮಾಡುತ್ತಿವೆ. ಬಡವರಿಗೆ ಸೂರು ಒದಗಿಸುವ ಹಲವು ವಸತಿ ಯೋಜನೆಗಳಿದ್ದರೂ ಉಪಯೋಗಕ್ಕೆ ಬಾರದಂತಾಗಿವೆ.

ಮಳೆಗಾಲದಲ್ಲಿ ಈ ಸಣ್ಣ ಮನೆಗಳ ವಾಸಿಗಳು ದೇವಸ್ಥಾನ, ಸಮುದಾಯ ಭವನದಲ್ಲಿ ಆಶ್ರಯ ಪಡೆಯುವ ದುಸ್ಥಿತಿ ಇದೆ. ಕುಟುಂಬಗಳು ಬೆಳೆದಂತೆ ವಸತಿ ಯೋಜನೆಗಳನ್ನೂ ವಿಸ್ತರಿಸುವ, ಹಂಚಿಕೆ ಮಾಡುವ ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ಬಿಡುಗಡೆ ಮಾಡುತ್ತಿರುವ ಅನುದಾನ, ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಾದಂತಾಗಿದೆ. ಸ್ವ ಉದ್ಯೋಗಕ್ಕೆಂದು ಅರ್ಜಿ ಸಲ್ಲಿಸುವ ಬಹುತೇಕರಿಗೆ ಸಾಲದ ಭಾಗ್ಯ ದೊರೆಯುತ್ತಿಲ್ಲ. ಇದು ಹೆಸರಿಗೆ ಮಾತ್ರ ಅಭಿವೃದ್ಧಿ ನಿಗಮವಾಗಿದೆ. ಅರ್ಜಿದಾರರ ಸಂಖ್ಯೆಗೆ ತಕ್ಕಂತೆ ನಿಗಮಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

**ಅಸ್ಪೃಶ್ಯತೆ ಜೀವಂತ :** ಹರಿಹರ ತಾಲ್ಲೂಕಿನ ಹತ್ತಾರು ಗ್ರಾಮಗಳಲ್ಲಿ ಅಸ್ಪೃಶ್ಯತೆ ಇಂದಿಗೂ ಜೀವಂತವಾಗಿದೆ. ಆ ಗ್ರಾಮಗಳ ದಲಿತರು ಕ್ಷೌರ ಮಾಡಿಸಲು ಹರಿಹರ, ದಾವಣಗೆರೆಗೆ ಅಲೆದಾಡಬೇಕಿದೆ. ಹೋಟೆಲ್‌ಗಳಲ್ಲಿ ದಲಿತರಿಗೆ ಹೊರ ಗಡೆಯೇ ಚಹಾ, ತಿಂಡಿ ನೀಡಲಾಗುತ್ತಿದೆ. ದೇವಸ್ಥಾನ ಗಳಲ್ಲಿ ಪ್ರವೇಶವಿಲ್ಲ. ಆದರೆ ದಲಿತರು ದೇವಸ್ಥಾನ ಗಳ ಕಸ ಹೊಡೆಯದಿದ್ದರೆ, ಅವರ ಮನೆ ವಿದ್ಯುತ್ ಸಂಪರ್ಕ ಕಡಿತ ಮಾಡುವ ಅಮಾನವೀಯ ಘಟನೆಗಳು ನಡೆಯುತ್ತಿವೆ. ಅಸ್ಪೃಶ್ಯತೆ ನಿವಾರಣೆಗಾಗಿ ಸಂಬಂಧಿತ ಇಲಾಖೆಯವರು ಜಾಗೃತಿ ಮೂಡಿಸುತ್ತಿಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿರುವ ಎಸ್ಸಿ-ಎಸ್ಟಿ ಹಾಸ್ಟೆಲ್‌ಗಳಲ್ಲಿ ಊಟೋಪಚಾರ ಸರಿ ಇಲ್ಲ. ಕಳಪೆ ಆಹಾರ ಪದಾರ್ಥದಿಂದ ಅಡುಗೆ ಮಾಡಲಾಗುತ್ತಿದೆ. ಹಾಸ್ಟೆಲ್ ನಿವಾಸಿ ವಿದ್ಯಾರ್ಥಿಗಳು ಈ ಕುರಿತು ದೂರು ನೀಡಿದರೆ, ಅಂತಹ ವಿದ್ಯಾರ್ಥಿಗಳ ಮೇಲೆ ದೈಹಿಕ ಹಲ್ಲೆ ನಡೆಸಿ ಬಾಯಿ ಮುಚ್ಚಿಸಲಾಗುತ್ತಿದೆ. ಸರ್ಕಾರ ನಿಗದಿ ಪಡಿಸಿದ ಮಾದರಿಯಲ್ಲೇ ಆಹಾರ ತಯಾರು ಮಾಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ರಮೇಶ್ ಸಣ್ಣ ಮಾಳಿಗಿ, ಪ್ರವೀಣ್, ರಂಗನಾಥ್, ಹನುಮಂತಪ್ಪ ಕೆ.ಎನ್. ಹಳ್ಳಿ, ಸಂತೋಷ್ ನಂದಿಗಾವಿ, ಅಂಜನಿ, ರಾಕೇಶ್, ಹನುಮಂತಪ್ಪ ಹೆಚ್.ಎಂ., ಮಂಜಪ್ಪ, ಕೀರ್ತಿರಾಜ್, ಸೋಮೇಶ್ವರಿ ಸಂಘದ ಕಮಲಮ್ಮ, ಶಾಂತಾ, ದುರುಗಮ್ಮ, ಭಾಗ್ಯಮ್ಮ, ತಿರುಕಮ್ಮ, ಶಾಂತಮ್ಮ, ದ್ರಾಕ್ಷಾಯಣಮ್ಮ, ಸುವರ್ಣಮ್ಮ ಮತ್ತಿತರರು ಉಪಸ್ಥಿತರಿದ್ದರು.


## ಜಿಗಳಿ : ಸಂಭ್ರಮದ ಚೆನ್ನಮ್ಮ ಜಯಂತಿ



ಮಲೇಬೆನ್ನೂರು, ಅ. 23- ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಮಹಿಳಾ ಹೋರಾಟಗಾರ್ತಿ, ಶೌರ್ಯ ಮತ್ತು ಸ್ವಾಭಿಮಾನದ ಪ್ರತೀಕವಾದ ಕಿತ್ತೂರು ರಾಣಿ ಚೆನ್ನಮ್ಮ ಅವರ 243ನೇ ಜಯಂತ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಗ್ರಾ.ಪಂ. ಅಧ್ಯಕ್ಷರಾದ ಆಶಾ ಅಣ್ಣಪ್ಪ, ಸದಸ್ಯರಾದ ಡಿ.ಎಂ. ಹರೀಶ್, ಕೆ.ಜೆ. ಬಸವರಾಜ್, ಪಿಡಿಓ ಉಮೇಶ್, ಗ್ರಾಮದ ಮುಖಂಡರಾದ ಜಿ. ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಡಾ. ಎನ್. ನಾಗರಾಜ್, ಎಂ. ಮಹಾಲಿಂಗಪ್ಪ, ಬನ್ನಿಕೋಡು ನಾಗರಾಜಪ್ಪ, ಕೆ.ಎಸ್. ನಂದ್ಯಪ್ಪ, ಎಂ. ಜಗದೀಶ್, ಎಂ. ವಾಗೀಶ್, ಬನ್ನಿಕೋಡು ಪ್ರಕಾಶ್, ಜಿ. ಬೇವಿನಹಳ್ಳಿಯ ಬಿ.ಕೆ. ರಂಗನಾಥ್, ಗ್ರಾ.ಪಂ. ಸಿಬ್ಬಂದಿಗಳಾದ ದಾನಪ್ಪ, ಮೌನೇಶ್, ಮುತ್ತು, ಬಸವರಾಜಯ್ಯ, ಪ್ರಕಾಶ್ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಡಿ.ಆರ್.ಆರ್. ಶಾಲೆಯಲ್ಲಿ ಅಭಿಯಾನ



ದಾವಣಗೆರೆ, ಅ. 23- ನಗರದ ಡಿ.ಆರ್.ಆರ್. ಪ್ರೌಢಶಾಲೆಯಲ್ಲಿ ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ ಶೀರ್ಷಿಕೆಯಡಿ ಚಿತ್ರಕಲಾ ಸ್ಪರ್ಧೆ ಮೂಲಕ ಜಾಗೃತಿ ಅಭಿಯಾನ ಆರಂಭಿಸಲಾಯಿತು.

ಮುಖ್ಯೋಪಾಧ್ಯಾಯ ಹೆಚ್.ಎಸ್. ಹಾಲೇಶ್ ನಲ್ಕುದುರೆ ಅವರು ತಂಬಾಕು ರಹಿತ ಜೀವನ, ಆರೋಗ್ಯದ ಸೋಪಾನ ಎಂಬ ಘೋಷಣೆಯೊಂದಿಗೆ ಅಭಿಯಾನಕ್ಕೆ ಚಾಲನೆ ನೀಡಿದರು.

ಅಭಿಯಾನ ಹಾಗೂ ಚಿತ್ರಕಲಾ ಸ್ಪರ್ಧೆ ಉಸ್ತುವಾರಿ ವಹಿಸಿದ್ದ ವಿಜ್ಞಾನ ಶಿಕ್ಷಕರಾದ ಕು. ವೈ.ಪಿ. ಸೌಮ್ಯ, ಮಕ್ಕಳಿಗೆ ಉಪಯುಕ್ತ ಮಾಹಿತಿ ಒದಗಿಸಿದರು.

ಸ್ಪರ್ಧೆಯಲ್ಲಿ 10ನೇ ತರಗತಿ ಕೆ. ಸಂಧ್ಯಾ ಪ್ರಥಮ, ಹೆಚ್. ಸಂಜನಾ ದ್ವಿತೀಯ ಸ್ಥಾನ ಹಾಗೂ 9ನೇ ತರಗತಿಯ ಹರ್ಷಿತ ಎಂ. ಅರಣಿ, 8ನೇ ತರಗತಿಯ ಡಿ.ಸಚಿನ್ ತೃತೀಯ ಸ್ಥಾನ ಹಂಚಿಕೊಂಡರು.


ಶಿಕ್ಷಕರಾದ ಮೂಗಬಸಪ್ಪ, ಟಿ ಮಹೇಶನ್, ಶಿವಾನಂದಯ್ಯ, ಕೆ. ನಾಗರಾಜಪ್ಪ ಮತ್ತು ಇತರರು ಹಾಜರಿದ್ದರು.

## ಸಿಎಂ ಭೇಟಿಯಾದ ಶಾಸಕ ಚಂದ್ರಪ್ಪ



ಭರಮಸಾಗರ, ಅ.23- ಹಾನಗಲ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದ ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಅವರು ಭರಮಸಾಗರ ಕೆರೆಗೆ ನೀರು ಹರಿದು ಬರುತ್ತಿರುವ ಬಗ್ಗೆ ಮಾಹಿತಿ ಹಂಚಿಕೊಂಡರು.

## ಪಥಸಂಚಲನದಲ್ಲಿ ನಗರದ ಶಿಕ್ಷಕಿಯರು



ದಾವಣಗೆರೆ, ಅ.23- ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿರುವ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ಪಥಸಂಚಲನದಲ್ಲಿ ದಕ್ಷಿಣ ವಲಯ ಯಲ್ಲಮ್ಮ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ಸಹ ಶಿಕ್ಷಕಿ ಶ್ರೀಮತಿ ಎಸ್.ಮಂಜುಳಾ, ಶ್ರೀಮತಿ ಇ.ಸಿ.ಓ ಚೇತನ ಹಾಗೂ ಮತ್ತಿತರರು ಭಾಗವಹಿಸಿದ್ದರು.

# ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಹೊರಗುತ್ತಿಗೆ ನೌಕರರ ಭ್ರಷ್ಟಾಚಾರ

### ಕರ್ನಾಟಕ ಮಾದಿಗ ದಂಡೋರ, ಮಾದಿಗ ಮೀಸಲಾತಿ ಹೋರಾಟ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ



ದಾವಣಗೆರೆ, ಅ.23- ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಹೊರಗುತ್ತಿಗೆ ನೌಕರರಿಂದ ನಡೆಯುತ್ತಿರುವ ಅವ್ಯವಹಾರ, ಭ್ರಷ್ಟಾಚಾರವನ್ನು ಖಂಡಿಸಿ, ಕರ್ನಾಟಕ ಮಾದಿಗ ದಂಡೋರ, ಮಾದಿಗ ಮೀಸಲಾತಿ ಹೋರಾಟ ಜಿಲ್ಲಾ ಸಮಿತಿಯಿಂದ ನಗರದ ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿ ನಿನ್ನೆ ಪ್ರತಿಭಟನೆ ನಡೆಸಲಾಯಿತು.

ಹೊರಗುತ್ತಿಗೆದಾರರಾಗಿ ನೇಮಕಾತಿ ಆಗಿರುವ ಮೂವರು ಕಂಪ್ಯೂಟರ್ ಆಪರೇಟರ್‌ಗಳ ಕ್ಷೇತ್ರ ಬದಲಾವಣೆ ಮಾಡಬೇಕು. ಕಾರಣ ಇವರು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ 4 ರಿಂದ 5 ಜನ ಫಲಾನುಭವಿಗಳಿಗೆ ದಾವಣಗೆರೆ ನಿಗಮ ದಿಂದ ಮಂಜೂರಾತಿ ನೀಡಿ ಹಣ ಬಿಡುಗಡೆ ಮಾಡಿರುತ್ತಾರೆ. ಇದರಿಂದಾಗಿ ದಾವಣಗೆರೆಯ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ರಜಾ ದಿನವಿದ್ದರೂ ನಿಗಮಕ್ಕೆ ಬಂದು ಕಡತಗಳನ್ನು ಅದಲು ಬದಲು ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಒಂದೇ ಗ್ರಾಮಕ್ಕೆ ಲಾಟರಿ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಅದರಲ್ಲೂ ಕೈದಾಳೆ ಗ್ರಾಮವೊಂದಕ್ಕೆ 10 ಜನ ಫಲಾನುಭವಿಗಳಿಗೆ ಮಂಜೂರಾತಿ ಹಣ ಬಿಡುಗಡೆ ಮಾಡಿದ್ದಾರೆ. ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ 6 ರಿಂದ 8 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಂಜೂರಾತಿ ಹಣ ಬಿಡುಗಡೆ ಮಾಡಿ ಶಾಸಕರ ಕಣ್ಣಿಗೆ ಮಣ್ಣು ಎರಚುವ ಕೆಲಸ ಮಾಡಿದ್ದಾರೆ. ಗಂಗಾ ಕಲ್ಯಾಣ ಬೋರ್‌ವೆಲ್‌ಗೆ ತಲಾ 40 ರಿಂದ 50 ಸಾವಿರ ಪಡೆದ ನಂತರವೇ ಮಂಜೂರಾತಿ ನೀಡುತ್ತಾರೆ. ಈ ಕೂಡಲೇ ಹಂಗಾಮಿ ಕೆಲಸ ಮಾಡುತ್ತಿರುವ ಈ ಮೂವರನ್ನು ಕೆಲಸದಿಂದ ತೆಗೆದು ಹಾಕಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಓ ಅವರನ್ನು ಪ್ರತಿಭಟನಾಕಾರರು ಆಗ್ರಹಿಸಿದರು.

ನಾಗಪ್ಪ ಮಂಜುನಾಥ, ಸುರೇಶ್, ರೇವಪ್ಪ, ಪಾಲಾಕ್ಷಿ, ಬಸವರಾಜ್ ಗೋಶಾಲೆ, ಹೆಚ್. ಕುಬೇರಪ್ಪ, ನಾಗರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಸರ್ಕಾರ ರಜೆ ರಹಿತ ಜಯಂತಿಗಳನ್ನು ಆಚರಿಸಲಿ

### ವಾಚಕರ ವಾಣಿ

ಅಕ್ಟೋಬರ್ ತಿಂಗಳೊಂದರಲ್ಲಿಯೇ ಹಬ್ಬಗಳು, ಧಾರ್ಮಿಕ ಆಚರಣೆಗಳು, ಜಯಂತಿಗಳು ಸೇರಿದಂತೆ ಒಟ್ಟು 12 ಸರ್ಕಾರಿ ರಜೆಗಳು ಬಂದಿದ್ದು, ಪರಿಣಾಮ ಸರಿಯಾದ ಸಮಯಕ್ಕೆ ಸರ್ಕಾರಿ ಕಚೇರಿಗಳು, ಬ್ಯಾಂಕ್ ಗಳಲ್ಲಿನ ಕೆಲಸಗಳು ಆಗದೆ, ಜನಸಾಮಾನ್ಯರು ಹೈರಾಣಾಗಿದ್ದಾರೆ. ಒಂದೆಡೆ ಸಾಲು-ಸಾಲು ರಜೆಗಳಿಂದ ಸರ್ಕಾರಿ ನೌಕರರಿಗೆ ಸಂಭ್ರಮವಾದರೆ, ಜನಸಾಮಾನ್ಯರಿಗೆ ಗೋಳು. ಮೊದಲೇ ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವ ಸರ್ಕಾರಗಳಿಗೆ, ಹೀಗೆ ಒಂದೇ ತಿಂಗಳಲ್ಲಿಯೇ ಸಾಲು ಸಾಲು ರಜೆಗಳು ಬರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂ.ಗಳು ನಷ್ಟವಾಗುತ್ತದೆ. ಮಹಾನ್ ಪುರುಷರ ಜಯಂತಿಗಳು ಕೇವಲ ನಿರ್ದಿಷ್ಟ ಸಮುದಾಯದ ಜನರನ್ನು ಮೆಚ್ಚಿಸಲು ಅಥವಾ ವೋಟ್ ಬ್ಯಾಂಕ್ ಭದ್ರಗೊಳಿಸಲು ಮಾಡಿದಂತಾಗಿದೆ. ಇತ್ತೀಚಿನ ದಿನಗಳಲ್ಲಿ ಮಹಾನ್ ಪುರುಷರ ಜಯಂತಿಗಳು ಕೇವಲ ನಿರ್ದಿಷ್ಟ ಜಾತಿಗೆ ಮಾತ್ರ ಸೀಮಿತವಾಗಿಸಿರುವುದು ನಿಜಕ್ಕೂ ದುರಂತ. ಸರ್ಕಾರಿ ನೌಕರರು ಮಹಾನ್ ಪುರುಷರ ಜಯಂತಿಗಳನ್ನು ರಜೆಯ ಮಜೆಯಲ್ಲಿ ಪಿಕ್ನಿಕ್,ಪಾರ್ಟಿ ಮಾಡುವ ಬದಲು ಕೆಲಸ ಕಾರ್ಯನಿರ್ವಹಿಸುವ ಮೂಲಕ ಅವರ ತತ್ವ ಆದರ್ಶಗಳಿಗೆ ಗೌರವ ನೀಡಬೇಕಾಗಿದೆ. ಈಗಲಾದರೂ ಸರ್ಕಾರ ಮಹಾನ್ ಪುರುಷರ ಜಯಂತಿಗಳನ್ನು ಕಡಿತಗೊಳಿಸಿ ಸರ್ಕಾರಿ ರಜೆ ರಹಿತ ಆಚರಿಸಿ, ಕುಂಟುತ್ತಾ ಸಾಗುತ್ತಿರುವ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಬೇಕಾಗಿದೆ.

**ಮುರುಗೇಶ.ಡಿ**, ದಾವಣಗೆರೆ.


# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ. ಫೋ:08192-272802,276092.

## ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀಮತಿ ಎ.ಆರ್. ದೇವಮ್ಮ ಮತ್ತು ಶ್ರೀ ಎ.ಆರ್. ಬಸವರಾಜಪ್ಪ ಇವರು ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುತ್ತಾರೆ. ಸದರಿಯವರು ಬ್ಯಾಂಕಿಗೆ ಅಡಮಾನ ಮಾಡಿದ ಆಸ್ತಿಗಳು ನಿಯಮಾನುಸಾರ ಬ್ಯಾಂಕಿನ ಹೆಸರಿಗೆ ವರ್ಗಾವಣೆಗೊಂಡಿರುತ್ತವೆ. ಬಾಕಿ ವಸೂಲಿಗಾಗಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಈ ಕೆಳಗೆ ವಿವರಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತದೆ. ಆಸಕ್ತರು ಮಾರಾಟ ವಾಡಿಕೆಯಲ್ಲಿರುವ ಷರತ್ತುಗಳಿಗೆ ಒಳಪಟ್ಟು ಬಿಡ್ ಮೂಲಕ ಪಡೆಯಬಹುದು.

| ಸೊತ್ತುಗಳ ಮಾಲೀಕರು | ಹರಾಜಾಗುವ ಸ್ವತ್ತುಗಳ ವಿವರ | ಬಹಿರಂಗ ಹರಾಜಿನ ಸ್ಥಳ, ದಿನಾಂಕ ಮತ್ತು ಸಮಯ |
|---|---|---|
| ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ. | ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ಸರ್ವೆ ನಂ.103/2 ರಲ್ಲಿರುವ ನಂ.560 ರಿಂದ 569 ಒಟ್ಟು 10 ನಿವೇಶನಗಳು. ನಿವೇಶನಗಳ ಅಳತೆ : | ದಿನಾಂಕ : 30-10-2021 ರ ಶನಿವಾರ. ಸಮಯ : ಮಧ್ಯಾಹ್ನ 12-00 ಘಂಟೆಗೆ. ಸೊತ್ತಿನ ಮುಂಭಾಗದಲ್ಲಿ. |

| ಕ್ರಸಂ. | ನಿವೇಶನ ಸಂಖ್ಯೆ | ಅಳತೆ ಅಡಿಗಳಲ್ಲಿ | ಒಟ್ಟು ಅಳತೆ ಚ. ಅಡಿಗಳಲ್ಲಿ |
|---|---|---|---|
| 1 | 560 | 50+59/2 X 52+12/2 | 1744 |
| 2 | 561 | 30+40/2 X 52+72/2 | 2170 |
| 3 | 562 | 30+37.5/2 X 79+74/2 | 2582 |
| 4 | 563 | 46+50/2 X 44+30/2 | 1776 |
| 5 | 564 | 30+48/2 X 44+30/2 | 1443 |
| 6 | 565 | 41.6+38/2X50+52/2 | 2030 |
| 7 | 566 | 50X30 | 1500 |
| 8 | 567 | 50X30 | 1500 |
| 9 | 568 | 50X30 | 1500 |
| 10 | 569 | 50+53.6/2 X 49+30/2 | 2046 |
| | | ಒಟ್ಟು ಅಳತೆ 18291 ಚ. ಅಡಿಗಳು | |

**ಬಹಿರಂಗ ಹರಾಜಿನ ಷರತ್ತುಗಳು :** (1) ಹರಾಜಿನಲ್ಲಿ ಭಾಗವಹಿಸುವವರು ಬ್ಯಾಂಕಿನಲ್ಲಿ ಹರಾಜು ಸ್ಥಳದಲ್ಲಿ ರೂ.50,000/- ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು. ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಹೆಸರು ಮತ್ತು ವಿಳಾಸ ಭಾವಚಿತ್ರವಿರುವ ಗುರುತಿನ ಚೀಟಿ ಮತ್ತು ಪ್ಯಾನ್ ಕಾರ್ಡ್‌ನೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಪ್ರಧಾನ ವ್ಯವಸ್ಥಾಪಕರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15 ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟ್ಯಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸಿರತಕ್ಕದ್ದು. (7) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (8) ಎಲ್ಲಾ ವಿಧವಾದ ಸ್ಟ್ಯಾಂಪ್ ಡ್ಯೂಟಿ ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (9) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (10) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗು ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹಿರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು.

ಸಹಿ/- **ಪ್ರಧಾನ ವ್ಯವಸ್ಥಾಪಕರು**

# ಬಾಂಗ್ಲಾದ ಹಿಂದೂಗಳಿಗೆ ಧೈರ್ಯ : ಪಂಜಿನ ಮೆರವಣಿಗೆ

ದಾವಣಗೆರೆ, ಅ.23- ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ, ದಾಳಿ ಖಂಡಿಸಿ ಹಿಂದೂಪರ ಸಂಘಟನೆಗಳು ಮತ್ತು ವಿಶೇಷವಾಗಿ ಬಾಂಗ್ಲಾ ದೇಶದ ಯುದ್ಧದಲ್ಲಿ ಭಾಗವಹಿಸಿದ್ದ ದಾವಣಗೆರೆಯ ಮೂವರು ಮಾಜಿ ಯೋಧರಿಂದ ನಗರದಲ್ಲಿ ಇಂದು ಸಂಜೆ ಪಂಜಿನ ಬೆಳಕು ಚೆಲ್ಲಿ ಬಾಂಗ್ಲಾ ದೇಶದಲ್ಲಿ ನೋವು ಅನುಭವಿಸುತ್ತಿರುವ ಹಿಂದೂಗಳಿಗೆ 'ಜೊತೆಗಿದ್ದೇವೆ' ಎಂಬ ಧೈರ್ಯವನ್ನು ತುಂಬಲಾಯಿತು.

ಯುವ ಬ್ರಿಗೇಡ್ ನೇತೃತ್ವದಲ್ಲಿ ರಾಮ್ ಅಂಡ್ ಕೋ ವೃತ್ತದಿಂದ ಜಯದೇವ ವೃತ್ತದವರೆಗೂ ಪಂಜಿನ ಮೆರವಣಿಗೆ ನಡೆಸಲಾಯಿತು. ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಬರುವ ಅಗ್ನಿಯನ್ನು ಪಂಜುಗಳಿಗೆ ಸ್ಪರ್ಶಿಸುವ ಮೂಲಕ ಪಂಜಿನ ಮೆರವಣಿಗೆ ಆರಂಭಿಸಲಾಯಿತು.



ಪಂಜಿನ ಮೆರವಣಿಗೆಯಲ್ಲಿ ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಕೆ. ಪ್ರಸನ್ನ ಕುಮಾರ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸತ್ಯಪ್ರಕಾಶ್, ಹಿಂದೂ ಜಾಗರಣಾ ವೇದಿಕೆ ಮುಖಂಡರಾದ ಸತೀಶ್ ಪೂಜಾರಿ, ವಿಶ್ವನಾಥ್, ಶೋಭಕ್ಕ, ದಾಕ್ಷಾಯಣಮ್ಮ, ಶಾರದ ಡೈಮಂಡ್, ಕೋಮಲ, ಪವನ್ ರೇವಣ್ಕರ್, ಮಂಜುನಾಥ್, ಮನು, ಶಿವಾಜಿ, ಅಜಯ್ ಭಾರತೀಯ, ಪವನ್, ಗುರುಚರಣ್, 1971ರ ಬಾಂಗ್ಲಾ ದೇಶದ ಯುದ್ಧದಲ್ಲಿ ಭಾಗವಹಿಸಿದ್ದ ದಾವಣಗೆರೆಯ ಮೂವರು ಮಾಜಿ ಯೋಧರು ಸೇರಿದಂತೆ ಮಾಜಿ ಸೈನಿಕರ ಸಂಘ, ಪತಂಜಲಿ ಯೋಗ ಟೀಮ್, ಬಿಜೆಪಿ ಯುವ ಮೋರ್ಚಾ ಹಾಗೂ ಹಿಂದೂ ಜಾಗರಣಾ ವೇದಿಕೆ ಸೇರಿದಂತೆ ಹಿಂದೂಪರ ಸಂಘಟನೆಗಳು ಮತ್ತು ಕಾರ್ಯಕರ್ತರು ಹೆಜ್ಜೆ ಹಾಕಿದರು.

# ನಗರದಲ್ಲಿ ಇಂದು ಹೆಚ್‌ಕೆಆರ್‌ಗೆ ಶ್ರದ್ಧಾಂಜಲಿ

ದಾವಣಗೆರೆ, ಅ.23- ಭಾರತೀಯ ಕಮ್ಯುನಿಷ್ಟ್ ಪಕ್ಷದ ಜಿಲ್ಲಾ ಮಂಡಳಿ ಮತ್ತು ಎಐಟಿಯುಸಿ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 24ರ ಭಾನುವಾರ ದಿ. ಕಾಂ. ಹೆಚ್.ಕೆ. ರಾಮಚಂದ್ರಪ್ಪ ಅವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಹೆಚ್.ವಿ. ಅನಂತ ಸುಬ್ಬರಾವ್ ಉದ್ಘಾಟಿಸುವರು ಎಂದು ಸಿಪಿಐ ಜಿಲ್ಲಾ ಮಂಡಳಿಯ ಖಜಾಂಚಿ ಆನಂದ್ ರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಕಾರ್ಮಿಕ ಮುಖಂಡ ಡಾ. ಸಿದ್ಧನಗೌಡ ಪಾಟೀಲ್, ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ್, ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್, ಎನ್. ಶಿವಣ್ಣ, ಡಾ. ಕೆ.ಎಸ್. ಜನಾರ್ದನ್, ಆವರಗೆರೆ ಚಂದ್ರು, ಕೆ.ರಾಘವೇಂದ್ರ ನಾಯರಿ, ಹೆಚ್.ಜಿ. ಉಮೇಶ್, ಟಿ.ಎಸ್.ನಾಗರಾಜ್, ಆವರಗೆರೆ ವಾಸು ಸೇರಿದಂತೆ ಅನೇಕ ಕಾರ್ಮಿಕ ಮುಖಂಡರು ಪಾಲ್ಗೊಳ್ಳಲಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಹೆಚ್.ಜಿ. ಉಮೇಶ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಟಿ.ಎಸ್. ನಾಗರಾಜ್, ಶಾರದಮ್ಮ, ಮೊಹಮ್ಮದ್ ರಫೀಕ್, ಐರಣಿ ಚಂದ್ರು, ಆವರಗೆರೆ ವಾಸು, ರಂಗನಾಥ ಸೇರಿದಂತೆ ಇತರರಿದ್ದರು.

# ಉಪ ಚುನಾವಣೆ ಆಡಳಿತ ಸ್ತಬ್ಧ

(1ನೇ ಪುಟದಿಂದ) ನಿರ್ವಹಣೆಯಿಂದಲೇ ದೂರ ಉಳಿದಿದ್ದಾರೆ. ಚುನಾವಣಾ ಪ್ರಚಾರ ಒಂದಡೆಯಾದರೆ ಮತ್ತೊಂದೆಡೆ ಸಚಿವರು ಪ್ರವಾಸದಲ್ಲಿರುವುದರಿಂದ ಜನಸಾಮಾನ್ಯರ ಕೈಗೆ ಸಿಗುತ್ತಿಲ್ಲ. ಮುಖ್ಯಮಂತ್ರಿಯವರು ಇಡೀ ರಾಜ್ಯದ ಆಡಳಿತವನ್ನು ಬದಿಗಿಟ್ಟು, ಚುನಾವಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇದರಿಂದ ಅಧಿಕಾರಿ ಶಾಹಿಯಿಂದಲೇ ಆಡಳಿತ ನಡೆಯುತ್ತಿದೆ. ಆದರೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲು ಮುಖ್ಯಮಂತ್ರಿ ಇಲ್ಲವೇ ಸಂಬಂಧಪಟ್ಟ ಸಚಿವರ ಸಹಿ ಬೇಕು. ಸಹಿ ಮಾಡಲು ಸಚಿವರಿಗೆ ಸಮಯವಿಲ್ಲದಂತಾಗಿದೆ.

# ಮಾದರಿ ಇಂಜಿನಿಯರಿಂಗ್ ಕಾಲೇಜು

(1ನೇ ಪುಟದಿಂದ) ವೆಚ್ಚವನ್ನು ಕಂಪನಿಗಳ ಸಿಎಸ್‌ಆರ್ ನಿಧಿ, ವಿಟಿಯು ಮತ್ತು ಸ್ವತಃ ಆಯ್ಕೆಯಾದ ಸಂಸ್ಥೆಗಳು ಸಮನಾಗಿ ಭರಿಸಲಿವೆ. ಇದರ ಜೊತೆಗೆ ಆಯಾ ಸಂಸ್ಥೆಗಳ ಹಳೆಯ ವಿದ್ಯಾರ್ಥಿಗಳ ಮೂಲಕ ದೇಣಿಗೆ ಸಂಗ್ರಹಿಸುವ ಚಿಂತನೆಯೂ ಇದೆ ಎಂದು ಅವರು ಮಾಹಿತಿ ನೀಡಿದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಎಸ್.ಎಸ್. 'ಬಿ' ಬ್ಲಾಕ್ ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್ ಸಪ್ತಗಿರಿ ಶಾಲೆಯ ಹತ್ತಿರ ಪಶ್ಚಿಮ, 30x40 ಡೂಪ್ಲೆಕ್ಸ್ (Full furnished), ಬಾಲಾಜಿ ಲೇಔಟ್ ಕನ್ನಿಕಾ ಪರಮೇಶ್ವರಿ ದೇವಾಲಯ ಹತ್ತಿರ ಪಶ್ಚಿಮ 30x50 (3BHK) ಜಯನಗರ ಮುಖ್ಯ ರಸ್ತೆ ಹತ್ತಿರ, ಪಶ್ಚಿಮ 30x40
ಐಗೂರು ವಿಜಯಕುಮಾರ್ 99457 02495

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್‌ನಲ್ಲಿ 30x40 ಅಳತೆಯ ಹೊಸ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99866 17483
78996 81386

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
94814 52642

**ಮನೆಗಳು ಬಾಡಿಗೆಗೆ/ಲೀಜಿಗೆ**
ಸಿಂಗಲ್ ಬೆಡ್ ರೂಂ , ಡಬಲ್ ಬೆಡ್‌ರೂಂ, ಮೂರು ಬೆಡ್ ರೂಂ ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ವಾಟರ್ ಪ್ರೂಫಿಂಗ್ (ಮನೆಯ ನೀರು ಸೋರುವಿಕೆಗೆ)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬೇಕಾಗಿದ್ದಾರೆ**
ಹೋಟೆಲ್ (ಸಸ್ಯಹಾರಿ) ಕೆಲಸಕ್ಕೆ ಭಟ್ಟರು ಬೇಕಾಗಿದ್ದಾರೆ. ಶಾಮನೂರು ರಸ್ತೆ, ದಾವಣಗೆರೆ.
97434 82356

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಎದುರು, "ಕಾಯಕ ಸಿರಿ" ಗ್ರೌಂಡ್ ಫ್ಲೋರ್‌ನಲ್ಲಿ, 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
63621 06700

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್.ಲೇಔಟ್ 'ಬಿ' ಬ್ಲಾಕ್, 30x46 ಉತ್ತರ, 30x40 ದಕ್ಷಿಣ
86181 82332
(ಸೈಟ್ ಮಾರುವುದಕ್ಕೆ ಕೊಳ್ಳುವುದಕ್ಕೆ ಸಂಪರ್ಕಿಸಿ)

**ಮನೆ ಬಾಡಿಗೆಗೆ ಬೇಕಾಗಿದೆ**
3 ಅಥವಾ ಹೆಚ್ಚಿನ ಬೆಡ್ ರೂಂ ಹೊಂದಿರುವ ಮನೆ ಬೇಕಾಗಿದೆ. ಎಂ.ಸಿ.ಸಿ 'ಬಿ' ಬ್ಲಾಕ್, ಎಸ್.ಎಸ್. ಲೇಔಟ್, BIET Road, ನೂತನ ಕಾಲೇಜ್ ರೋಡ್
92422 84095

**ಮನೆ ಬಾಡಿಗೆಗೆ ಇದೆ**
ಪಿಸಾಳೆ ಕಾಂಪೌಂಡ್, 3ನೇ ಕ್ರಾಸ್‌ನಲ್ಲಿ 2BHK ಮನೆ, ಬಾಡಿಗೆಗೆ ಇದೆ.
81058 96790
90087 35205

**ಮನೆ ಲೀಸ್‌ಗೆ ಇದೆ**
30x50 ಅಳತೆಯ ಎರಡು ಬೆಡ್‌ರೂಂನ ಇಂಡಿಪೆಂಡೆಂಟ್ ಮನೆ ಶಕ್ತಿನಗರದ 2ನೇ ಹಂತ, ಕಿತ್ತೂರು ಬಡಾವಣೆಯಲ್ಲಿ ಲೀಸ್‌ಗೆ ಇದೆ.
99866 17483
78996 81386

**ಮನೆ ಬಾಡಿಗೆಗೆ ಇದೆ**
ಎಸ್.ಕೆ.ಪಿ ರಸ್ತೆ, ಗಣೇಶ ಪೇಟೆ, ಬೇವಿನ ಮರದ ಎದುರು 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ) ವಿಚಾರಿಸಿ
99807 25505

**ಸೈಟ್ ಮಾರಾಟಕ್ಕಿದೆ**
ಶಿವಕುಮಾರಸ್ವಾಮಿ ಬಡಾವಣೆಯಲ್ಲಿ, ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರ 30x40 ಅಳತೆಯ ಸೈಟ್ ಮಾರಾಟಕ್ಕಿದೆ.
78996 81386
99866 17483

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು. ಸರ್ವೆ ನಂ.335/A-4.8 ಸೆಂಟ್ಸ್, ಸರ್ವೆ ನಂ.335/B-2.43 ಸೆಂಟ್ಸ್, ಒಟ್ಟು 6.51 ಸೆಂಟ್ಸ್, 2 ಪಂಪ ಸೆಟ್‌ಹೊಂದಿರುವ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
99726 02950

**ಸೈಟ್‌ಗಳು ಮಾರಾಟಕ್ಕಿದೆ**
30x50 ಉತ್ತರ, 30x50 ದಕ್ಷಿಣೆ, ಡಾಲರ್ಸ್ ಕಾಲೋನಿ, 50x80 ಬೈಪಾಸ್ ಹತ್ತಿರ, 40x60 ನಿಜಲಿಂಗಪ್ಪ ಬಡಾವಣೆ
ಸುರೇಶ್ : 95911 60520

**ಮನೆ ಲೀಸ್‌ಗೆ ಇದೆ**
ಚಾಮರಾಜಪೇಟೆ ಹಾಸಬಾವಿ ಸರ್ಕಲ್ ಹತ್ತಿರ, ನಲ್ಲಿ ಮತ್ತು ಬೋರ್ ನೀರಿನ ಸೌಲಭ್ಯವುಳ್ಳ ಮನೆ (15x60) 2 ಬೆಡ್ ರೂಂ ಮನೆ ಲೀಸ್‌ಗೆ ಇದೆ.
98443 59739
88612 81811

**ಮನೆ ಬಾಡಿಗೆಗೆ ಇದೆ**
ಶಾಮನೂರು ರಸ್ತೆ, ಬಾಟ್ಲಿ ಬಿಲ್ಡಿಂಗ್ ಹಿಂಭಾಗ, 5ನೇ ಕ್ರಾಸ್‌ನಲ್ಲಿ 'ಮರುಳಸಿದ್ದೇಶ್ವರ ನಿಲಯ'ದ 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99161-88942, 74066-62460

**ಜೆ.ಹೆಚ್.ಪಟೇಲ್ ಬಡಾವಣೆ & ಭೂಮಿಕ 20x30 ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆ ಉತ್ತರ 20x30 ಕೆಳಗೆ ಮನೆ, ಮೇಲೆ ಮನೆ, ಪೂರ್ವ 20x30, ಭೂಮಿಕ ಬಡಾವಣೆ ದಕ್ಷಿಣ 20x30 (ಮೇಲೆ ಕೆಳಗೆ)
ಐಗೂರು ವಿಜಯಕುಮಾರ್ 99457 02495

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಕುವೆಂಪು ನಗರ 8ನೇ ಕ್ರಾಸ್ ಪಿಸಾಳೆ ತೋಟ, ಡೋರ್ ನಂ. 3664/6ರಲ್ಲಿ 1ನೇ ಮಹಡಿಯಲ್ಲಿ 2.5 BHK ಇರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ :
ಮೊ. : 73378 61051

**ಗೋಡೌನ್ ಬಾಡಿಗೆಗಿದೆ**
3000 Sqft, APMC Yard 'C' Block, ಶಿವ ಬ್ಯಾಂಕ್ ಎದುರು
92422 84095

**FLATS FOR LEASE**
2BHK &3 BHK
AM BUILDERS & DEVELOPERS
Nainika Primerose #1779/23, 20th Cross, Vidya nagara Main Road, last Bus stop, Davangere.
Contact: 89519 38229, 91486 79995, 88840 35580

**URGENT WANTED**
System Operate, Loading Unloading Handlers, Driver is Corgo Office
85534 83255

**FOR RENT**
1,500 Sft Ground Floor, 1,000 Sft First Floor attached 3,000 Sft open Place at Shamanur Main Road.
Contact: 99864 52865
08192-220837

**ಬೇಕಾಗಿದ್ದಾರೆ**
ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ BSc B.Ed (PCM/CBZ), BSc ಹಾಗೂ M.Sc (Maths) ತರಬೇತಿ ಹೊಂದಿದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿರಿ
99640 17729

**ತಕ್ಷಣವೇ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು/ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ: ಸಾಂಕಿತ್ಯ ಕ್ರಿಯೇಷನ್ಸ್, ಕಾಳಿಕಾ ದೇವಿ ರಸ್ತೆ. JS Collections, Davangere.
99644 66905, 98441 58445

**HOUSE TO - LET**
East faced Double Bed room house (First Floor) to let at SS Layout B' block near little Champs School. (Vegetarians Only).
98456 99806, 91487 31689

**ಹಳೇ ಬನಶಂಕರಿ ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಬಡಾವಣೆ ಸಂಭ್ರಮ್ ಹೋಟೆಲ್ ಹತ್ತಿರ ಪಶ್ಚಿಮ-ದಕ್ಷಿಣ ಕಾರ್ನರ್ 40x40 ಪಕ್ಕ, 30x40 ಪೂರ್ವ 30x50, ವಿನಾಯಕ ಬಡಾವಣೆ ಉತ್ತರ 40x60
ಐಗೂರು ವಿಜಯಕುಮಾರ್ 99457 02495

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
77953 80779

**ಮನೆ ಮಾರಾಟಕ್ಕೆ/ಬಾಡಿಗೆಗೆ/ಲೀಸ್‌ಗೆ**
20x30 ಪೂರ್ವ 3BHK, ಡೂಪ್ಲೆಕ್ಸ್, ದೂಡಾ, ಮುನ್ಸಿಪಾಲಿಟಿ ಅಪ್ರೂವ್ಡ್ ಮನೆ ಮಾರಾಟಕ್ಕೆ ಜಯನಗರದಲ್ಲಿ ಹಾಗೂ 1 BHK ಪೂರ್ವ ಬಾಡಿಗೆಗೆ/ಲೀಸ್‌ಗೆ ಜಯನಗರದಲ್ಲಿ ಇದೆ.
80505 33389, 90354 85198

**ಮನೆ ಬಾಡಿಗೆಗೆ ಇದೆ**
ಆಶೀರ್ವಾದ, ಶಿವಕುಮಾರ ಸ್ವಾಮಿ ಬಡಾವಣೆ, ಎರಡನೇ ಹಂತ, 1091/8, 8ನೇ ಕ್ರಾಸ್, 3 ಬೆಡ್ ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯ ಇರುವ, ಎರಡು ಕಾರ್ ಪಾರ್ಕಿಂಗ್ ಹಾಗೂ ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತವಾದ ನೆಲಮಹಡಿಯ ಮನೆ ಬಾಡಿಗೆಗೆ ಇದೆ. Rs.20,000/- ತಿಂಗಳಿಗೆ Rent.
99645 71281, 70193 59464

**ಶಿಕ್ಷಕಿಯರು ಬೇಕಾಗಿದ್ದಾರೆ**
BA. D.Ed, B.Sc, D.Ed, B.Com, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ.
S.J.M. PUBLIC SCHOOL, ನಿಟುವಳ್ಳಿ ಆಂಜನೇಯ ಬಡಾವಣೆ, 5ನೇ ಕ್ರಾಸ್, ದಾವಣಗೆರೆ.
82176 07934, 63609 63763
98806 86866

**ಬೇಕಾಗಿದ್ದಾರೆ**
ರಾತ್ರಿ ಪಾಳ್ಯದಲ್ಲಿ ಕೆಲಸ ಮಾಡಲು ಡಿಸೈನಿಂಗ್ ಅನುಭವವಿರುವ ಕಂಪ್ಯೂಟರ್ ಆಪರೇಟರ್ (ಹುಡುಗರು) ಬೇಕಾಗಿದ್ದಾರೆ. ಸಂಪರ್ಕಿಸಿ : ಬೆಳಿಗ್ಗೆ 11 ಗಂಟೆಗೆ
08192 254736

**ಬೇಕಾಗಿದ್ದಾರೆ**
ದಂತ ಚಿಕಿತ್ಸಾಲಯದಲ್ಲಿ ಕೆಲಸ ಮಾಡಲು SSLC Pass/Fail ಆದವರು ಬೇಕಾಗಿದ್ದಾರೆ. ಸಂಪರ್ಕಿಸಿ
98441 38067

**ಬೇಕಾಗಿದ್ದಾರೆ**
1) ಮನೆ ಕೆಲಸಕ್ಕೆ 2) ಕಾರ್ ಡ್ರೈವರ್ 3) ಕ್ಯಾಷಿಯರ್ ಗ್ರಾಮಾಂತರದವರಿಗೆ ಆದ್ಯತೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಶಂಕರಲೀಲಾ ಫರ್ಮ್ಸ್
ಮೊ. 99164-54770

**House To-Let**
2BHK 'Santrupthi' # 1640/66-67, Saraswati Badavane, Davanagere. Veg only
94484 46708

**ಲೀಸ್‌ಗೆ/ ಬಾಡಿಗೆಗೆ**
ಪಿ.ಜಿ. ನಡೆಸಲು ಅನುಕೂಲವಾಗಿರುವ, ಬೋರ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿರುವ ಸುಸಜ್ಜಿತವಾಗಿರುವ 2 ಮಹಡಿ ಮನೆ ಸರಸ್ವತಿನಗರ, ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ ಲೀಸ್‌ಗೆ / ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ
86182 31025

**WANTED DOCTORS**
MBBS/ M.D /BAMS
Excelents Runnig Clinic (Ganesh)
Bettur Road, Davanagere
98453 43082

**Basic - 200/-**
DTP-200/-
Photoshop - 300/-
ಇಂದೇ ಅರ್ಜಿ ಪಡೆಯಿರಿ :
For SC/ST/Muslims
74062 78270

**Wanted Female**
We Need Computer Teachers - 2 With Good Salary ( Any Degree + 1Year Computer Course) @ Davangere - 4
Call - 97393 20843

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ಅಮರಾವತಿ ಹಾಲಪ್ಪ
98454 84076

**ಮನೆ ಬಾಡಿಗೆಗಿದೆ**
ಎರಡು ಬೆಡ್ ರೂಂ ಇರುವ ಮನೆ ಮೊದಲನೇ ಮಹಡಿಯಲ್ಲಿ ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿ ಗೀತಾಂಜಲಿ ನಿವಾಸ, ಡೋರ್ ನಂ.4421, BIET ಕಾಲೇಜ್ ರೋಡ್ 8ನೇ ಕ್ರಾಸ್, ವಿನಾಯಕ ಕ್ಲಿನಿಕ್ ಪೂರ್ವಕ್ಕೆ.
98806 47830, 63628 47140

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: 10th / PUC
98861 70950
99868 86464

**ಕೆಲಸಕ್ಕೆ ಬೇಕಾಗಿದ್ದಾರೆ**
ಡ್ರೈವರ್, ಸೆಕ್ಯೂರಿಟಿ, ತೋಟಗಾರ, ಆಯಾಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
96635 31112
ಬೆಂಗಳೂರು.

**SHIKSHIT EDUCATION TRUST (R)**
Galaxy Higher Primary School
Wanted Teacher
Kannada : BA, B.Ed, Hinidi: BA B.ED, Eng: B.Ed, D.Ed
Devaraj Urs Badavane 'C' Block opp Beeralingeshwar Kalyana Mantapa
80732 26541, 90362 12686

**ಮಾರಾಟಕ್ಕೆ**
ಸ್ವಾಮಿ ವಿವೇಕಾನಂದ ಬಡಾವಣೆ ಸೈಟ್ (ಪಶ್ಚಿಮ) 30×60, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, ವಿದ್ಯಾನಗರ ಸೈಟ್ (ದಕ್ಷಿಣ) 40×60, ತರಳಬಾಳು ಬಡಾವಣೆ ಸೈಟ್ (ದಕ್ಷಿಣ) 30×50, SS ಲೇಔಟ್ ಸೈಟ್-40×63, ಮಹಾಲಕ್ಷ್ಮಿ ಲೇಔಟ್ ಸೈಟ್ ( ಉತ್ತಮ್ ಚಂದ್ - ಪಶ್ಚಿಮ) 35×61,
78996 36597, 99165 25828

**ಗೋಡೌನ್ ಬಾಡಿಗೆಗಿದೆ**
ಎ.ಪಿ.ಎಂ.ಸಿ.ಯಾರ್ಡ್ 'ಎ' ಬ್ಲಾಕ್ ನಲ್ಲಿ 75x75 ಅಡಿ ಅಳತೆಯ ಗೋಡೌನ್ ಬಾಡಿಗೆಗಿದೆ.
99017 16624
99801 10289

**ಬೇಕಾಗಿದ್ದಾರೆ**
ಶುದ್ಧ ಸಸ್ಯಹಾರಿ ಮನೆಯಲ್ಲಿ ಅಡುಗೆ ಮಾಡಲು ಹಾಗೂ ಸಹಾಯಕರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ : #77/19, 5ನೇ ಮುಖ್ಯರಸ್ತೆ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ-4.
98804 36414

**Required**
Chemist-1 and Accountant-1
Contact : Aradhya Chemical and Fertilizers (male only)
#115, 1 old P.B. Road, Back side Nandi petrol Bunk, Davangere.
08192 231168
email: acfdvg@gmail.com

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Male/Female Graduate for Billing and Accounts Assistants, Tally Knowledge Compulsory.
BAGRECHA TRADING COMPANY
162, Narasaraja Road, Davangere - 577001. Send Resume by
Whatsap-98440 78802,
E-Mail:kkb27041973@gmail.com

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ. ಹುಡುಗರು ಮತ್ತು ಹುಡುಗಿಯರು
94482 29430

**ಮನೆ ಮಾರಾಟಕ್ಕಿದೆ**
30x40 ಮತ್ತು 20x30 ಮನೆ ಮಾರಾಟಕ್ಕಿದೆ. ಎಸ್. ಎಸ್. ಹಾಸ್ಪಿಟಲ್ ಹಿಂಭಾಗ, ಸಿದ್ದಗಂಗಾ ಬಡಾವಣೆ
Owner
97388 79753

**ಸೈಟ್‌ಗಳು ಮಾರಾಟಕ್ಕಿವೆ**
ನೌಕರ ಬಡಾವಣೆ 30x40, 30x40 ಪೂರ್ವ, ಶಿವ ಪಾರ್ವತಿ 30x50, 30x50 ಪೂರ್ವ, MCC ಬ್ಲಾಕ್ 40x60 ಪೂರ್ವ, 40x60 ಪೂರ್ವ, ಎಸ್.ಎಸ್. ಲೇಔಟ್ 30x40, 30x40 ಪೂರ್ವ, 40x60 ಪೂರ್ವ ಸೈಟುಗಳು ಮಾರಾಟಕ್ಕಿವೆ. ಸೈಟ್ ಕೊಳ್ಳುವವರು, ಮಾರುವವರು ಸಂಪರ್ಕಿಸಿ
ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್
99726 70257

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 3ನೇ ಮೇನ್‌ನಲ್ಲಿ, ಎರಡನೆಯ ಮಹಡಿಯಲ್ಲಿ ಒಂದು ಬೆಡ್ ರೂಮಿನ ಮನೆ ಬಾಡಿಗೆಗೆ ಇದೆ. ಪೂರ್ವ ದಿಕ್ಕಿನ ಮನೆ, 24 ಗಂಟೆ ನೀರಿನ ಸೌಲಭ್ಯವಿರುವ ಮನೆ.
94489 23704, 94807 78709

**ಮನೆ ಬಾಡಿಗೆಗಿದೆ**
1ನೇ ಮಹಡಿ, ಡಬಲ್ ಬೆಡ್ ರೂಂ, ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ. ತರಳಬಾಳು ಶಾಲೆ, ಕಾಲೇಜುಗಳಿಗೆ ಹತ್ತಿರವಿದೆ. #1963/9, 7ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, SS ಸಮುದಾಯ ಭವನ ಎದುರು, ದಾವಣಗೆರೆ-5
ಫೋ. : 95917 48721

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**ಮನೆ ಬಾಡಿಗೆಗೆ ಇದೆ**
2 BHK Furnished house Shivakumar swamy Badavane, 2 BHK Vidya nagara, 2 BHK Shivakumara swamy Badavane, 3 BHK Saraswathi nagara, 1 BHK.
78927 93994

**ಮನೆ ಮಾರಾಟಕ್ಕಿದೆ**
ಮಹಾನಗರ ವ್ಯಾಪ್ತಿಗೆ ಒಳಪಡುವ ಹಳೇ ಕುಂದುವಾಡ ಗ್ರಾಮದಲ್ಲಿ 20 ಅಡಿ ಅಗಲ 70 ಅಡಿ ಉದ್ದ ಅಳತೆಯ RCC ಮನೆ ಮಾರಾಟಕ್ಕಿದ್ದು ಆಸಕ್ತರು ಹೆಚ್ಚಿನ ಮಾಹಿತಿಗಾಗಿ 99640 49276, 96206 59849 ನಂಬರಿಗೆ ಸಂಪರ್ಕಿಸಿ

**ಮನೆ ಬಾಡಿಗೆಗಿದೆ**
2BHK ಸುಸಜ್ಜಿತ ಮನೆ ಬಸವೇಶ್ವರ ಬಡಾವಣೆ ಮುಖ್ಯ ರಸ್ತೆ, ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ
ಮೊ : 98441 32621

**WANTED**
Shamys unisex salon and spa Opposite to bapuji dental college Davangere Requires
1- Female beautician
1- Male hair dresser
Call 98459 35588

**ನವೋದಯ ಕೋಚಿಂಗ್**
5ನೇ, 8ನೇ ತರಗತಿ ವಿದ್ಯಾರ್ಥಿಗಳಿಗೆ ನವೋದಯ ಕೋಚಿಂಗ್ ದಿನಾಂಕ 30-10-21 ಪ್ರಾರಂಭ
ಸಿಂಚನ ಅಕಾಡೆಮಿ
SBI ATM ಎದುರುಗಡೆ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ
ಸೌಮ್ಯ 85532 78258

**ಮನೆ ಬಾಡಿಗೆಗೆ/ಲೀಜ್‌ಗೆ**
ಕೆ.ಟಿ.ಜೆ ನಗರ 16ನೇ ಕ್ರಾಸಿನಲ್ಲಿ Double Bedroom ಮನೆ ಬಾಡಿಗೆಗೆ/ಲೀಜ್‌ಗೆ ಇದೆ. ಸಂಪರ್ಕಿಸಿ
99452 31451
98453 24475

**WANTED**
C Programming Trainer
96207 28832

**ಡೂಪ್ಲೆಕ್ಸ್ ಮನೆ ಬಾಡಿಗೆಗೆ ಇದೆ**
ಪೂರ್ವ ದಿಕ್ಕಿನ 30×50 ಅಳತೆಯಲ್ಲಿರುವ 4 ಬೆಡ್ ರೂಂ ಹೊಂದಿರುವ ವಾಸ್ತು ಪ್ರಕಾರದ ಮನೆ ಶಕ್ತಿ ನಗರದಲ್ಲಿ ಬಾಡಿಗೆಗೆ ಇದೆ.
99026 42676
88847 08785

**ಸೈಟುಗಳು ಮಾರಾಟಕ್ಕಿವೆ**
ಪೂರ್ವ ದಿಕ್ಕು 30×45 ಸ್ಥಳ:ದಾವಣಗೆರೆ ಕುಂದುವಾಡ ಕೆರೆಯ ಹತ್ತಿರ. ಸಂಪರ್ಕಿಸಿ
78297 71485
94486 10791

**ಗ್ಲಾಸ್ ಶೆಲ್ಫ್‌ಗಳು ಮಾರಾಟಕ್ಕಿವೆ**
ಬಟ್ಟೆ ಅಂಗಡಿ- ಜ್ಯೂಯಲರಿ ಶಾಪ್, ಪೇಸ್ಟ್ರೀ, ಬೇಕರಿ ಕಾಸ್ಮೆಟಿಕ್ ಶಾಪ್, ಮೆಡಿಕಲ್ ಶಾಪ್- ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಿಗೆ ಅನುಕೂಲಕರವಾದ ಗ್ಲಾಸ್ ಶೇಲ್ಫ್, ಗ್ಲಾಸ್ ಸೇಲ್ಸ್ ಕೌಂಟರ್-ಗ್ಲಾಸ್ ಡೋರ್, ದೊಡ್ಡ ಅಳತೆಯ ಶೋಕೇಸ್ ಗ್ಲಾಸ್‌ಗಳು ಕನ್ನಡಿ ಮತ್ತು ಕ್ಯಾಶ್ ಕೌಂಟರ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
94480 46613

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರೋಡಿನಲ್ಲಿರುವ ಮನೆಗೆ ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ. ಸಂಪರ್ಕಿಸಿ
90351 11030

**ಶಿಕ್ಷಕಿಯರು ಬೇಕಾಗಿದ್ದಾರೆ**
1) D.Ed/ B.Ed/ NTC :-01
2) BA/ BCOM/ BSC:-01
ನಿಸರ್ಗ ಕಾನ್ವೆಂಟ್
HKR ಸರ್ಕಲ್ ಹತ್ತಿರ, ನಿಟುವಳ್ಳಿ, ಬ್ರಾಂಚ್, ದಾವಣಗೆರೆ.
ಸಂಪರ್ಕಿಸಿ: 89716 32458
98444 43374, 99862 26454

**ಗೋಡೌನ್ ಬಾಡಿಗೆಗೆ**
ಚೇತನಾ ಕಾಂಕ್ರೀಟ್ ಪ್ರಾಡಕ್ಟ್ಸ್ ಆವರಣದಲ್ಲಿ ,ಆವರಗೆರೆ, ಪಿ.ಬಿ.ರಸ್ತೆಗೆ ಹೊಂದಿಕೊಂಡಂತೆ 40x160 ಅಡಿ ಅಳತೆಯ ನೂತನವಾಗಿ ನಿರ್ಮಿಸಿರುವ ಗೋಡೌನ್ ಬಾಡಿಗೆಗಿದೆ.ಸಂಪರ್ಕಿಸಿ :
98809 33332

**ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)**
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**HOUSE RENT / LEASE**
2 BHK houses available at SANGAM APARTMENT Mahalakshmi Layout Near Kundavada Kere and GMIT, Davangere.
96388 17967, 73380 43912

**ಮನೆ ಮಾರಾಟಕ್ಕಿದೆ (ಹೊಸ ಮನೆ)**
ಎಸ್.ಎಸ್ ಹೈಟೆಕ್ ಹಾಸ್ಪಿಟಲ್ ಹಿಂಭಾಗ, ಸಿದ್ಧಗಂಗಾ ಬಡಾವಣೆ 30×40 North face ಹೊಸ ಮನೆ ಮಾರಾಟಕ್ಕಿದೆ.
94489 23785
95359 67499

**ಮಳಿಗೆ ಸಹಿತ ಗೋಡೌನ್ ಬಾಡಿಗೆಗೆ**
ಚೌಕಿ ಪೇಟೆ ಬಕ್ಕೇಶ್ವರ ದೇವಸ್ಥಾನದ ಹಿಂಭಾಗ ಮಳಿಗೆ ಸಹಿತ ಗೋಡೌನ್ ಬಾಡಿಗೆಗೆ ಇದೆ.
98800 35266
98443 55553

**ಮನೆ ಬಾಡಿಗೆಗೆ ಇದೆ**
MCC A' BLOCK, 12TH MAIN, #3714/72, ಸಿಂಗಲ್ ಬೆಡ್ ರೂಂ ಮನೆ ಎರಡನೇ ಮಹಡಿಯಲ್ಲಿ ಬಾಡಿಗೆ ಇದೆ. ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ವಿಚಾರಿಸಬಹುದು (ಬಕ್ಕೇಶ್ವರ ಹೈಸ್ಕೂಲ್ ಹತ್ತಿರ)
94817 20733, 08192-225181

**ಮನೆ ಬಾಡಿಗೆಗೆ ಇದೆ**
SS LAYOUT B BLOCK #4664-21/12(NEAR INDOOR STADIUM)4TH MAIN 5TH CROSS ಡಬಲ್ ಬೆಡ್ ರೂಮ್ ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆ ಇದೆ. ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ವಿಚಾರಿಸಬಹುದು(ಸಸ್ಯಹಾರಿಗಳಿಗೆ ಮಾತ್ರ)
94482 37274, 08192-225181

**JOB REQUIRED**
for Experienced Civil Engineers for contract work
Basic Salary Rs. 15,000/PM
Interview Date : 1.11.2021
Timings : 10.30 am to 1.00 pm
Contact : R.S. Enterprises
Near DC Office, Davangere.
78999 27528

**WANTED**
Computer Service, Electrician, Printer Service, CCTV Service, Engineer Require
R Computers
87221 13803, 89711 05878, 84311 11921

**ಸೈಟು ಮಾರಾಟಕ್ಕಿದೆ**
50×40 ಅಳತೆಯ ಪೂರ್ವ ದಿಕ್ಕಿನ ಸೈಟು ಕರಿಯಾಂಬಿಕ ದೇವಸ್ಥಾನದ ಹತ್ತಿರ ನಿಟುವಳ್ಳಿ, ದಾವಣಗೆರೆ. ಮಾರಾಟಕ್ಕಿದೆ.
90607 90962
86608 09919

**ಬೇಕಾಗಿದ್ದಾರೆ**
ಶ್ರೀ ಕಲ್ಲೇಶ್ವರ ವಿದ್ಯಾಸಂಸ್ಥೆ (ರಿ.)
ಮಾನಸ ಕಾನ್ವೆಂಟ್ ಸ್ಕೂಲ್, ತೋಳಹುಣಸೆ
ಟಿಸಿಹೆಚ್, ಬಿಇಡಿ., ಡಿಇಡಿ ಆದ ಶಿಕ್ಷಕಿಯರು ಮತ್ತು ಶಿಕ್ಷಕರು ಬೇಕಾಗಿದ್ದಾರೆ.
95354 61965, 90085 81336

**ಅಕೌಂಟೆಂಟ್ ಬೇಕಾಗಿದ್ದಾರೆ**
2-3 ವರ್ಷ ಅನುಭವಿರುವವರಿಗೆ ಆದ್ಯತೆ. ನೋಬಲ್ ಟಾರ್ಪಾಲಿನ್‌ನಲ್ಲಿನ ಕಂಪನಿ, ಗಾಂಧೀ ಸರ್ಕಲ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ.
90600 00643
98442 07697

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ: ಚಂದನಾ ಜೆರಾಕ್ಸ್ ಸೆಂಟರ್
4ನೇ ಮೇನ್, ಎಸ್ ಬಿ ಐ ಎಟಿಎಂ ಎದುರು, ರಾಂ & ಕೋ ಸರ್ಕಲ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ: 98443 54514
86608 86694

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಹ್ ಕಾಫಿ !! ರಿಚ್ ಕಾಫಿ !!**
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 16 ಕೀ.ಮಿ ಶಿಂಗ್ರಿಹಳ್ಳಿ ಹಳ್ಳಿಕೇರಿ ಹತ್ತಿರ 5 ಎಕರೆ ಆಪೋಸ್ ಮಾವಿನ ತೋಟ, ತೆಂಗು ಮತ್ತು ಅಡಿಕೆ, 2 ಎಕರೆ 16 ಸೆಂಟ್ಸ್‌ನಲ್ಲಿ ಫಸಲಿಗೆ ಬಂದಿರುತ್ತದೆ. 2 ಬೋರ್, ಡ್ರಿಪ್, ತಂತಿಬೇಲಿ, ರಸ್ತೆ ಇರುವ ತೋಟ ಮಾರಾಟಕ್ಕಿದೆ.
98809 33630

**WANTED SALES EXECUTIVE**
Apply or Mail your Bio Data to Parimala Coffee co. Mandipete Davangere.
Email:info@parimala Coffee.com

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಕ್ಲಿಯರೆನ್ಸ್ ಸೇಲ್**
Upto 30% ಡಿಸ್ಕೌಂಟ್
ಶೂಟಿಂಗ್ಸ್, ಶರ್ಟಿಂಗ್ಸ್
ನಾಕೋಡಾ'ಸ್ ಮೆನ್ಸ್ ಅವಿನ್ಯೂ
# 9/1-ಬಿ, ಚೌಕಿಪೇಟೆ, ದಾವಣಗೆರೆ.

**HOUSE FOR RENT**
#5628/D-23, 2BHK 2nd floor, 4th Main, 6th Cross (left) Near Indoor Neharu Stadium S.S. Badavane 'B' Block House Name SHIVARATNA (Brokers Not Allowed)
94489 29509

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ, ಅನುಭವವುಳ್ಳ ಎ.ಎನ್.ಎಂ ಆದವರು ಆಯಾಗಳು ಬೇಕಾಗಿದ್ದಾರೆ. ಈ ಕೆಳಗಿನ ವಿಳಾಸಕ್ಕೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ.
ವಿಳಾಸ : ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಚಿಗಟೇರಿ ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024 52312, 98450 35710

# ಹಣ ಹಂಚಿ ಮತ ಪಡೆಯುವುದು ಕಾಂಗ್ರೆಸ್‌ಗೆ ರಕ್ತಗತವಾಗಿದೆ



ದಾವಣಗೆರೆ, ಅ.23- ಕಾಂಗ್ರೆಸ್‌ನವರಿಗೆ ಪ್ರತಿ ಚುನಾವಣೆಗಳಲ್ಲಿ ಹಣ ಹಂಚಿ ಮತ ಪಡೆಯುವುದು ರಕ್ತಗತವಾಗಿ ಬಂದಿರುವುದರಿಂದ ಹಣ ಹಂಚುವುದನ್ನೇ ಜಪ ಮಾಡುತ್ತಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಕಾಂಗ್ರೆಸ್ ಗೆ ತಿರುಗೇಟು ನೀಡಿದರು.

ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಂಧಗಿ ಮತ್ತು ಹಾನಗಲ್ ಉಪ ಚುನಾವಣೆಯಲ್ಲಿ ಬಿಜೆಪಿಯವರು ಗೋಣಿ ಚೀಲದಲ್ಲಿ ತುಂಬಿ ಹಣ ಹಂಚುವ ಮೂಲಕ ಮತದಾರರನ್ನು ಸೆಳೆಯಲು ಮುಂದಾಗಿದ್ದಾರೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಸಂಸದರು, ಕಾಂಗ್ರೆಸ್‌ನವರಿಗೆ ಹಣ ಹಂಚುವುದೇ ಕಾಯಕವಾಗಿದೆ. ಹಾಗಾಗಿ ಇಂತಹ ಆರೋಪಗಳನ್ನು ಮಾಡುವಲ್ಲಿ ಅವರು ನಿಸ್ಸೀಮರು ಎಂದು ಟೀಕಿಸಿದರು.

ಚುನಾವಣೆಗಳು ಬಂದಾಗ ವಿರೋಧ ಪಕ್ಷಗಳು ಇಂತಹ ಆರೋಪಗಳನ್ನು ಮಾಡುವುದು ಸಹಜ. ನಾವು ಇಂತಹ ಆರೋಪಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಬಿ.ಎಸ್. ಯಡಿಯೂರಪ್ಪ ಮತ್ತು ನರೇಂದ್ರ ಮೋದಿ ಅವರ ಜನಪರ ಕಾರ್ಯಗಳನ್ನು ಜನರ ಮುಂದಿಟ್ಟು ಮತ ಕೇಳುವಂತಹ ಕೆಲಸ ಮಾಡುತ್ತಿದ್ದೇವೆ. ಸಿಂಧಗಿ ಮತ್ತು ಹಾನಗಲ್ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲ್ಲುವು ಖಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು.


**ಶೀಘ್ರದಲ್ಲೇ ಅಶೋಕ ರೈಲ್ವೆ ಅಂಡರ್ ಪಾಸ್:** ಅಶೋಕ ಚಿತ್ರಮಂದಿರದ ರೈಲ್ವೆ ಅಂಡರ್‌ಪಾಸ್ ನಿರ್ಮಾಣ ಸಂಬಂಧ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸಮಸ್ಯೆ ಬಗೆಹರಿಸಿ ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು ಎಂದು ಸಂಸದ ಸಿದ್ದೇಶ್ವರ ತಿಳಿಸಿದರು.

ಈ ಸಂಬಂಧ ಈಗಾಗಲೇ ಎರಡು ಬಾರಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆ. ಭೂ ಸ್ವಾಧೀನಕ್ಕೆ ಅಲ್ಲಿನ ಕೆಲವು ಭೂ ಮಾಲೀಕರು ತಕರಾರು ಮಾಡಿರುವುದರಿಂದ ಕಾಮಗಾರಿ ಆರಂಭಕ್ಕೆ ವಿಳಂಬವಾಗಿದೆ ಎಂದರು.

# ನಗರದಲ್ಲಿ ಇಂದು ರಂಗ ತರಬೇತಿ ಶಿಬಿರ

ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಹಾಗೂ ರಂಗ ಅನಿಕೇತನ ಇವರುಗಳ ಸಂಯುಕ್ತಾಶ್ರಯದಲ್ಲಿ ರಂಗ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 10 ಕ್ಕೆ ಐಟಿಐ ಕಾಲೇಜು ಆವರಣದಲ್ಲಿ ನಡೆಯಲಿದೆ. ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ರವಿಚಂದ್ರ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಬಸವರಾಜ್ ಹನು ಮಲಿ ಆಗಮಿಸುವರು. ಪ್ರಕಾಶ್ ಬಾದರದಿನ್ನಿ, ಶ್ರೀಮತಿ ಪ್ರತಿಭಾ ಪಿ. ದೊಗ್ಗಳ್ಳಿ, ಶ್ರೀಮತಿ ಸುಧಾ ಹೆಚ್.ಎನ್., ಮಹಾಂತೇಶ್ ಆದಿಮ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಆತ್ಮವಿಶ್ವಾಸದಿಂದ ಮಹಿಳಾ ಸಬಲೀಕರಣ: ಡಾ.ಪ್ರಭಾ



ಮಹಿಳಾ ಸಬಲೀಕರಣದ ನೈಪುಣ್ಯತಾ ಕೇಂದ್ರದ ಉದ್ಘಾಟನೆ

ದಾವಣಗೆರೆ, ಅ.23- ಮಹಿಳೆಯರು ಸಾಧನೆಯ ಸಂಕಲ್ಪ ತೊಟ್ಟು ಆತ್ಮವಿಶ್ವಾಸದಿಂದ ಹೆಜ್ಜೆ ಹಾಕಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯವಾಗಲಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಹನಿವೆಲ್ ಮತ್ತು ಐಸಿಟಿ ಅಕಾಡೆಮಿ ಇವರ ಸಹಯೋಗದಲ್ಲಿ ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಆರ್ಯಭಟ ಸಭಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ 'ಮಹಿಳಾ ಸಬಲೀಕರಣದ ನೈಪುಣ್ಯತಾ ಕೇಂದ್ರ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಿಳೆಯರು ಅಭಿವೃದ್ಧಿ ಹೊಂದುವಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಅದರ ಜತೆಗೆ ಸ್ವಯಂ ವಿಶ್ಲೇಷಣೆಗೆ ಒಳಪಟ್ಟು, ಆತ್ಮಸ್ಥೈರ್ಯದಿಂದ ಉದ್ಯೋಗಕ್ಕೆ ಬೇಕಾದ ಕೌಶಲ್ಯಗಳನ್ನು ಪಡೆದುಕೊಂಡು ಸಾಧನೆಯತ್ತ ಗಮನಹರಿಸಿ ಎಂದು ಸಲಹೆ ನೀಡಿದರು.

ಧ್ಯಾನ ನಿಮ್ಮ ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ. ಯೋಗ, ಧ್ಯಾನ, ಪ್ರಾಣಾಯಾಮಗಳನ್ನು ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕ ಸಮತೋಲನ ಕಾಪಾಡಿಕೊಂಡು ಸಾಧನೆಗೆ ಮುಂದಾಗಿ ಎಂದು ಕರೆ ನೀಡಿದರು.

ಹನಿವೆಲ್ ಮತ್ತು ಐಸಿಟಿ ಅಕಾಡೆಮಿಯಿಂದ ಸ್ಥಾಪಿಸ ಲಾಗುತ್ತಿರುವ ಮಹಿಳಾ ಸಬಲೀಕರಣ ನೈಪುಣ್ಯತಾ ಕೇಂದ್ರವು ವಿದ್ಯಾರ್ಥಿಗಳಿಗೆ ಕೌಶಲ್ಯ ಪಡೆಯಲು ಅನುಕೂಲವಾಗಲಿದ್ದು, ಕೌಶಲ್ಯ ತರಬೇತಿ ಕಾರ್ಯಕ್ರಮದ ಕೊನೆಯಲ್ಲಿ ಉದ್ಯೋಗದ ಸಹಾಯ ನೀಡುತ್ತಿರುವುದು ಅಭಿನಂದನಾರ್ಹವಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ಕೆ. ಎಸ್. ಬಸವರಾಜಪ್ಪ ಮಾತನಾಡಿ, ಮಹಿಳಾ ಸಬಲೀಕರಣಕ್ಕೆ ಶಿಕ್ಷಣ ಅತ್ಯಂತ ಪ್ರಮುಖವಾಗಿರುವ ಅಸ್ತ್ರ ಎನ್ನಬಹುದು. ಪ್ರತಿ ಮಹಿಳೆ ಶಿಕ್ಷಣ ಪಡೆದುಕೊಂಡಾಗ ಮಾತ್ರ ಆಕೆ ಆರ್ಥಿಕ ಸ್ವಾವಲಂಬಿತನ, ಬೆಳವಣಿಗೆಗೆ ಸಹಾಯವಾಗಲಿದೆ ಎಂದು ಹೇಳಿದರು.

ಶಿಕ್ಷಿತ ಮಹಿಳೆ ಕೇವಲ ಕುಟುಂಬದ ಏಳಿಗೆಗೆ ಮಾತ್ರವಲ್ಲ, ದೇಶದ ಅಭಿವೃದ್ಧಿಗೂ ಸಹಕಾರಿಯಾಗಬಲ್ಲಳು. ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ಶಿಕ್ಷಣ ಪಡೆಯುತ್ತಿದ್ದ ಹೆಣ್ಣುಮಕ್ಕಳ ಸಂಖ್ಯೆ ಪುರುಷರಿಗಿಂತ ಸಾಕಷ್ಟು ಕಡಿಮೆಯಿತ್ತು. ಆದರೆ ಈಗ ಎರಡು ಪಟ್ಟು ಹೆಚ್ಚಳವಾಗಿದೆ. ಶಿಕ್ಷಣದ ಬಗ್ಗೆ ಜಾಗೃತಿ ಮೂಡಿದಷ್ಟು ಮಹಿಳಾ ಸಬಲೀಕರಣ ಸಾಧ್ಯವಾಗಲಿದೆ ಎಂದು ಅಭಿಪ್ರಾಯಿಸಿದರು.

ಐಸಿಟಿ ಅಕಾಡೆಮಿ ಮುಖ್ಯಸ್ಥ ಎಲ್. ಸುರೇಶ್ ಬಾಬು ಮಾತನಾಡಿ, ಪ್ರಸ್ತುತ ಮಹಿಳಾ ಸಬಲೀಕರಣ ಅತ್ಯಂತ ಅವಶ್ಯಕವಾಗಿದ್ದು, ಮಹಿಳೆಯರ ಜ್ಞಾನ, ಸಹಕಾರವನ್ನು ಬಳಸಿಕೊಳ್ಳುವ ಮೂಲಕ ದೇಶದ ಅಭಿವೃದ್ಧಿಗೊಳಿಸಲು ಮುಂದಾಗಬೇಕಿದೆ. ಆ ನಿಟ್ಟಿನಲ್ಲಿ ಐಸಿಟಿ ಕಳೆದ 12 ವರ್ಷಗಳಿಂದ 700 ಕ್ಕೂ ಅಧಿಕ ಕಾರ್ಯಕ್ರಮಗಳನ್ನು ನೀಡಿ, ಸುಮಾರು 20 ಸಾವಿರಕ್ಕೂ ಅಧಿಕ ಮಹಿಳೆಯರಿಗೆ ಉದ್ಯೋಗ ನೀಡಿ ಮಹಿಳೆಯರ ಸ್ವಾಯತ್ತತೆಗೆ ಶ್ರಮಿಸುತ್ತಿದೆ ಎಂದು ಹೇಳಿದರು.

ಹನಿವೆಲ್ ಇಂಡಿಯಾದ ಅಧ್ಯಕ್ಷ ಆಶಿಶ್ ಗಾಯಕ್‌ವಾಡ್ ವಿಡಿಯೋ ಮೂಲಕ ಮಾತನಾಡಿ, ಹನಿವೆಲ್ ಸಂಸ್ಥೆಯು ಯುವ ಪೀಳಿಗೆಗೆ ವಿಶೇಷ ಕೌಶಲ್ಯ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸರಿಯಾದ ಜ್ಞಾನ ನೀಡಲು ಬದ್ಧವಾಗಿದ್ದು, ತಂತ್ರಜ್ಞಾನದ ಕಾರ್ಯಕ್ರಮಗಳು ಕೈಗೆಟುಕುವಂತಿದ್ದು, ಸಮಾಜದ ಎಲ್ಲ ವರ್ಗದವರಿಗೂ ಲಭ್ಯವಾಗುವ ಜತೆಗೆ ಉತ್ತಮ ವೃತ್ತಿ ಜೀವನ ನಿರ್ಮಿಸಲು ಅವಕಾಶವಾಗಬೇಕು ಎಂಬ ಉದ್ದೇಶದಿಂದ ನಮ್ಮ ಸಂಸ್ಥೆ ಎಲ್ಲರಿಗೂ ಉತ್ತಮ ಗುಣಮಟ್ಟದ ಕೌಶಲ್ಯ ಶಿಕ್ಷಣ ನೀಡುತ್ತಿವೆ ಎಂದರು.

ಕಾಲೇಜಿನ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಸಿ.ಆರ್. ನಿರ್ಮಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ, ವಿಷ್ಣುಪ್ರಸಾದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರೊ.ಸುಮನ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಎಂ. ವರ್ಷಾ ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ಶಿಲ್ಪ ನಿರೂಪಿಸಿದರು. ಮೇಘ ಮತ್ತು ನೇಹ ಪ್ರಾರ್ಥಿಸಿದರು.

# ರೋಗಮುಕ್ತ ಸಮಾಜ ನಿರ್ಮಾಣಕ್ಕೆ ಸ್ವಚ್ಚತೆಗೆ ಆದ್ಯತೆ ನೀಡಿ

## ಶಿರಮಗೊಂಡನಹಳ್ಳಿಯಲ್ಲಿ ಸ್ವಚ್ಛ ಸಂಕೀರ್ಣ ಉದ್ಘಾಟನೆಯಲ್ಲಿ ಡಾ. ಶಾಮನೂರು ಶಿವಶಂಕರಪ್ಪ



ದಾವಣಗೆರೆ, ಅ.23- ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ರೋಗಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ಮನಗಂಡಿರುವ ಸರ್ಕಾರಗಳು, ಇಂದು ದೇಶದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುತ್ತಿದ್ದು, ನಾಗರಿಕರು ಸರ್ಕಾರದ ಕಾರ್ಯಕ್ಕೆ ಬೆಂಬಲವಾಗಿರಬೇಕೆಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕರೆ ನೀಡಿದರು.

ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದ ರವೀಂದ್ರನಾಥ್ ಬಡಾವಣೆಯಲ್ಲಿ ಸ್ವಚ್ಛ ಸಂಕೀರ್ಣ ಉದ್ಘಾಟಿಸಿ, ಅವರು ಮಾತನಾಡಿದರು.

ಭಾರತ ದೇಶ ಶೇ.90 ರಷ್ಟು ಹಳ್ಳಿಗಳನ್ನು ಹೊಂದಿರುವ ದೇಶವಾಗಿದ್ದು, ಹಳ್ಳಿಗಳಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸುವ ಅವಶ್ಯಕತೆ ಇರುವುದರಿಂದ ಹಳ್ಳಿಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸರ್ಕಾರ ಆದ್ಯತೆ ನೀಡುತ್ತಿದ್ದು, ಗ್ರಾಮೀಣ ಭಾಗದ ಜನರೂ ಸಹ ಸ್ವಚ್ಛತೆಗೆ ಆದ್ಯತೆ ನೀಡಿ, ರೋಗಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಈ ಹಿಂದೆ ಗ್ರಾಮೀಣ ಭಾಗದಲ್ಲಿ ಎಲ್ಲೆಂದರಲ್ಲಿ ತಿಪ್ಪೆ ಹಾಕಿ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದವು. ಇದಕ್ಕೆ ಸರ್ಕಾರ ಪರಿಹಾರವಾಗಿ ಇಂತಹ ಸಂಕೀರ್ಣಗಳನ್ನು ನಿರ್ಮಿಸಿ, ರೋಗಮುಕ್ತ ಸಮಾಜಕ್ಕೆ ಮುಂದಾಗಿದ್ದು, ಕೇವಲ ದೊಡ್ಡ ನಗರಗಳಿಗೆ ಸೀಮಿತವಾಗಿದ್ದ ಇಂತಹ ಸಂಕೀರ್ಣಗಳು ಇಂದು ಗ್ರಾಮಾಂತರ ಪ್ರದೇಶಗಳಲ್ಲೂ ಆರಂಭಗೊಂಡಿದ್ದು, ಗ್ರಾಮೀಣ ಭಾಗದ ಜನರು ಗ್ರಾಮ ಪಂಚಾಯಿತಿಯೊಂದಿಗೆ ಕೈಜೋಡಿಸಿದರೆ ಕಾಂಪೋಜಿಟ್ ಗೊಬ್ಬರ ತಯಾರಾಗಲಿದ್ದು, ಇದರಿಂದ ರೈತರ ಬೆಳೆಗಳಿಗೂ ಅನುಕೂಲವಾಗಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಜಿ.ಸಿ. ನಿಂಗಪ್ಪ ಮಾತನಾಡಿ, ಗ್ರಾಮ ಪಂಚಾಯಿತಿಗಳಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಅನುದಾನ ಲಭ್ಯವಾಗುತ್ತಿದ್ದು, ಈ ಅನುದಾನಗಳನ್ನು ಬಳಸಿಕೊಂಡು ಉತ್ತಮ ಕೆಲಸಗಳನ್ನು ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಮಾಡಲಿ ಎಂದು ಆಶಿಸಿದರು.

ತಾಲ್ಲೂಕು ಪಂಚಾಯಿತಿ ಸದಸ್ಯರುಗಳಾದ ಎಂ.ಮಂಜಪ್ಪ, ಎ.ಬಿ.ಹನುಮಂತಪ್ಪ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ವಿನುತಾ ಎ.ಎಂ. ಸುರೇಶ್ ಬಾಬು ಮಾತನಾಡಿ, ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ಗ್ರಾಮಸ್ಥರು ಸಹಕರಿಸುವಂತೆ ಮನವಿ ಮಾಡಿ, ಸರ್ಕಾರ ಕೋವಿಡ್ ನೆಪವೊಡ್ಡಿ ಅನುದಾನ ನೀಡದ ಕಾರಣ, ಅನೇಕ ಗ್ರಾಮಾಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿದ್ದು, ಶಾಸಕರು ಅನುದಾನ ಒದಗಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಶ್ರೀಮತಿ ಲಲಿತಮ್ಮ ದೇವೇಂದ್ರಪ್ಪ, ಅಭಿವೃದ್ಧಿ ಅಧಿಕಾರಿ ಕಾತ್ಯಾಯಿನಿ, ಎಸ್.ಎಂ. ರುದ್ರೇಶ್, ಎಸ್.ಬಿ.ಚಂದ್ರಪ್ಪ, ಎಸ್.ಕೆ. ಮಾಲತೇಶ್, ವೀರೇಂದ್ರ ಪಾಟೀಲ್, ಶಶಿ, ಎ.ಕೆ.ನೀಲಪ್ಪ, ಗುಡ್ಡಪ್ಪ, ಮಲ್ಲಿಕಾರ್ಜುನ್, ಕೆ.ಎಸ್.ರೇವಣಸಿದ್ದಪ್ಪ, ಆರ್.ದಿನೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಚೆನ್ನಮ್ಮ ಸರ್ವಕಾಲಕ್ಕೂ ಪ್ರಸುತ



ಹರಪನಹಳ್ಳಿ ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಎಚ್.ಜಿ.ಚಂದ್ರಶೇಖರಯ್ಯ

ಹರಪನಹಳ್ಳಿ, ಅ.23- ಇಂದಿನ ಯುವತಿಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಆದರ್ಶವಾಗಬೇಕು ಎಂದು ಉಪವಿಭಾಗಾಧಿಕಾರಿ ಎಚ್.ಜಿ.ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಜನತೆ ರಾಣಿ ಚೆನ್ನಮ್ಮ ಬಗ್ಗೆ ವಿವರವಾಗಿ ತಿಳಿದುಕೊಳ್ಳಬೇಕು ಎಂದ ಅವರು, ಸರ್ವಕಾಲಕ್ಕೂ ಚೆನ್ನಮ್ಮ ಪ್ರಸುತ್ತವಾಗುತ್ತಾರೆ ಎಂದರು.

ಹೊನ್ನಾಳಿಯ ನಿವೃತ್ತ ಪ್ರಾಚಾರ್ಯ ಡಾ. ನಾ. ಕೊಟ್ರೇಶ್ ಉತ್ತಂಗಿ ಅವರು ಉಪನ್ಯಾಸ ನೀಡಿ, ಕಿತ್ತೂರು ರಾಣಿ ಚೆನ್ನಮ್ಮ ಯಾವುದೇ ಸಮಾಜದ ಐಕಾನ್ ಅಲ್ಲ. ರಾಷ್ಟ್ರಕ್ಕಾಗಿ ಹೋರಾಡಿದ ಮಹಿಳೆ ಎಂದ ಅವರು, ಅನೇಕ ಹೋರಾಟಗಾರರು, ಸಂತರು, ಒಂದೊಂದು ಜಾತಿ ಐಕಾನ್ ಆಗಿ ಬಿಟ್ಟಿರುವುದು ವಿಷಾದದ ಸಂಗತಿ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುವರ್ಣ ಆರುಂಡಿ ನಾಗರಾಜ್ ಮಾತನಾಡಿ, ಬ್ರಿಟೀಷರ ವಿರುದ್ಧ ಹೋರಾಡಿದ ಏಕೈಕ ಪ್ರಥಮ ಮಹಿಳೆ ಚೆನ್ನಮ್ಮ ಎಂದರು. ವೀರಶೈವ ಪಂಚಮಸಾಲಿ ಸಮಾಜದವರು ಎಲ್ಲಾ ಸಮುದಾಯದವರ ಜೊತೆ ಅನ್ಯೋನ್ಯವಾಗಿ ಬಾಳುತ್ತಾ ಬಂದಿದ್ದೇವೆ. ಅನ್ಯಾಯವನ್ನು ಮೆಟ್ಟಿ ನಿಲ್ಲುವ ಶಕ್ತಿ ನಮಗಿದೆ ಎಂದು ಹೇಳಿದರು.

ವೀರಶೈವ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಟೇಲ್ ಬೆಟ್ಟನಗೌಡ ಮಾತನಾಡಿ, ಬ್ರಿಟೀಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಸರ್ಕಾರಿ ಕಾರ್ಯಕ್ರಮಕ್ಕೆ ಆಹ್ವಾನ ಪತ್ರಿಕೆಯಲ್ಲಿ ಇರುವ ಜನಪ್ರತಿನಿಧಿಗಳಲ್ಲಿ ಪುರಸಭಾ ಉಪಾಧ್ಯಕ್ಷೆಯೊಬ್ಬರನ್ನು ಬಿಟ್ಟರೆ, ಎಲ್ಲರೂ ಗೈರು ಆಗಿರುವುದು ವಿಷಾದದ ಸಂಗತಿ ಎಂದು ಹೇಳಿದರು.

ಪುರಸಭಾ ಉಪಾಧ್ಯಕ್ಷರಾದ ನಿಟ್ಟೂರು ಭೀಮವ್ವ ಸಣ್ಣ ಹಾಲಪ್ಪ, ರಾಜ್ಯ ಸಾರಿಗೆ ನಿಗಮದ ನಿರ್ದೇಶಕ ಆರುಂಡಿ ನಾಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಮುಖಂಡ ಶಶಿಧರ ಪೂಜಾರ್, ಕಾನಹಳ್ಳಿ ರುದ್ರಪ್ಪ, ಪುಷ್ಪಾ ದಿವಾಕರ್, ಅಣ್ಣಪ್ಪ ಹಾರಕನಾಳು, ಕಲವೀರ ಕಳ್ಳಿ ಮನಿ, ವಕೀಲ ಎಂ.ಅಜ್ಜಣ್ಣ, ಚಂದ್ರಶೇಖರ್ ಪೂಜಾರ್, ಜೆ. ಓಂಕಾರಗೌಡ, ಹಾರಕನಾಳು ಪ್ರಕಾಶ್‌ಗೌಡ, ಬಾಗಳಿ ಕೊಟ್ರೇಶಪ್ಪ, ಪರಮೇಶ್ವರಪ್ಪ, ರುದ್ರಪ್ಪ, ಪೂಜಾರ್ ವಾಗೀಶ್, ಎಂ. ಶ್ರೀಮತಿ, ತಹಶೀಲ್ದಾರ್ ಎಲ್.ಎಂ. ನಂದೀಶ್, ಬಿಇಒ ವೀರಭದ್ರಯ್ಯ, ಪುರಸಭಾ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಇಓ ಪ್ರಕಾಶ್ ಉಪಸ್ಥಿತರಿದ್ದರು.

# ವೀರೇಶ್ವರ ಪುಣ್ಯಾಶ್ರಮದಲ್ಲಿ ಸೀಗೆ ಹುಣ್ಣಿಮೆ



ದಾವಣಗೆರೆ, ಅ.23- ನಗರಕ್ಕೆ ಸಮೀಪದ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಮೊನ್ನೆ ಸೀಗೆ ಹುಣ್ಣಿಮೆಯ ಕಾರ್ಯಕ್ರಮವು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಪುರಾಣ ಪ್ರವಚನಕಾರರಾದ ಮಹಾಂತೇಶ್ ಶಾಸ್ತ್ರಿಗಳು ಮಾತನಾಡಿ, ಹಾನಗಲ್ ಕುಮಾರಸ್ವಾಮಿಗಳ ಆಶೀರ್ವಾದದಿಂದ ಪಂಚಾಕ್ಷರಿ ಗವಾಯಿಗಳು ಮತ್ತು ಪುಟ್ಟರಾಜ ಗವಾಯಿಗಳು ಸಾಧನೆ ಮಾಡಿದ್ದನ್ನು ವಿವರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಆಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ, ಶಿಲಾಮಂಟಪದ ನಿರ್ಮಾಣ ಕಾರ್ಯ ಬಹುತೇಕ ಮುಗಿದಿದ್ದು, ಶೀಘ್ರವೇ ಉದ್ಘಾಟನೆ ಯಾಗಲಿದೆ ಎಂದು ತಿಳಿಸಿದರು. ಸೀಗೆ ಹುಣ್ಣಿಮೆಯ ಮಹತ್ವವನ್ನು ವಿವರಿಸಿದ ಆವರಗೊಳ್ಳ ಸ್ವಾಮೀಜಿ, ಭೂಮಿ ತಾಯಿಯ ಋಣವನ್ನು ಸ್ಮರಿಸಿ, ರೈತರು ಸೀಗೆ ಹುಣ್ಣಿಮೆಯನ್ನು ಆಚರಿಸುತ್ತಾರೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಶ್ರಮದ ಸಹ ಕಾರ್ಯದರ್ಶಿ ಜೆ.ಎನ್.ಕರಿಬಸಪ್ಪ, ನಿರ್ದೇಶಕ ಎ.ಎಸ್.ಮೃತ್ಯುಂಜಯ, ಬಸವನಗೌಡರು, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಮತ್ತಿತರರು ಆಗಮಿಸಿದ್ದರು. ಆರಂಭದಲ್ಲಿ ಆಶ್ರಮದ ಮಕ್ಕಳಿಂದ ಪ್ರಾರ್ಥನೆಯಾಯಿತು. ಅಮರಯ್ಯ ಸ್ವಾಗತಿಸಿದರು.

# ವೀರಶೈವ ಮಹಾಸಭಾದಿಂದ ಚೆನ್ನಮ್ಮ ಜಯಂತಿ



ದಾವಣಗೆರೆ, ಅ.23 - ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಯುವ ಘಟಕದ ವತಿಯಿಂದ ನಡೆದ ಕಿತ್ತೂರು ರಾಣಿ ಚೆನ್ನಮ್ಮನವರ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಉದ್ಘಾಟಿಸಿದರು.

ಯುವ ಘಟಕದ ಅಧ್ಯಕ್ಷ ಆರ್.ಟಿ ಪ್ರಶಾಂತ್ ದುಗ್ಗತ್ತಿಮಠ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಮುಖಂಡರುಗಳಾದ ಅಥಣಿ ಗುರುರಾಜ್, ಸೋಗಿ ಶಾಂತಕುಮಾರ್, ಅಶೋಕ್ ಗೋಪನಾಳ್, ಶಂಕರ್ ಗೌಡ ಬಿರಾದಾರ್, ಸೋಗಿ ಗುರುರಾಜ್, ಪ್ರಧಾನ ಕಾರ್ಯದರ್ಶಿ ದೇವರಮನಿ ಯೋಗೀಶ್ ಮತ್ತು ಇತರರು ಉಪಸ್ಥಿತರಿದ್ದರು.

ರಾಣಿ ಚೆನ್ನಮ್ಮನವರ ಕುರಿತು ಶ್ರೀಮತಿ ಶಾರದಮ್ಮನವರು ವಿಶೇಷ ಉಪನ್ಯಾಸ ನೀಡಿದರು.

# ಕರ್ನಾಟಕ ರಾಜ್ಯೋತ್ಸವ : ವಿವಿಧ ಸ್ಪರ್ಧೆಗಳು

ದಾವಣಗೆರೆ, ಅ.23- ಕರ್ನಾಟಕ ರಾಜ್ಯೋತ್ಸವದ ಸಂಭ್ರಮದಲ್ಲಿ ಆನ್‌ಲೈನ್‌ನಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಕನ್ನಡ ನೆಲ, ಜಲ, ಭಾಷೆಯ ಬಗ್ಗೆ ಭಾಷಣ ಸ್ಪರ್ಧೆ, ನೃತ್ಯ, ಕನ್ನಡದ ಪ್ರಸಿದ್ಧ ಕವಿಗಳ ಕವನ ವಾಚನ ಸ್ಪರ್ಧೆ, ನಾಡು - ನುಡಿ ಕುರಿತಾದ ಹಾಡಿನ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಮೊ. 94487-86664 ರಲ್ಲಿ ಸಂಪರ್ಕಿಸಬಹುದು ಎಂದು ಕನ್ನಡ ಪರ ಚಿಂತಕ ಎಲ್.ಜಿ.ಮಧುಕುಮಾರ್ ಬಸವಾಪಟ್ಟಣ ತಿಳಿಸಿದ್ದಾರೆ.

# ಪಿಜಿಸಿಇಟಿ ಪರೀಕ್ಷೆ

ದಾವಣಗೆರೆ, ಅ. 23- ಜಿಎಂಐಟಿ ಎಂಬಿಎ ವಿಭಾಗದಿಂದ ಎಂಬಿಎ ಪಿಜಿಸಿ ಇಟಿ ಪರೀಕ್ಷೆ ತರಬೇತಿಯು ನಾಡಿದ್ದು ದಿ.25 ರಿಂದ ನಡೆಯಲಿದೆ.

ವಿದ್ಯಾರ್ಥಿಗಳು ಹೆಸರು ವಾಟ್ಸಾಪ್ಪ್ ನಂಬರ್ ಅನ್ನು INTERESTED TO ATTEND CRASH COURSE ಎಂದು ಟೈಪ್ ಮಾಡಿ, 99009 82156, 89712 71712, 91082 45365 97399 77751ಕ್ಕೆ ಮೊ. ಎಸ್‌ಎಂಎಸ್ / ವಾಟ್ಸಪ್ ಕಳುಹಿಸಬೇಕು.


SHREE VEERABHADRESHWARA CONSULTANCY SERVICES

CIVIL ENGINEERS AND DEVELOPERS

# 80/18, Opp. P.J. Lodge, A.V.K. College Road, P.J. Extension, DAVANGERE-577 002.

Cell: 9916173399, 9343277422

WE OFFER THE FOLLOWING SERVICE :

- CONSTRUCTION CONSULTANTS
- ARCHITECTURAL VASTU PLAN
- ESTIMATION & VALUATION
- 3D VIEW & INTERIOR DESIGN .
- ASSISTANCE FOR BUILDING LICENSE PLAN
- ASSISTANCE FOR LAY OUT DESIGN & LAND DEVELOPMENT
- A4 TO AO PLOTTER PRINTS & BLUE PRINTS


# ಕೋವಿಡ್ ನಷ್ಟ ಭರಿಸದಿದ್ದರೆ ಹೋರಾಟ

ದಾವಣಗೆರೆ, ಅ.23- ಕೋವಿಡ್‌ನಿಂದಾಗಿ ಜನಸಾಮಾನ್ಯರಿಗಾದ ಅರ್ಧದಷ್ಟು ನಷ್ಟ ಭರಿಸಬೇಕು. ಇಲ್ಲದಿದ್ದರೆ ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು ಎಂದು ಸಾಮಾಜಿಕ ಅಭಿವೃದ್ಧಿ ರಂಗದ ಸಂಸ್ಥಾಪಕ ಅಧ್ಯಕ್ಷ ಟಿ.ಎಲ್. ರಂಗನಾಥ್ ಎಚ್ಚರಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಸಂಕಷ್ಟದಲ್ಲೂ ಪ್ರಧಾನಿ ಮೋದಿ ಜಾಹೀರಾತು ನೀಡಿ, ಪ್ರಚಾರಕ್ಕಾಗಿ ಸಾಕಷ್ಟು ಹಣ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅದೇ ಹಣವನ್ನು ಜನ ಸಾಮಾನ್ಯರಿಗೆ ನೀಡಲಿ. ಜನರ ಸಂಕಷ್ಟ ಪರಿಹರಿಸದಿದ್ದರೆ ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಲಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ ಬೆಳೆಗಳಿಗೆ ಎಂ.ಎಸ್.ಪಿ. ಬೆಲೆ ಘೋಷಿಸಿದ್ದರೂ ಕಡಿಮೆ ದರದಲ್ಲಿ ಖರೀದಿ ಮಾಡಲಾಗುತ್ತಿದೆ. ಇದರಿಂದಾಗಿ ಭತ್ತ ಹಾಗೂ ಮೆಕ್ಕೆಜೋಳದಿಂದ ಜಿಲ್ಲೆಯ ರೈತರಿಗೆ 5 ಸಾವಿರ ಕೋಟಿ ರೂ. ನಷ್ಟವಾಗಿದೆ. ಇದನ್ನು ಭರಿಸುವವರು ಯಾರು? ಎಂದು ಪ್ರಶ್ನಿಸಿದರು.

ಯಾವೊಬ್ಬ ಜನಪ್ರತಿನಿಧಿಗಳು ರೈತರ ಪರವಾಗಿ ಮಾತನಾಡಿಲ್ಲ. ಎಂ.ಎಸ್.ಪಿ. ಬೆಲೆಗಿಂತ ಕಡಿಮೆ ದರದಲ್ಲಿ ಖರೀದಿಸುವ ವರ್ತಕರ ಮೇಲೆ ಕ್ರಿಮಿನಲ್ ಕೇಸ್ ಹಾಕಲಿ ಎಂದು ಸವಾಲು ಹಾಕಿದರು.

ರೈತ ಮುಖಂಡ ಬಸವರಾಜಪ್ಪ ಮಾತನಾಡಿ, ಹೊನ್ನಾಳಿ ತಾಲ್ಲೂಕಿನಲ್ಲಿ ಜಾನುವಾರುಗಳು ಕಾಲು ಬಾಯಿ ರೋಗಕ್ಕೆ ತುತ್ತಾಗಿ ಸಾವನ್ನಪ್ಪುತ್ತಿದ್ದರೂ ಲಸಿಕೆ ಹಾಕಲು ಸಾಧ್ಯವಾಗಿಲ್ಲ ಎಂದು ಆರೋಪಿಸಿದರು. ಎರಡು ದಿನಗಳೊಳಗೆ ಲಸಿಕೆ ಹಾಕಬೇಕು. ರೋಗದಿಂದ ಮೃತಪಟ್ಟ ದನಕರುಗಳಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ದೊಡ್ಡೇರಿ ನಾಗರಾಜಪ್ಪ ಮಾತನಾಡಿ, ಸರ್ಕಾರ ಪೆಟ್ರೋಲ್‌ಗೆ 40 ರೂ., ಡೀಸೆಲ್‌ಗೆ 35 ರೂ. ಹಾಗು ಅಡುಗೆ ಅನಿಲಕ್ಕೆ 350 ರೂ.ಗಳನ್ನು ಕೇಂದ್ರ ಸರ್ಕಾರವೇ ನಿಗದಿಪಡಿಸಬೇಕು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಠದ ಬಸವರಾಜಪ್ಪ, ಕೆ. ಸಿ. ಬಸಪ್ಪ, ಜಯಾನಾಯ್ಕ, ಚಂದ್ರಶೇಖರ್, ಅಹ್ಮದ್ ಷರೀಫ್ ಇತರರು ಉಪಸ್ಥಿತರಿದ್ದರು.


ಡಿಸ್ಕೌಂಟ್ ಧಮಾಕ

ನಮ್ಮೆಲ್ಲಾ ಗ್ರಾಹಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಪ್ರಯುಕ್ತ

ಭಾರೀ ರಿಯಾಯಿತಿ ದರದಲ್ಲಿ ಮಾರಾಟ

ದಿನಾಂಕ 14.10.2021 ರಿಂದ 24.10.2021 ರವರೆಗೆ ಮಾತ್ರ



ನಂದಿ ಇಂಟೀರಿಯರ್ಸ್ & ಡಿಸೈನರ್ಸ್

Exclusive Interior Designers For Your Fantasy


NANDI INTERIORS & DESIGNERS

# 596 JAGALUR ROAD, YELEBETHUR VILLAGE, DAVANGERE.

+91 96202 31800, /01/02/03/04, 08192 297288, web www.nandiinteriorsanddesigner.com



ಜಿಲ್ಲಾ ಜಾಗೃತ ಸಭೆ ಯಶಸ್ವಿಯಾಗಲಿ



ದಾವಣಗೆರೆಯಲ್ಲಿ ದಿ: 24.10.2021ರ ಭಾನುವಾರ ನಡೆಯಲಿರುವ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಜಾಗೃತ ಸಭೆ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

- **ಬಿ.ಕೆ.ಮಂಜುನಾಥ ಮಾಗಾನಹಳ್ಳಿ**, ಜಿಲ್ಲಾಧ್ಯಕ್ಷರು, ಗಂಗಾಮತ ಸಮಾಜ
- **ಉದಯಶಿವಕುಮಾರ್**, ಮುಖಂಡರು, ಗಂಗಾಮತ ಸಮಾಜ
- **ಎಸ್. ಪರಮೇಶ್**, ಹಿರಿಯ ವಕೀಲರು, ಗಂಗಾಮತ ಸಮಾಜ
- **ಎ.ವೈ.ಪ್ರಕಾಶ್**, ವಕೀಲರು
- **ಕೆ.ಶಿವಮೂರ್ತಿ**, ಮುಖಂಡರು, ಗಂಗಾಮತ ಸಮಾಜ
- **ಬಾಡದ ಆನಂದರಾಜ್**, ಅಧ್ಯಕ್ಷರು, ಶೋಷಿತ ವರ್ಗಗಳ ಒಕ್ಕೂಟ
- **ಗೋರಪ್ಪರ ಮಾಲತೇಶ**
- **ಜೆ. ಉಮೇಶ್ ಶಿರಮಗೊಂಡನಹಳ್ಳಿ**, ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಗಂಗಾಮತಸ್ಥರ ಸಮಾಜ, ದಾವಣಗೆರೆ.

# ರೋಟರ್‍ಯಾಕ್ಟ್ ವತಿಯಿಂದ ಪೋಲಿಯೋ ಲಸಿಕೆ ಕಾರ್ಯಕ್ರಮ

ದಾವಣಗೆರೆ ರೋಟರ್‍ಯಾಕ್ಟ್ ಕ್ಲಬ್ ಅಕ್ಟೋಬರ್ 24 ಭಾನುವಾರ 'ವಿಶ್ವ ಪೋಲಿಯೋ ದಿನ'ದ ಅಂಗವಾಗಿ ಮಂಡಿಪೇಟೆಯಲ್ಲಿರುವ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಸಹಕಾರದೊಂದಿಗೆ ಪಲ್ಸ್ ಪೋಲಿಯೋ ಪ್ರತಿರಕ್ಷಣೆ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದೆ ಎಂದು ಕ್ಲಬ್‌ನ ನೂತನ ಅಧ್ಯಕ್ಷರಾದ ಸಹನಾ ದರ್ಶನ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 10 ಗಂಟೆಯಿಂದ ಆರಂಭವಾಗುವ ಈ ಕಾರ್ಯಕ್ರಮದಲ್ಲಿ ನಗರದ ಹಾಗೂ ಸುತ್ತಮುತ್ತಲಿನ ಪೋಷಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿ ಕೊಳ್ಳಬಹುದಾಗಿದೆ ಎಂದು ರೋಟರ್‍ಯಾಕ್ಟ್ ಕಾರ್ಯದರ್ಶಿ ವಿನಾಯಕ ಎಸ್.ಸೊಕ್ಕಿ ತಿಳಿಸಿದ್ದಾರೆ.

## ರಾಷ್ಟ್ರೀಯ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆ



ಹರಿಹರ, ಅ.23- ಗೋವಾದ ಮನೋಹರ್ ಪಾರಿಕ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಬರುವ ನವೆಂಬರ್ 16 ರಿಂದ 20 ರವರೆಗೆ ನಡೆಯಲಿರುವ 30 ನೇ ಪುರುಷರ, ಮಹಿಳೆಯರ, ಕಿರಿಯರ, ಹಿರಿಯರ ಮತ್ತು ಮಾಸ್ಟರ್ಸ್ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್-2021 ಸ್ಪರ್ಧೆಗೆ ದಾವಣಗೆರೆಯ ಶ್ರೀ ಬೀರಲಿಂಗೇಶ್ವರ ಕ್ರೀಡಾ ಶಾಲೆಯ ಕ್ರಿಡಾಪಟು ಹರಿಹರದ ಎಚ್. ದೇವೇಂದ್ರಪ್ಪ ಆಯ್ಕೆಯಾಗಿದ್ದಾರೆ.

ದೇವೇಂದ್ರಪ್ಪ, 2011 ರಲ್ಲಿ ಜಪಾನ್ ದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ, ವಿಶೇಷ ಬಹುಮಾನ ಪಡೆದಿದ್ದಾರೆ.

## ನಗರದಲ್ಲಿ ಇಂದು ಪೊಲೀಸ್ ಕಾನ್ಸ್‌ಟೇಬಲ್ ಲಿಖಿತ ಪರೀಕ್ಷೆ

ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ) (ಎನ್‌ಕೆಕೆ ಮತ್ತು ಕೆಕೆ) -3533 ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ರುವ ಅಭ್ಯರ್ಥಿಗಳಿಗೆ ಇಂದು ಮಧ್ಯಾಹ್ನ 12 ರಿಂದ 1.30 ರವರೆಗೆ ಲಿಖಿತ ಪರೀಕ್ಷೆ 15 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳ ಬೇಕು ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.




Reg.No.: DR:DVG:RSR/25770/2000-01 EST : 04.08.2000

**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**

"ಶಿವಗೌರಿ", ಮೊದಲನೇ ಮಹಡಿ, ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಹತ್ತಿರ, ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6. ಫೋ : 08192-355150

ಯಶಸ್ವಿ 22ನೇ ವರ್ಷದ ಸೇವೆಯಲ್ಲಿ

**2020-21ನೇ ಸಾಲಿನ ವಾರ್ಷಿಕ ಮಹಾಸಭೆ ನೋಟಿಸ್**

ಮಾನ್ಯ ಸಂಘದ ಸದಸ್ಯರುಗಳೇ,

ನಮ್ಮ ಸಂಘದ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 29-10-2021ನೇ ಶುಕ್ರವಾರ ಬೆಳಿಗ್ಗೆ 11-30ಕ್ಕೆ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನ, ಎಂ.ಸಿ.ಸಿ. 'ಎ' ಬ್ಲಾಕ್, ರಾಮಕೃಷ್ಣ ಆಶ್ರಮದ ಹತ್ತಿರ, ದಾವಣಗೆರೆಯಲ್ಲಿ ಕರೆಯಲಾಗಿದೆ. ಸಂಘದ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.

ಜೆ. ಚೆಲುವಪ್ಪ ಅಧ್ಯಕ್ಷರು

ಎನ್.ಜಿ. ಮೋಹನ್ ಉಪಾಧ್ಯಕ್ಷರು

**ಆಡಳಿತ ಮಂಡಳಿ ಸದಸ್ಯರು**

ಜೆ.ಕೆ. ಶಿವಾನಂದ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಹೆಚ್.ಬಿ. ಗೋಣಪ್ಪ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಬಿ.ರಮೇಶ್(ಪಿ.ಜೆ) ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ವಿ. ಮಂಜುನಾಥ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ರಮೇಶ್ ಬಿ. ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಎನ್. ನಿಂಗಪ್ಪ ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಹೆಚ್.ಸಿ. ವಾಣಿ ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಸುನಂದ ಮಂಜುನಾಥ ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಡಿ.ಬಿ. ಚಂದ್ರಪ್ಪ ನಿರ್ದೇಶಕರು
ಎಸ್.ರವಿಸ್ವಾಮಿ ವಿಶೇಷ ಆಹ್ವಾನಿತರು
ಶ್ರೀಮತಿ ವಂದನಾ ಹೆಚ್.ಎಂ. ವಿಶೇಷ ಆಹ್ವಾನಿತರು
ದಯಾನಂದ ದೊಡ್ಡಮನಿ ಕಾರ್ಯದರ್ಶಿ ಎಂ.ಎ.

**ಸಂಘದ ಆರ್ಥಿಕ ಪ್ರಗತಿಯ ಪಕ್ಷಿನೋಟ**

| ವಿವರಗಳು | 2017-2018 | 2018-2019 | 2019-2020 | 2020-2021 |
|---|---|---|---|---|
| ಸಂಘದ ಷೇರು ಬಂಡವಾಳ | 72,73,000-00 | 87,78,000-00 | 96,84,500-00 | 1,00,66,000-00 |
| ಸಂಘದ ಸದಸ್ಯರ ಸಂಖ್ಯೆ | 2142 | 2908 | 3106 | 3101 |
| ಠೇವಣಿಗಳು | 12,35,61,604-06 | 15,65,94,984-08 | 16,75,95,236-08 | 18,84,79,077-68 |
| ಸಾಲ ಮತ್ತು ಮುಂಗಡಗಳು | 10,36,33,195-00 | 12,64,40,409-00 | 15,55,80,428-00 | 16,39,73,788-00 |
| ನಿಧಿಗಳು | 1,21,11,718-59 | 1,34,51,473-36 | 1,50,90,778-00 | 1,74,26,968-74 |
| ಸಂಘದ ದುಡಿಯುವ ಬಂಡವಾಳ | 14,19,46,322-00 | 17,89,05,127-00 | 19,49,03,194-00 | 21,94,24,447-00 |
| ವಿನಿಯೋಗ (ಹೂಡಿಕೆಗಳು) | 3,96,14,792-00 | 4,75,69,504-00 | 3,19,32,036-00 | 4,98,85,549-00 |
| ಲಾಭ | 25,75,734-70 | 27,85,287-57 | 31,48,506-76 | 35,19,262-10 |
| ಲಾಭಾಂಶ | 12% | 12% | 12% | 14% ಉದ್ದೇಶಿತ |

ವಿ.ಸೂ.: ನಮ್ಮ ಸಂಘದ ಸದಸ್ಯರುಗಳಿಗೆ ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದೆ. ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ, ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ ಮಾಡಲಾಗಿದೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte